ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 39 ಅಕ್ಟೋಬರ್ 3, 1982 ಬೆಲೆ 100 ಪೈಸೆ

ಜಾಗತಿಕ ಶಾಂತಿಯಲ್ಲಿ ಭಾರತೀಯ ಜನತೆ

ಇಂದು (ಅಕ್ಟೋಬರ್ 4) ದೆಹಲಿಯಲ್ಲಿ ನಡೆಯಲಿರುವ ಶಾಂತಿ ಯಾತ್ರೆಗೆ ಆರು ಪಕ್ಷಗಳು ನೀಡಿರುವ ಜಂಟೀ ಕರೆಯು ನ್ಯೂಕ್ಲಿಯರ್ ಯುದ್ಧಕ್ಕಾಗಿ ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಸಿದ್ಧತೆಗಳನ್ನು ಕೊನೆಗೊಳಿಸಬೇಕೆಂದು, ಪಶ್ಚಿಮ ಯುರೋಪ್, ಅಮೇರಿಕಾ, ಜಪಾನ್ ಮತ್ತಿತರ ಬಂಡವಾಳಶಾಹೀ ರಾಷ್ಟ್ರಗಳಲ್ಲಿ ಹಾಗೂ ಸಮಾಜವಾದೀ ದೇಶಗಳಲ್ಲಿ ಜನತೆಯು ನಡೆಸುತ್ತಿರುವ ಹೋರಾಟದೊಂದಿಗೆ ಭಾರತದ ಜನತೆ ಕೂಡ ಸೇರಿಕೊಳ್ಳುವ ಅವಕಾಶವನ್ನು ಸೃಷ್ಟಿಸಲಿದೆ.

(8ನೇ ಪುಟ ನೋಡಿ)



‘ಶಾಂತಿಯಾತ್ರೆ’ ವಿಶೇಷಾಂಕ

ಚರಿತ್ರೆಯಲ್ಲಿ ಯುದ್ಧಗಳು

ವಸಾಹತುಶಾಹಿ ಯುದ್ಧಗಳು

ಚಿನ್ನದ ಮೇಲಿನ ಆಸೆಯಿಂದ ಅನೇಕ ಅನ್ವೇಷಕರು ಹೊಸ ಪ್ರದೇಶಗಳನ್ನು ಕಂಡುಹಿಡಿಯತೊಡಗಿದರು. 15ನೇ ಶತಮಾನದ ಮಧ್ಯದಲ್ಲಿ ಪೋರ್ಚುಗೀಸ್ ಅನ್ವೇಷಣಾ ತಂಡವು ಆಫ್ರಿಕಾಕ್ಕೆ ಹೊರಟಾಗ ಪೋರ್ಚುಗಲ್ ರಾಜ ಹೆನ್ರಿ ಅದಕ್ಕೆ ಬೆಂಬಲ ನೀಡಿದ. ಮಧ್ಯ ಆಫ್ರಿಕಾದ ಒಳ ಪ್ರದೇಶದಲ್ಲಿ ನದೀ ಮೂಲವೊಂದರ ಬಳಿ ಇರಬಹುದಾದ ಚಿನ್ನದ ಗಣಿಯನ್ನು ಪತ್ತೆ ಹಚ್ಚುವುದು ಆ ತಂಡದ ಮುಖ್ಯ ಉದ್ದೇಶವಾಗಿತ್ತು. ದಂತ, ಸಂಬಾರು ಪದಾರ್ಥಗಳು ಮತ್ತು ಗುಲಾಮರು ಇತ್ಯಾದಿ ರೂಪದ ಸಂಪತ್ತನ್ನು ಪಡೆಯುವುದು ಈ ಅನ್ವೇಷಣೆಗಳ ಇತರ ಉದ್ದೇಶಗಳಾಗಿದ್ದವು.

ಈ ಸಮಯದಲ್ಲಿ ವ್ಯಾಪಾರ ಮತ್ತು ಉದ್ಯಮಗಳಲ್ಲಿ ತೀವ್ರ ಬೆಳವಣಿಗೆಯುಂಟಾಯ್ತು. ಹೀಗಾಗಿ ಪೂರ್ವ ದೇಶಗಳಲ್ಲಿನ ಅಪಾರ ಸಂಪತ್ತನ್ನು ದೋಚುವುದಕ್ಕಾಗಿ ಹೊಸ ವ್ಯಾಪಾರೀ ಮಾರ್ಗಗಳನ್ನು ತೆರೆಯಲಾಯ್ತು. ಇಂಗ್ಲೆಂಡ್, ಫ್ರಾನ್ಸ್ ಮತ್ತು ಸ್ಪೇನ್ ಮುಂತಾದ ಪಾಶ್ಚಿಮಾತ್ಯ ರಾಷ್ಟ್ರಗಳು ಅನ್ವೇಷಣೆಯ ಮೂಲಕ ಮತ್ತು ಮೂಲನಿವಾಸಿಗಳ ಮೇಲಿನ ವಿಜಯ ಅಥವಾ ಒಪ್ಪಂದದ ಮೂಲಕ ವಿಶ್ವದ ಎಲ್ಲೆಡೆ ತಮ್ಮ ವಸಾಹತುಗಳನ್ನು ಸ್ಥಾಪಿಸತೊಡಗಿದರು.

ಯುರೋಪಿನಲ್ಲಿ ಯುದ್ಧದ ಸ್ಥಿತಿಯ ಮೇಲೆ ವ್ಯಾಪಾರೀ ಆರ್ಥಿಕ ಸಿದ್ಧಾಂತದ ಪ್ರಭಾವ ಹೆಚ್ಚಾಯಿತು. ಮತ್ತು ವ್ಯಾಪಾರೀ ಮನೋಭಾವದಿಂದಾಗಿ ಯುದ್ಧಗಳ ಸಂಭವಿಕೆ ಹೆಚ್ಚಾಯ್ತು. ಪ್ರಪಂಚದಾದ್ಯಂತ ಹೆಚ್ಚೆಚ್ಚು ಸಂಪತ್ತನ್ನು ಪಡೆಯುವ ಅಗತ್ಯ ಉಂಟಾದ್ದರಿಂದ, ಬೇರೆ ರಾಷ್ಟ್ರಗಳ ವಶದಲ್ಲಿದ್ದ ವಸಾಹತುಗಳನ್ನು ನಿರ್ಮೂಲಮಾಡುವ ಇಲ್ಲವೆ ಸ್ವಾಧೀನಪಡಿಸಿಕೊಳ್ಳಲು ಹಾತೊರೆಯಲಾಯ್ತು. ಯುರೋಪಿನ ವಿವಿಧ ಶಕ್ತಿಗಳ ನಡುವಿನ ವರ್ಗ ಮತ್ತು ವಸಾಹತುಶಾಹಿ ಆಸಕ್ತಿ ಘರ್ಷಣೆಯಿಂದ ಪ್ರಪಂಚದೆಲ್ಲೆಡೆ ಯುದ್ಧಗಳ ಸರಣಿ ಉಂಟಾಯಿತು.

ಸಂಪತ್ತಿಗೆ ಹೆಸರುವಾಸಿಯಾಗಿದ್ದ ಭಾರತವನ್ನು ಕಂಡು ಹಿಡಿಯಲು ಸ್ಪೇನರು ಕೊಲಂಬಸ್‌ನನ್ನು ಕಳುಹಿಸಿದಾಗ ಅವನು ಅದುವರೆಗೆ ಅಪರಿಚಿತವಾಗಿದ್ದ ಅಮೇರಿಕಾವನ್ನು ಕಂಡು ಹಿಡಿದ (1492). ಸ್ಪೇನರ ಹಿಂದೆಯೇ ಪೋರ್ಚುಗೀಸರು ಅಮೇರಿಕಕ್ಕೆ ಧಾವಿಸಿದರು.

1521ರಲ್ಲಿ ಸ್ಪೇನರು ಮೆಕ್ಸಿಕೋವನ್ನು ಕೈವಶಪಡಿಸಿಕೊಂಡಾಗ 3 ವರ್ಷಗಳ ಧೀರ್ಘಕಾಲ ಯುದ್ಧ ನಡೆಯಿತು, ಫಲವಾಗಿ ಅಜ್‌ಟೆಕರ ಉತ್ತಮಸಂಸ್ಕೃತಿ ನಾಶವಾಗಿ ಸ್ಪೇನರಿಗೆ ಚಿನ್ನ ಬೆಳ್ಳಿಯ ಸಂಪತ್ತು ದೊರಕುವಂತಾಯಿತು. 1530ರಲ್ಲಿ ಸ್ಪೇನರ ಪೆರುವಿನ ಮೇಲಿನ ದಂಡಯಾತ್ರೆಯಿಂದ ಭವ್ಯವಾದ 'ಇಂಕ' ನಾಗರೀಕತೆ ನಿರ್ನಾಮವಾಯಿತು. ಇದರ ಹೋರಾಟ ಮುಗಿಯಲು ಅನೇಕ ವರ್ಷಗಳು ತಗುಲಿದವು. ಕೊಳ್ಳೆಹೊಡೆದ ಸಂಪತ್ತನ್ನು ಹಂಚಿಕೊಳ್ಳಲು ಸ್ಪೇನರು ತಮ್ಮ ತಮ್ಮೊಳಗೆ ಹೊಡೆದಾಡಿಕೊಂಡರು. ಪೆರು ಮತ್ತು ಬೊಲಿವಿಯಗಳಲ್ಲಿ ಇನ್ನೂ ಹೆಚ್ಚು ಚಿನ್ನ, ಬೆಳ್ಳಿ ಸಿಗುವ ಸಾಧ್ಯತೆ ಫಲ ಅವರಿಗಿದ್ದೇ ಇತ್ತು. ಬದುಕುಳಿದ ಅಮೇರಿಕನ್ ಇಂಡಿಯನ್ನರು ಈ ವಸಾಹತುಶಾಹಿಗಳ ಗಣಿಗಳಲ್ಲಿ, ಎಸ್ಟೇಟುಗಳಲ್ಲಿ ಜೀತದಾಳುಗಳ ರೀತಿಯಲ್ಲಿ ದುಡಿಯುವ ದುರವಸ್ಥೆಗಿಳಿದರು.

16ನೇ ಮತ್ತು 17ೀ ಶತಮಾನದ ಆರಂಭದಲ್ಲಿ ನೆದರ್‌ಲ್ಯಾಂಡ್ ಬಲಿಷ್ಟ ವಸಾಹತುಶಾಯಿ ಶಕ್ತಿಯಾಗಿ ಉದಯಿಸಿತು. 17ನೇ ಶತಮಾನದ ಮಧ್ಯದಲ್ಲಿ ಪೋರ್ಚುಗೀಸರ ಹೆಚ್ಚಿನ ವಸಾಹತುಗಳನ್ನು ಕಿತ್ತುಕೊಂಡು ಅಧಿಕಾರದ ಪರಾಕಾಷ್ಠೆಯನ್ನು ತಲುಪಿತು. ನೆದರ್‌ಲ್ಯಾಂಡಿನ ವಸಾಹತುಶಾಯಿ ನಾಯಕತ್ವವನ್ನು ಆಂಗ್ಲರು ಡಚ್ಚರ ಮೇಲಿನ ಯುದ್ಧದಿಂದ ಮುರಿದು ಹಾಕಿದರು. ಶತಮಾನದ ಅಂತ್ಯದಲ್ಲಿ ಮತ್ತು 18ನೇ ಶತಮಾನದ ಆದಿಯಲ್ಲಿ ಫ್ರಾನ್ಸ್ ಕೂಡ ವಸಾಹತುಗಳನ್ನು ವಶಪಡಿಸಿಕೊಳ್ಳಲು ಆರಂಭಿಸಿತು. 1607ರಲ್ಲಿ ಅಮೇರಿಕಾದಲ್ಲಿ ಆಂಗ್ಲರು ತಮ್ಮ ಪ್ರಥಮ ವಸಾಹತನ್ನು ಸ್ಥಾಪಿಸಿದರು. 18ನೇ ಶತಮಾನದ ಹೊತ್ತಿಗೆ ಅಮೇರಿಕಾದಲ್ಲಿ ಅವರ 13 ವಸಾಹತುಗಳಿದ್ದವು. ಈ ವಸಾಹತು ಸ್ಥಾಪನಾ ಕಾರ್ಯದ ಬಹುಸಂಖ್ಯಾತ ಮೂಲನಿವಾಸಿ ಜನರನ್ನು ಆಂಗ್ಲರು ನೆಲಸಮ ಮಾಡಿದರು. ಇಂಡಿಯನ್ನರ ಬಿಲ್ಲು ಬಾಣಗಳು ಆಂಗ್ಲರ ಶಸ್ತ್ರಾಸ್ತ್ರಗಳಿಗೆ ಸಮನಾಗಿಸಿಲ್ಲಲಿಲ್ಲ. ವಸಾಹತುಗಳನ್ನು ಕೈವಶ ಮಾಡುವ ಕಾರ್ಯದಲ್ಲಿ ತೀವ್ರವಾಗಿ ಮಗ್ನವಾಗಿದ್ದ ಇಂಗ್ಲೆಂಡ್ '7 ವರ್ಷಗಳ ಯುದ್ಧ' (1756–63) ನಡೆಸಿ ಉತ್ತರ ಅಮೇರಿಕಾ ಮತ್ತು ಭಾರತದಲ್ಲಿದ್ದ ಫ್ರಾನ್ಸ್‌ನ ವಸಾವತುಗಳನ್ನು ವಶಪಡಿಸಿಕೊಂಡಿತು.

ಯುರೋಪಿನ ವಾಣಿಜ್ಯ ಕ್ರಾಂತಿಗೆ ವಸಾಹತುಗಳಿಂದ ಬಂದ ಲೂಟಿಯು ಸಂಪತ್ತು ಉತ್ತೇಜನ ನೀಡಿತು. ಇದರಿಂದ ಕೈಗಾರಿಕೆ ಮತ್ತು ವ್ಯಾಪಾರಗಳಲ್ಲಿ ಹೆಚ್ಚಳ ಉಂಟಾಯಿತು. 18ನೇ ಶತಮಾನದ ಬ್ರಿಟೀಷ್ ಕೈಗಾರಿಕಾ ಕ್ರಾಂತಿಗೆ ಇದು ಮುಖ್ಯ ಕಾರಣಗಳಲ್ಲಿ ಒಂದಾಗಿತ್ತು.

ಸಾಮ್ರಾಜ್ಯಶಾಹಿ ಯುದ್ಧಗಳು

19ನೇ ಶತಮಾನದ ಕೈಗಾರಿಕಾ ಕ್ರಾಂತಿಯಿಂದಾಗಿ ಬಂಡವಾಳಶಾಹಿಯು ತೀವ್ರಗತಿಯಲ್ಲಿ ಬೆಳೆಯಿತು. ಊಳಿಗಮಾನ್ಯ ಪದ್ಧತಿಯ ಎಲ್ಲಾ ಕುರುಹುಗಳನ್ನು ಅಳಿಸಿ ಹಾಕುತ್ತಾ ರಾಜ್ಯದ ರಾಜಕೀಯ ವಿಷಯಗಳಲ್ಲಿ ಬಂಡವಾಳಶಾಹಿಗಳು ಪ್ರಾಬಲ್ಯತೆ ಪಡೆದರು. ಇದರಿಂದಾಗಿ ಬಂಡವಾಳವು ಕೆಲವೇ ಮಂದಿಯಲ್ಲಿ ಕೇಂದ್ರೀಕೃತವಾಯಿತು. ಹಾಗೂ ಏಕಸ್ವಾಮ್ಯ ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ಘಟ್ಟಕ್ಕೆ ಎಡೆಮಾಡಿಕೊಟ್ಟಿತು. ಸಂಗ್ರಹವಾದ ಬಂಡವಾಳವನ್ನು ಮತ್ತಷ್ಟು ಬಂಡವಾಳವನ್ನು ಉತ್ಪಾದಿಸಲು ಪುನರ್ ತೊಡಗಿಸಲಾಯಿತು. ಹೀಗಾಗಿ ಆಂತರಿಕ ಕ್ಷೇತ್ರಗಳಿಂದ ಹೊರಗೂ ಬಂಡವಾಳವನ್ನು ಉಪಯೋಗಿಸಬೇಕಾಯಿತು. ಹಿಂದಿನ ಲೂಟಿ, ಧಾಳಿ, ವ್ಯಾಪಾರಿ ಮಾರ್ಗ, ಕಚ್ಚಾ ಸಾಮಾಗ್ರಿ ಮತ್ತು ಮಾರುಕಟ್ಟೆಗಳ ಅಂಶಗಳೊಂದಿಗೆ ವಸಾಹತುಗಳ ಆಕ್ರಮಣಕ್ಕೆ ಮತ್ತೊಂದು ಅಂಶ ಸೇರಿದಂತಾಯಿತು. ಇದು ವಸಾಹತುಗಳ ವಿಸ್ತರಣೆಯ ಹೊಸ ಅಲೆಯನ್ನು ಎಬ್ಬಿಸಿ ರಕ್ತಪಾತದ ಸಮರಕ್ಕೆ ದಾರಿಮಾಡಿಕೊಟ್ಟಿತು.

ಹೊಸ ಪ್ರದೇಶಗಳ ವಶಪಡಿಸುವಿಕೆಯಲ್ಲಿ ಆದ ಹೆಚ್ಚಳದಲ್ಲಿ ಇದು ಎದ್ದು ಕಾಣುತ್ತದೆ. 1870 ಮತ್ತು 1914ರ ನಡುವೆ ಸರಾಸರಿ 24 ಸಾವಿರ ಚದರ ಮೈಲು ಕ್ರಮಿತಗೊಂಡಿದ್ದರೆ, 19ನೇ ಶತಮಾನದ ಮೊದಲ 75 ವರ್ಷಗಳಲ್ಲಿ ವರ್ಷಕ್ಕೆ 13 ಸಾವಿರ ಚದರ ಮೈಲು ಸ್ವಾಧೀನವಾಗಿತ್ತು. ಭೂಮಿಯ ಒಟ್ಟು ವಿಸ್ತೀರ್ಣದಲ್ಲಿ ಯುರೋಪಿನ ಅಳ್ವಿಕೆ ಶೇಕಡಾ 35 ಇದ್ದದ್ದು ಶೇಕಡಾ 67 ಆಯಿತು. (1870 ರಿಂದ 1878) ಅದೇ 1914ರ ಹೊತ್ತಿಗೆ ಈ ವಿಸ್ತರಣೆಯಿಂದಾಗಿ ವಸಾಹತುಶಾಹಿಗಳ ಆಳ್ವಿಕೆ ಭೂಮಿಯ ಒಟ್ಟು ಪ್ರದೇಶದ ಶೇಕಡಾ 85 ರಷ್ಟು ಭಾಗವನ್ನು ಆಕ್ರಮಿಸಿತ್ತು. ಅಂದರೆ 196 ಮಿಲಿಯ ಚದರ ಕಿ. ಮೀ. ಪ್ರದೇಶ ಹಾಗೂ 1367 ಮಿಲಿಯ ಜನತೆಯನ್ನು ಒಳಗೊಂಡಿತ್ತು.

ಇದು ಬಂಡವಾಳಶಾಹಿ ರಾಷ್ಟ್ರಗಳ ಮಧ್ಯೆ ಹೊಸ ಮಾರುಕಟ್ಟೆಗಳಿಗಾಗಿ ಮತ್ತು ಬಂಡವಾಳ ಹೂಡುವಿಕೆಗಾಗಿ ತೀವ್ರ ಕಚ್ಚಾಟ ಉಂಟುಮಾಡಿತು.

ಇಂತಹ ಯುದ್ಧಗಳ ಉತ್ತಮ ಉದಾಹರಣೆಯೆಂದರೆ ಆಫ್ರಿಕಾ ವಿಭಾಗವಾದದ್ದು. 1890ರ ವೇಳೆಗೆ ಆಫ್ರಿಕಾದಲ್ಲಿ ಕೆಲವೇ ವಸಾಹತುಗಳಿದ್ದು, ಕರಾವಳಿ ತೀರದಲ್ಲಿ ಮಾತ್ರ ಸೀಮಿತಗೊಂಡಿದ್ದವು. 1900ರ ವೇಳೆಗೆ ಇಡೀ ಆಫ್ರಿಕಾ ಖಂಡ ವಿವಿಧ ಕ್ಷೇತ್ರಗಳಾಗಿ ಹೋಳಾಗಿ ಬೇರೆಬೇರೆ ಯೂರೋಪಿಯನ್ ಶಕ್ತಿಗಳಿಂದ ಆಳಲ್ಪಡುತ್ತಿತ್ತು. ಸಂಗ್ರಾಮಗಳು ಮತ್ತು ಸೈನಿಕ ಒಪ್ಪಂದಗಳ ಮೂಲಕ ಈ ವಿಭಜನೆ ನಡೆಯಿತು. ರಾಷ್ಟ್ರೀಯ ಲಕ್ಷಣಗಳಿಗೆ ಯಾವುದೇ ಗಮನ ನೀಡದೇ ಇದ್ದುದರಿಂದ ಈ ವಿಭಜನೆಯು ವಿವಾದಗಳಿಂದ ಕೂಡಿದ್ದು ಅನೇಕ ಸಮಸ್ಯೆಗಳನ್ನು ಉಂಟುಮಾಡಿತು. ಇಂದಿಗೂ ಕೂಡಾ ಆ ಸಮಸ್ಯೆಗಳು ಆಫ್ರಿಕಾವನ್ನು ಭಾಧಿಸುತ್ತಿವೆ.

ಸ್ಪೇನ್‌ನ ಸ್ವಾಧೀನದಲ್ಲಿದ್ದ ವಸಾಹತುಗಳನ್ನು ವಶಪಡಿಸಿಕೊಳ್ಳಲು 1898ರಲ್ಲಿ ಅಮೇರಿಕ ಯುದ್ಧ ಹೂಡಲು ನಿರ್ಧರಿಸಿತು. ಅಂತೆಯೇ ಫಿಲಿಪೀನ್ ಮತ್ತು ಕ್ಯೂಬಾದಿಂದ ಸ್ಪೇನನ್ನು ಹೊರಹಾಕಿತು. 1899 ರಿಂದ 1902ರವರೆಗೆ ಬ್ರಿಟನ್ ಮತ್ತು ಟ್ರಾನ್ಸ್‌ವಾಲ್ ನಡುವಣ ಯುದ್ಧದಿಂದಾಗಿ ಆ ರಾಜ್ಯಗಳು ಡಚ್ಚರಿಂದ ಬ್ರಿಟಿಷರಿಗೆ ದಕ್ಕಿದವು. ಮಂಚೂರಿಯಾ ಮತ್ತು ಕೊರಿಯಾಗಳ ವಶಕ್ಕೆ ಅನುಕೂಲವಾಗುವಂತೆ ರಷ್ಯಾ ಮತ್ತು ಜಪಾನಿನ ನಡುವೆ ಯುದ್ಧ ನಡೆದು ಜಪಾನಿನ ಸ್ವಾಧೀನಕ್ಕೊಳಪಟ್ಟವು (1904). 1808ರಲ್ಲಿ ಆಸ್ಟ್ರಿಯ-ಹಂಗೇರಿಗಳು ಬೋಸ್‌ನಿಯಾವನ್ನು ವಶಪಡಿಸಿಕೊಂಡಿದ್ದರಿಂದ ಯೂರೋಪಿನೆಲ್ಲೆಡೆ ತೀವ್ರ ಬಿಕ್ಕಟದ ಪರಿಸ್ಥಿತಿ ಏರ್ಪಟ್ಟಿತು. 1912 ಮತ್ತು 1913ರಲ್ಲಿ ಎರಡು ಬಾಲ್ಕನ್ ಯುದ್ಧಗಳಿಂದ ಯೂರೋಪ್ ಅಲುಗಾಡಿತು. ಇದರಲ್ಲಿ ಭಾಗಿಯಾದ ಸಣ್ಣ ರಾಷ್ಟ್ರಗಳಿಗೆ ಬೃಹತ್ ಶಕ್ತಿಗಳ ಬೆಂಬಲವಿತ್ತು.

ಈ ಹೊತ್ತಿಗೆ ಯೂರೋಪು ಎರಡು ಸಾಮ್ರಾಜ್ಯಶಾಹಿ ಬಣಗಳಾಗಿಬಿಟ್ಟಿತ್ತು. ಜರ್ಮನಿ, ಆಸ್ಟ್ರೀಯ- ಹಂಗೇರಿ, ಇಟಲಿಗಳ ತ್ರಿಪಕ್ಷೀಯ ಬಣವೊಂದು ಮತ್ತು ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾದ ಕೂಟವೊಂದು. ಇವೆರಡೂ ಯುದ್ಧಕ್ಕಾಗಿ ತೀವ್ರ ಸಿದ್ಧತೆ ನಡೆಸಿದ್ದವು. ಈ ಕೂಟಗಳ ಹೆಚ್ಚಿನ ಸದಸ್ಯರು ಪ್ರಪಂಚದಾದ್ಯಂತ ವಸಾಹತುಗಳನ್ನು ಹೊಂದಿದ್ದು, ಅನೇಕ ಹಿತಾಸಕ್ತಿಗಳು ಘರ್ಷಣೆಗೊಳಗಾಗಿದ್ದವು. ಇದರ ಪರಿಣಾಮ ಬರಿಯ ಯೂರೋಪಿಗೆ ಮಾತ್ರವಲ್ಲದೆ ವಿಶ್ವ ಸಮರಕ್ಕೆ ಅನುವು ಮಾಡಿಕೊಡುವಂತದ್ದಾಗಿತ್ತು.

ಆಗಸ್ಟ್ 1, 1914 ರಂದು ವಿಶ್ವ ಸಮರ ಆರಂಭವಾಯ್ತು. ಎರಡೂ ಪಕ್ಷಗಳಿಗೆ ಇದೊಂದು ಸಾಮ್ರಾಜ್ಯಶಾಹಿ ಯುದ್ಧವಾಗಿತ್ತು. ಆದರೆ ಮೊದಲ ಹೆಜ್ಜೆಯಿಟ್ಟದ್ದು ಜರ್ಮನಿ. ಆಗ ಜರ್ಮನಿಯ ಸೈನ್ಯ ಶಕ್ತಿ ಹೆಚ್ಚಿದ್ದುದರಿಂದ ಮತ್ತು ತಡ ಮಾಡುವುದರಿಂದ ಈ ಪ್ರಾಬಲ್ಯತೆ ಕಡಿಮೆಯಾಗುವುದೆಂದು ಜರ್ಮನಿಯ ಆಳುವ ವಲಯ ಆಕ್ರಮಣವನ್ನು ಮೊದಲು ಆರಂಭಿಸಲು ಉತ್ಸುಕವಾಗಿತ್ತು. ಆಸ್ಟ್ರಿಯದ ಆರ್ಕ್-ಡ್ಯೂಕರ ಕೊಲೆಯನ್ನು ಬಳಸಿಕೊಂಡು ಅಂತರರಾಷ್ಟ್ರೀಯ ಬಿಕ್ಕಟಕ್ಕೆ ಪ್ರೇರೇಪಣೆ ಮಾಡುವಂತೆ ಜರ್ಮನಿ ಮತ್ತು ಅದರ ಪಾಲುದಾರರು ವರ್ತಿಸಿದವು.

1914-18ರ ಸಾಮ್ರಾಜ್ಯಶಾಹಿ ಯುದ್ಧದಲ್ಲಿ ಏಳು ರಾಷ್ಟ್ರಗಳ 60 ಮಿಲಿಯ ಧೃಡಕಾಯ ವ್ಯಕ್ತಿಗಳನ್ನು ಯುದ್ಧಕ್ಕಾಗಿ ಸಂಘಟಿಸಲಾಗಿತ್ತು, ಒಟ್ಟನಲ್ಲಿ ಸುಮಾರು 36 ರಾಷ್ಟ್ರಗಳು ಯುದ್ಧದಲ್ಲಿ ಪಾಲ್ಗೊಂಡವು. ೧0 ಮಿಲಿಯಕ್ಕೂ ಹೆಚ್ಚು ಜನ ಈ ಯುದ್ಧದಿಂದ ಮೃತಿ ಹೊಂದಿದರು.

ಆಂತರಿಕ ಯುದ್ಧಗಳು

ಅನೇಕ ದೇಶಗಳ ಚರಿತ್ರೆಯು, ಅದರ ವಿವಿಧ ಜನವಿಭಾಗಗಳ ನಡುವಿನ ಯುದ್ಧದ ರಕ್ತದಿಂದ ಮಲಿನವಾಗಿದೆ. ರಾಜ್ಯಾಧಿಕಾರವನ್ನು ಪಡೆಯುವುದಕ್ಕಾಗಿ ಸಮಾಜದೊಳಗಿನ ವಿವಿಧ ವರ್ಗಗಳ ನಡುವೆಯೇ ಇದು ಏರ್ಪಟ್ಟಿತು. (ಊಳಿಗಮಾನ್ಯ ಪ್ರಭುಗಳು ಮತ್ತು ಬಂಡವಾಳಶಾಹಿಗಳ ನಡುವೆ ಹಾಗು ರೈತ ಕಾರ್ಮಿಕ ಮತ್ತು ಬಂಡವಾಳಶಾಹಿಗಳ ಮಧ್ಯೆ.)

ಪಶ್ಚಿಮ ಯುರೋಪಿನಲ್ಲಿ ಬಂಡವಾಳಶಾಹಿ ತೀವ್ರವಾಗಿ ಬೆಳೆದಂತೆ ಊಳಿಗಮಾನ್ಯಕಾಲದ ಪ್ರಭುಗಳು ವಾಣಿಜ್ಯ ಮತ್ತು ಕೈಗಾರಿಕೆಗೆ ನೀಡುತ್ತಿದ್ದ ಆಶ್ರಯ ಬಂಡವಾಳಶಾಹಿಗಳಿಗೆ ತೃಪ್ತಿ ನೀಡಲಿಲ್ಲ. ರಾಜ್ಯ ಶಕ್ತಿಯ ಇಡೀ ಯಂತ್ರ ತಮ್ಮ ಕೈಗೆ ಬಂದಲ್ಲಿ ಊಳಿಗಮಾನ್ಯ ಪ್ರಭುಗಳ ಬದಲಾಗಿ ಬಂಡವಾಳಿಗರ ಹಿತಾಸಕ್ತಿಗೆ ಅನುಕೂಲವೆಂದು ಅವರು ತಿಳಿದರು. ರಾಜ್ಯ ಶಕ್ತಿಯ ಒಡೆತನಕ್ಕಾಗಿನ ಹೋರಾಟ ರಕ್ತಪಾತದಿಂದ ಕೂಡಿತ್ತು.

ಕೈಗಾರಿಕೆ ಮತ್ತು ವಾಣಿಜ್ಯದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿದ್ದ ಇಂಗ್ಲೆಂಡಿನಲ್ಲಿ ಇಂತಹ ಮೊದಲ ಯುದ್ಧ ನಡೆಯಿತು. ಇಂಗ್ಲೀಷರ ನಾಗರಿಕ ಯುದ್ಧಗಳಿಂದ (1642-49) ರಾಜ್ಯಾಧಿಕಾರ ಪ್ರಭುಗಳಿಂದ ಬಂಡವಾಳಶಾಹಿಗಳಿಗೆ ವರ್ಗವಾಯಿತು. ಇದು ಪ್ರಪಂಚದಲ್ಲೆ ಮೊದಲ ಬಾರಿಗೆ ಉತ್ತಮ ಮಟ್ಟದ ಸಾಮಾಜಿಕ ಪದ್ಧತಿಯೊಂದರ ವಿಜಯವಾಗಿತ್ತು–ಊಳಿಗಮಾನ್ಯತೆಯ ಮೇಲೆ ಬಂಡವಾಳಶಾಹಿಯ ವಿಜಯವೆಂದರೆ ಒಂದು ಸಾಮಾಜಿಕ ಪದ್ಧತಿಯಿಂದ ಇನ್ನೊಂದಕ್ಕೆ ಆದ ಕ್ರಾಂತಿಕಾರಿ ಬದಲಾವಣೆ.

ಇಂತಹುದೇ ಇನ್ನೊಂದು ಕ್ರಾಂತಿ ನಡೆಯಬೇಕಾದರೆ 150 ವರ್ಷಗಳು ಕಳೆದವು. ಫ್ರೆಂಚ್ ಚಕ್ರಾಧಿಪತ್ಯದ ದುರಾಡಳಿತದಲ್ಲಿನ ಕಷ್ಟನಷ್ಟಗಳ ವಿರುದ್ಧ ಪ್ಯಾರಿಸ್‌ನ ಜನತೆ 'ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಘೋಷಣೆ'ಯೊಂದಿಗೆ 14 ಜುಲೈ 1789 ರಂದು ಸಮರಕ್ಕಿಳಿದರು.

ನೆಪೋಲಿಯನ್‌ನ ಉದಯ ಮತ್ತು ಗೆಲುವುಗಳು ಮತ್ತು ತೀವ್ರ ಹೋರಾಟಗಳು ಫ್ರಾನ್ಸ್‌ನಲ್ಲಿ 1841ರವರೆಗೆ ನಡೆಯುತ್ತಾ ಬಂದು ಆಗ ಮತ್ತೊಂದು ಕ್ರಾಂತಿ ಆಗಿ ಗಣರಾಜ್ಯವೆಂದು

(ಪುರವಣಿ IVನೇ ಪುಟ ನೋಡಿ)

ಶಾಂತಿಗಾಗಿ ಹೋರಾಟ

ಅಮೇರಿಕನ್ನರ ಯುದ್ಧೋನ್ಮಾದಕ್ಕೆ ವಿಶ್ವಾದ್ಯಂತ ತೀವ್ರವಾದ ವಿರೋಧ ಕಂಡು ಬರುತ್ತಿದೆ. ಜಗತ್ತಿನಾದ್ಯಂತ ವಿವಿಧ ವಿಭಾಗಗಳ ಜನತೆ ಶಾಂತಿಗಾಗಿ ಮತ್ತು ಬದುಕಿಗಾಗಿ ಬೀದಿಗಿಳಿದು ಹೋರಾಟ ನಡೆಸುತ್ತಿದ್ದಾರೆ. ರಷ್ಯಾ, ರುಮೇನಿಯಾ, ಪೂರ್ವ ಜರ್ಮನಿ ಮುಂತಾದ ರಾಷ್ಟ್ರಗಳ ಸರಕಾರಗಳು ಮತ್ತು ಜನತೆ ಶಾಂತಿಯ ಪತಾಕೆಯನ್ನು ಎತ್ತಿ ಹಿಡಿದು, ಬೃಹತ್ ಪ್ರದರ್ಶನಗಳನ್ನು ನಡೆಸುತ್ತಿವೆ. ರೋನಾಲ್ಡ್ ರೇಗನ್ನರಿಗೆ ಕಳುಹಿಸುವುದಕ್ಕೋಸ್ಕರ ಸಹಿ ಚಳುವಳಿ ಮತ್ತು ಪೋಸ್ಟ್ ಕಾರ್ಡ್ ಚಳುವಳಿಗಳು ನಡೆಯುತ್ತಿವೆ.

ಕಳೆದ ಒಂದು ವರ್ಷದಿಂದೀಚೆಗೆ ಜಗತ್ತಿನಲ್ಲಿ ದೇಶ, ಸಿದ್ಧಾಂತ, ವಯಸ್ಸುಗಳ ಅಂತರಗಳನ್ನು ದಾಟಿದ ಒಂದು ಹೊಸ, ವಿಸ್ಮಯಕಾರಕವಾದ ಜಾಗೃತಿಯೊಂದು ಮೂಡತೊಡಗಿದೆ. ನೂರಾರು, ಸಾವಿರಾರು ಮಂದಿ ಸ್ಪೇನಿನವರನ್ನೂ, ಬ್ರಿಟನ್ನಿನವರನ್ನೂ, ಗ್ರೀಕರನ್ನೂ, ಜರ್ಮನರನ್ನೂ, ಆಸ್ಟ್ರೇಲಿಯನ್ನರನ್ನೂ ಫಿನ್ಲೆಂಡಿನವರನ್ನೂ ಬೀದಿಗಿಳಿಸಿ ತಮ್ಮ ಸರ್ಕಾರಕ್ಕೆದುರಾಗಿ ಹೋರಾಡಲು ಪ್ರೇರೇಪಿಸಿದ ಆ ಶಕ್ತಿಯಾದರೂ ಯಾವುದು ? ಉತ್ತರ ಬಹಳ ಸುಲಭ; ಅಮೇರಿಕವು ತೀವ್ರಗೊಳಿಸುತ್ತಿರುವ ಮಿಲಿಟರಿ ಧೋರಣೆಯು ಜಗತ್ತನ್ನು ಕ್ರೂರವಾದ ಅಣು ಯುದ್ಧದ ಅಂಚಿಗೆ ತಳ್ಳುತ್ತಿರುವುದರ ಅರಿವು ಈ ಎಲ್ಲ ಜನರಲ್ಲಿ ಬೆಳೆಯತೊಡಗಿದೆ. ಯುರೋಪಿಯನ್ನರಿಗೆ ಇದು ಸಾವು-ಬದುಕಿನ ಪ್ರಶ್ನೆ. ಅರವತ್ತರ ದಶಕದಲ್ಲಿ ವಿಯೆತ್ನಾಂ ಯುದ್ಧದ ವಿರುದ್ಧ ನಡೆದ ಚಳುವಳಿಯ ಶಕ್ತಿ ಹಾಗೂ ಪ್ರಮಾಣ ಎರಡರಲ್ಲಿಯೂ ಮೀರಿಸಿದೆ.

ವಿಯೆಟ್ನಾಂನಲ್ಲಿ ನಡೆಸಿದ ನರಹತ್ಯೆಗಾಗಿ ಅಮೇರಿಕವು 224.9 ಬಿಲಿಯನ್ ಡಾಲರುಗಳನ್ನು ಖರ್ಚು ಮಾಡಿತು. 30 ಲಕ್ಷ ಜನ ಸಾವಿಗೀಡಾದರು. ಈ ಸಂದರ್ಭದಲ್ಲಿ ಪಶ್ಚಿಮ ರಾಷ್ಟ್ರಗಳ ಜನ ಅದರಲ್ಲೂ ಮುಖ್ಯವಾಗಿ ಯುವಜನತೆ ಇದರ ವಿರುದ್ಧವಾಗಿ ಅತ್ಯಂತ ತೀವ್ರವಾಗಿ ಪ್ರತಿಕ್ರಿಯಿಸಿತು. ಅಮೇರಿಕವು ತನ್ನ ರಕ್ಷಣಾ ವೆಚ್ಚವನ್ನು 1981ರಲ್ಲಿ 171.5 ಬಿಲಿಯನ್ ಡಾಲರುಗಳಿಗೆ ಏರಿಸಿದ್ದರಿಂದಾಗಿ ಪರಿಸ್ಥಿತಿ ಈಗ ಮತ್ತಷ್ಟು ಗಂಭೀರ ಸ್ವರೂಪವನ್ನು ಪಡೆದುಕೊಂಡಿದೆ. ಅಮೇರಿಕನ್ನರ ಈ ನೀತಿಯಲ್ಲಿ ಯುರೋಪಿನಾದ್ಯಂತ ನೂರಾರು ನ್ಯೂಕ್ಲಿಯರ್ ಕ್ಷಿಪಣಿಗಳನ್ನು ಸ್ಥಾಪಿಸುವುದೂ ಕೂಡ ಒಳಗೊಂಡಿದೆ. ಇದು ಯುರೋಪಿನಲ್ಲಿ ಒಂದು ಪರಿಮಿತ ನ್ಯೂಕ್ಲಿಯರ್ ಯುದ್ಧ ನಡೆಸುವ ಉದ್ದೇಶಕ್ಕೋಸ್ಕರ ಎಂದು ಅಮೇರಿಕದ ರಾಜಕೀಯ ನಿಪುಣರು ನಾಚಿಕೆಯಿಲ್ಲದೆ ವಾದಿಸುತ್ತಾರೆ. ಈಗಾಗಲೇ ಯುರೋಪಿನಲ್ಲಿ ಸ್ಥಾಪಿಸಲಾಗಿರುವ 6,000 ನ್ಯೂಕ್ಲಿಯರ್ ನೆಲೆಗಳು ಹಾಗೂ ಮೂರು ಲಕ್ಷ ಸೈನಿಕರನ್ನು ಹೊರತುಪಡಿಸಿ ಈ ಹೊಸ ಕ್ರಮಗಳು ಕಾರ್ಯಾಚರಣೆಯಲ್ಲಿವೆ ಎಂಬುದು ಗಮನಿಸಬೇಕಾದ ಅಂಶ. ಅಧ್ಯಕ್ಷ ರೇಗನ್ನರ ನೇತೃತ್ವದ ಪೆಂಟಗನ್ (ಅಮೇರಿಕದ ರಕ್ಷಣಾ ಇಲಾಖೆ)ನ ರಾಕ್ಷಸರು ಯುರೋಪಿನ ಜನರನ್ನು ಯುದ್ಧದ ದವಡೆಗೆ ಯಾವ ಕ್ಷಣದಲ್ಲಾದರೂ ನೂಕುವುದರಲ್ಲಿ ಸಂಶಯವೇ ಇಲ್ಲ. ನ್ಯೂಟ್ರಾನ್ ಬಾಂಬು ತಯಾರಿಸುವ ಅಮೇರಿಕದ ನಿರ್ಧಾರವು ಬದುಕಿಗಾಗಿ ಹೋರಾಡುತ್ತಿರುವ ಯುರೋಪಿನ ಜನತೆಯ ಮೇಲೆ ಉಂಟುಮಾಡಿರುವ ಆಘಾತವನ್ನು ಯಾರೊಬ್ಬರೂ ಊಹಿಸಬಹುದು. ಶಾಂತಿ ಚಳುವಳಿಗಳು ಇಷ್ಟೊಂದು ವಿಶಾಲ ಪ್ರಮಾಣದಲ್ಲಿ ಬೆಳೆಯತೊಡಗಿರುವುದಕ್ಕೆ ಮತ್ತು ಡೆಮೊಕ್ರಾಟ್‌ಗಳು, ಕಮ್ಯುನಿಸ್ಟರು, ರೋಮನ್ ಕ್ಯಾಥೊಲಿಕ್ಕರು ಒಟ್ಟು ಸೇರಿ ಪ್ರದರ್ಶನ ನಡೆಸುತ್ತಿರುವುದರ ಕಾರಣ ಇದೇ ಆಗಿದೆ.

ಪಶ್ಚಿಮ ಜರ್ಮನಿಯಲ್ಲಿ ನಡೆದ ಸಾರ್ವಜನಿಕ ಅಭಿಪ್ರಾಯದ ಚುನಾವಣೆಯಲ್ಲಿ ಶೇಖಡಾ 70 ಮಂದಿ ಯುದ್ಧ ಸಿದ್ಧತೆಗಳನ್ನು ವಿರೋಧಿಸಿದ್ದಾರೆ. ರೇಗನ್ನರ ಯುದ್ಧಕೋರ ನೀತಿಯನ್ನು ವಿರೋಧಿಸಿ ಸೆಪ್ಟೆಂಬರ್ ಹತ್ತರಂದು ಬಾನ್ ನಗರದಲ್ಲಿ ಮೂರು ಲಕ್ಷ ಜನ ಪ್ರದರ್ಶನ ನಡೆಸಿದರು. ಇದರಲ್ಲಿ, ಕಾರ್ಮಿಕರ, ಯುವಜನರ, ಮಹಿಳೆಯರ, ಮಧ್ಯಮ ವರ್ಗದವರ 830 ಸಂಘಟನೆಗಳು ಭಾಗವಹಿಸಿದ್ದುವು. ಸಮ್ಮಿಶ್ರ ಸರ್ಕಾರದ ಅಂಗ ಪಕ್ಷವಾದ ಸೋಷಲಿಸ್ಟ್ ಡೆಮಾಕ್ರಾಟಿಕ್ ಪಕ್ಷದ 58 ಸದಸ್ಯರು ಪ್ರದರ್ಶನವನ್ನು ಬೆಂಬಲಿಸಿದ್ದರು. ಅದೇ ರೀತಿಯಲ್ಲಿ ಅಮೇರಿಕದ ವಿದೇಶಾಂಗ ಕಾರ್ಯದರ್ಶಿ ಅಲೆಗ್ಸಾಂಡರ್ ಹೇಗ ಪಶ್ಚಿಮ ಬರ್ಲಿನ್‌ಗೆ ಭೇಟಿ ಕೊಟ್ಟಾಗ ಅಲ್ಲಿನ 85,000 ಮಂದಿಯ 'ಶುಭಾಶಯಗಳನ್ನು' ಸ್ವೀಕರಿಸಬೇಕಾಯಿತು. ದೇಶಾದ್ಯಂತ ಸ್ಥಳೀಯ ಸಮಾವೇಶಗಳು ಜರುಗಿ ಯುದ್ಧವನ್ನು ಖಂಡಿಸಿದವು.

ಪುಟ್ಟ ದೇಶ ಬೆಲ್ಜಿಯಂನ ಬ್ರಸೆಲ್ಸ್‌ನಲ್ಲಿ ನಡೆದ ಎರಡು ಲಕ್ಷ ಮಂದಿಯ ಪ್ರದರ್ಶನ ತಮ್ಮ ನೆಲದಲ್ಲಿ ಕ್ಷಿಪಣಿಗಳನ್ನು ನೆಲೆಗೊಳಿಸುವುದನ್ನು ವಿರೋಧಿಸಿತು. ಸರ್ಕಾರ ತನ್ನ ತೀರ್ಮಾನವನ್ನು ಮುಂದಕ್ಕೆ ಹಾಕುವಂತೆ ಮಾಡುವಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಯಿತು. ಮತ್ತೆ ಕಳೆದ ಡಿಸೆಂಬರ್‌ನಲ್ಲಿ ಕೂಡ ಇಂಥದೇ ಒಂದು ಪ್ರದರ್ಶನ ನಡೆಯಿತು.

ನ್ಯೂಕ್ಲಿಯರ್ ಕ್ಷಿಪಣಿ ಸ್ಥಾಪಿಸುವ ಹಾಗೂ ನ್ಯೂಟ್ರಾನ್ ಬಾಂಬ್ ತಯಾರಿಸುವ ಯೋಜನೆಯನ್ನು ವಿರೋಧಿಸಿ ನೆದರ್ಲೆಂಡಿನ ಆಮಸ್ಟರ್ ಡ್ಯಾಮಿನಲ್ಲಿ ನಾಲ್ಕು ಲಕ್ಷ ಮಂದಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಸಮ್ಮಿಶ್ರ ಸರ್ಕಾರದ ಕೆಲವು ಅಂಗ ಪಕ್ಷಗಳು ಪ್ರದರ್ಶನವನ್ನು ಬೆಂಬಲಿಸಿ ನೇಟೋದ ತೀರ್ಮಾನಗಳನ್ನು ಜ್ಯಾರಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿತು. ಆಮ್‌ಸ್ಟರ್ ಡ್ಯಾಮಿನ ಈ ಪ್ರದರ್ಶನದಲ್ಲಿ ಸಮವಸ್ತ್ರ ಧರಿಸಿದ್ದ ಸೈನಿಕರು ನಿಯಮವನ್ನುಲ್ಲಂಘಿಸಿ ಪ್ರದರ್ಶನದಲ್ಲಿ ಭಾಗವಹಿಸಿದರು. ನಿಶ್ಶಸ್ತ್ರೀಕರಣದ ಕುರಿತಾದ ಜಿನೇವಾ ಮಾತುಕತೆಯ ಸಂಧರ್ಭದಲ್ಲಿ 20,000 ಮಹಿಳೆಯರು ಶಾಂತಿಯ ಪರವಾಗಿ ಪಂಜಿನ ಮೆರವಣಿಗೆ ನಡೆಸಿದರು.

ಶಾಂತಿ ಚಳುವಳಿಯ ಪರಾಕಾಷ್ಠೆಯಾದ ವಿಶ್ವಸಂಸ್ಥೆಯ ನಿಶ್ಶಸ್ತ್ರೀಕರಣ ಸಪ್ತಾಹದ ಕರೆಯಂತೆ ಡೆನ್ಮಾರ್ಕಿನಲ್ಲೂ ಕೂಡ ವಿಶಾಲ ಪ್ರಮಾಣದ ಕಾರ್ಯಕ್ರಮಗಳು ಜರುಗಿದವು. ಆಗಸ್ಟ್ 6ರ 'ಹಿರೋಷಿಮಾ ದಿನ' ಆಚರಿಸಲು ಕೋಪನ್ ಹೇಗನ್‌ನಿಂದ ಪ್ಯಾರೀಸ್ ವರೆಗೆ 750 ಮೈಲುಗಳ ದೂರವನ್ನು ಸಾವಿರಾರು ಮಂದಿ ಕಾಲ್ನಡಿಗೆಯಲ್ಲಿ ಕ್ರಮಿಸಿದ ಘಟನೆ ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತದೆ.

ನ್ಯೂಕ್ಲಿಯರ್ ನಿಶ್ಶಸ್ತ್ರೀಕರಣ ಸಮಿತಿ (C.W.D) ಮತ್ತು ಇತರ ಸಂಘಟನೆಗಳು ಅಕ್ಟೋಬರ್ 24ರಂದು ಲಂಡನ್‌ನಲ್ಲಿ ವ್ಯವಸ್ಥೆಗೊಳಿಸಿದ್ದ ರ್‍ಯಾಲಿಯಲ್ಲಿ ಎರಡೂವರೆ ಲಕ್ಷ ಮಂದಿ ಭಾಗವಹಿಸಿ ಪ್ರಮುಖ ಬೇಡಿಕೆಯಾದ ನ್ಯೂಕ್ಲಿಯರ್ ನಿಶ್ಶಸ್ತ್ರೀಕರಣಕ್ಕಾಗಿ ಒತ್ತಾಯಿಸಿದರು. ಹನ್ನೊಂದು ಮಿಲಿಯ ಸದಸ್ಯತ್ವದ ಕಾರ್ಮಿಕ ಸಂಘಗಳ ಮಹಾಸಭೆ ಕೂಡ ಇದನ್ನು ಬೆಂಬಲಿಸಿತು. ಮಾತುಕತೆಗಾಗಿ ಸೋವಿಯತ್ ಯೂನಿಯನ್ ಕೊಟ್ಟಿದ್ದ ಕರೆಯನ್ನು ಬೆಂಬಲಿಸಿ ಬ್ರೆಜ್ನೇವ್ ಅವರಿಗೆ ಪತ್ರ ಕಳಿಸಲಾಗಿದೆ. ವಿವಿಧ ಮಹಿಳಾ ಸಂಘಟನೆಗಳು ಸೈನಿಕ ಶಿಬಿರಗಳ ಹಾಗೂ ಪಾರ್ಲಿಮೆಂಟಿನ ಎದುರು ಪಿಕೆಟಿಂಗ್ ನಡೆಸಿದವು. ನ್ಯೂಟ್ರಾನ್ ಬಾಂಬ್ ತಯಾರಿಸುವ ಅಮೇರಿಕಾದ ತೀರ್ಮಾನವನ್ನನುಸರಿಸಿ ಅಮೇರಿಕದ ರಾಯಭಾರ ಕಚೇರಿಯ ಮುಂದೆ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಯಿತು. ಮ್ಯಾಂಚೆಸ್ಟರ್‌ನಗರ ಮಂಡಳಿಯ ನೇತೃತ್ವದಲ್ಲಿ ಸುಮಾರು ಒಂದುನೂರು ನಗರ ಮಂಡಳಿಗಳು ತಮ್ಮ ನಗರಗಳನ್ನು ನ್ಯೂಟ್ರಾನ್ ಮುಕ್ತ ಪ್ರದೇಶಗಳೆಂದು ಸಾರಿದವು.

ಅಕ್ಟೋಬರ್ 25 ರಂದು ಫ್ರಾನ್ಸ್ ದೇಶದ ಪ್ಯಾರೀಸ್‌ನಲ್ಲಿ ಲಕ್ಷಗಟ್ಟಲೆ ಮಂದಿ ರ್‍ಯಾಲಿ ನಡೆಸಿದರು. ಶಸ್ತ್ರಾಸ್ತ್ರ ಪೈಪೋಟಿಯನ್ನು ಕೊನೆಗೊಳಿಸಲು, ನ್ಯೂಟ್ರಾನ್ ಬಾಂಬುಗಳ ತಯಾರಿಕೆ ನಿಲ್ಲಿಸಲು ಮತ್ತು ಮಿಲಿಟರಿ ನಿಧಿಯನ್ನು ಹಸಿವಿನ ವಿರುದ್ಧ ಬಳಸಲು ದೇಶಾದ್ಯಂತ ಸಹಿ ಸಂಗ್ರಹಣಾ ಚಳುವಳಿಯ ನಡೆಯುತ್ತಿದೆ.

ಮೆಡಿಟರೇನಿಯನ್ ಪ್ರದೇಶಗಳಲ್ಲೂ ಕೂಡ ಬಂಡಾಯ ಪ್ರಾರಂಭವಾಗಿದೆ. ಸ್ಪೇನ್ ಮತ್ತು ಪೋರ್ಚುಗಲ್‌ನಲ್ಲಿ ಮನವಿ ಚಳುವಳಿಗೆ ಲಕ್ಷಾಂತರ ಮಂದಿ ಸಹಿ ಹಾಕಿರುವುದಲ್ಲದೆ ದೊಡ್ಡ ಪ್ರಮಾಣದ ರ್‍ಯಾಲಿಗಳು ನಡೆದಿವೆ. ನವೆಂಬರ್ 15 ರಂದು ಮ್ಯಾಡ್ರಿಡ್‌ನ ಬೀದಿಗಳು, ಸ್ಪೇನ್ ಜನತೆಯು ಯುದ್ಧವನ್ನು ವಿರೋಧಿಸಿ ಮತ್ತು ಸ್ಪೇನ್ ನೇಟೋ ಕೂಟವನ್ನು ಪ್ರವೇಶಿಸುವುದನ್ನು ವಿರೋಧಿಸಿ ನಡೆಸಿದ ಪ್ರದರ್ಶನದ ಘೋಷಣೆಗಳನ್ನು ಪ್ರತಿಧ್ವನಿಸಿದವು. ಈ ಪ್ರದರ್ಶನವನ್ನು ಅಲ್ಲಿನ ಕಮ್ಯುನಿಸ್ಟ್ ಮತ್ತು ಸೋಷಲಿಸ್ಟ್ ಪಕ್ಷಗಳು ಇತರ ಇನ್ನೂರು ಸಂಘಟನೆಗಳೊಂದಿಗೆ ಸಂಘಟಿಸಿದವು. ಪೋರ್ಚುಗಲ್ಲಿನ ರಾಜಧಾನಿ ಲಿಸ್ಬನ್‌ನಲ್ಲಿ ನ್ಯೂಕ್ಲಿಯರ್ ಕ್ಷಿಪಣಿಗಳನ್ನು ತಮ್ಮ ನೆಲದಿಂದ ತೆರವು ಮಾಡಬೇಕೆಂದು ಒತ್ತಾಯಿಸಿ ಒಂದೂವರೆ ಲಕ್ಷ ಮಂದಿ ಪ್ರದರ್ಶನ ನಡೆಸಿದರು.

ಇಟಲಿಯ ಎಲ್ಲೆಡೆಗಳಲ್ಲೂ ಶಾಂತಿಗಾಗಿ ಮತ್ತು ಇಟಲಿಯಲ್ಲಿರುವ ಅಮೇರಿಕನ್ನರ ಕ್ಷಿಪಣಿಗಳನ್ನು ವಿರೋಧಿಸಿ ಪ್ರದರ್ಶನಗಳು ನಡೆದವು.

ನೇಟೋದ ವರಿಷ್ಠ ಸಭೆ ಬ್ರುಸೆಲ್ಸ್‌ನಲ್ಲಿ ನಡೆದಾಗ ಗ್ರೀಸ್‌ನ ಬೀದಿಗಳು ಪ್ರತಿಭಟಿಸುವ ಜನರಿಂದ ಉಕ್ಕಿ ಹರಿದಿತ್ತು.

ಮೆಡಿಟರೇನಿಯನ್ ಪ್ರದೇಶದ ಪುಟ್ಟ ದ್ವೀಪ ಸೈಪ್ರಸ್ ಕೂಡ ಪ್ರತಿಭಟನೆಯಲ್ಲಿ ಹಿಂದೆ ಬಿದ್ದಿಲ್ಲ.

ಈ ಎಲ್ಲ ಪ್ರದರ್ಶನಗಳ ಮಾರ್ದನಿ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳಲ್ಲೂ ಪ್ರತಿಧ್ವನಿಸತೊಡಗಿತು. ಕೆನಡಾದ ಶಾಂತಿ ಮಂಡಳಿಯ ಪ್ರಾರಂಭಿಕ ಕಾರ್ಯಕ್ರಮದೊಂದಿಗೆ ಎಲ್ಲ ನಗರಗಳಲ್ಲೂ ನಿಶ್ಶಸ್ತ್ರೀಕರಣವನ್ನು ಒತ್ತಾಯಿಸಿ, ಶಾಂತಿಗಾಗಿ ಪ್ರದರ್ಶನಗಳು ನಡೆದವು.

ಆಸ್ಟ್ರೇಲಿಯಾದ ಹಸಿರು ಖಂಡ ಯುದ್ಧ ವಿರೋಧಿ ಅಲೆಗಳಿಂದ ನಡುಗಿತು. ಅಲ್ಲಿನ ಲಕ್ಷಾವಧಿ ಜನ ಪ್ರದರ್ಶನಗಳನ್ನು ನಡೆಸಿದರು.

ಅಣುಯುದ್ಧದ ಭಯಾನಕ ಬಾಹುಗಳಲ್ಲಿ ಅಪ್ಪಚ್ಚಿಯಾಗಿದ್ದ ಜಪಾನ್‌ನ ಜನತೆ ಯುದ್ಧದ ಕುರಿತಾದ ಕ್ರೋಧವನ್ನು ಅದ್ಭುತವಾದ ರೀತಿಯಲ್ಲಿ ಸ್ಫೋಟಿಸಿತು. 651 ಪಟ್ಟಣಗಳಲ್ಲಿ 391 ಪಟ್ಟಣಗಳನ್ನು 'ನ್ಯೂಕ್ಲಿಯರ್ ವಿಮುಕ್ತ ಪ್ರದೇಶ'ಗಳೆಂದು ಘೋಷಿಸಲು ಕರೆ ಕೊಡಲಾಗಿದೆ. ಶಸ್ತ್ರಾಸ್ತ್ರ ಪೈಪೋಟಿಯನ್ನು ನಿಲ್ಲಿಸಲು ಒತ್ತಾಯಿಸಿ 30 ಮಿಲಿಯನ್ ಸಹಿಗಳನ್ನು ಸಂಗ್ರಹಿಸಲಾಗಿದೆ. ಮೇ ತಿಂಗಳ ಮಧ್ಯ ಭಾಗದಲ್ಲಿ ಮೂರು ಲಕ್ಷದ ಬಲಿಷ್ಠ ಪ್ರದರ್ಶನ ಟೋಕಿಯೋದಲ್ಲಿ ನಡೆಯಿತು. ಹಿರೋಷಿಮಾದಲ್ಲಿ ಎರಡು ಲಕ್ಷ ಜನರ ಬೃಹತ್ ರ್‍ಯಾಲಿ ನಡೆಯಿತು.

ಅಮೇರಿಕದಲ್ಲೇ ನಡೆಯುತ್ತಿರುವ ಶಾಂತಿಗಾಗಿಯ ಧೀರ ಹೋರಾಟ ಮಹತ್ವಪೂರ್ಣವಾದುದು. 1981ರ ಮೇನಲ್ಲಿ ವಾಷಿಂಗ್ಟನ್‌ನಲ್ಲಿ ನಡೆದ ಒಂದು ಲಕ್ಷ ಜನರ ರ್‍ಯಾಲಿ ಯುದ್ಧದ ವಿರುದ್ಧವಾಗಿ ಮತ್ತು ಅಮೇರಿಕವು ಎಲ್‌ಸಾಲ್ವಡೋರ್‌ನಲ್ಲಿ ಮಧ್ಯ ಪ್ರವೇಶಿಸುವುದನ್ನು ತೀವ್ರವಾಗಿ ವಿರೋಧಿಸಿತು. ನ್ಯೂಯಾರ್ಕ್‌ನಲ್ಲೂ ಇಂಥದೇ ಪ್ರದರ್ಶನ ನಡೆಯಿತು. ಮಿಲಿಟರಿಗಾಗಿ ಹೆಚ್ಚು ಹಣ ವೆಚ್ಚ ಮಾಡಿದಷ್ಟೂ ತಮ್ಮ ಅರ್ಥವ್ಯವಸ್ಥೆ ಅವನತಿ ಹೊಂದುವುದೆಂಬುದನ್ನು ಅಮೇರಿಕನ್ ಜನತೆ ಅರಿತಿದ್ದಾರೆ. ಶಸ್ತ್ರಾಸ್ತ್ರಗಳ ಮೇಲಿನ ವೆಚ್ಚವನ್ನು ರೇಗನ್ ಸರ್ಕಾರ 180 ಬಿಲಿಯನ್ ಡಾಲರುಗಳಿಗೆ ಏರಿಸಿದಾಗ ಸಾಮಾಜಿಕ ಸೇವೆಯ ವೆಚ್ಚದಲ್ಲಿ 48 ಬಿಲಿಯನ್ ಡಾಲರುಗಳ ಕಡಿತ ಉಂಟಾಯಿತು. ಇಂಥ ಸಂದರ್ಭದಲ್ಲಿ ವಾಷಿಂಗ್ಟನ್ನಿನ ಐದು ಲಕ್ಷ ಕಾರ್ಮಿಕರು 'ನಮಗೆ ಉದ್ಯೋಗಬೇಕು, ಬಾಂಬುಗಳಲ್ಲ' ಎಂಬ ಘೋಷಣೆಗಳನ್ನು ಕೂಗಿದ್ದು ಆಶ್ಚರ್ಯವೇನಲ್ಲ. ಡಿಸೆಂಬರ್ 81ರಲ್ಲಿ 160 ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ನ್ಯೂಕ್ಲಿಯರ್ ಯುದ್ಧ ಯೋಜನೆಯ ವಿರುದ್ಧ ಅಧ್ಯಯನ ಕೂಟಗಳನ್ನು ನಡೆಸಿದರು. ಈ ವಿದ್ಯಾರ್ಥಿಗಳ ಘೋಷಣೆ 'ಮೆದುಳುಗಳಿಗಾಗಿ ನಿಧಿ, ಬಾಂಬುಗಳಿಗಲ್ಲ' ಎನ್ನುವುದಾಗಿತ್ತು.

ಇಡೀ ಜಗತ್ತಿನ ಜನರಿಗೆ ಶಾಂತಿಯ ಮುಖ್ಯ ಶತ್ರು ಅಮೇರಿಕಾ ಮತ್ತದರ ಕೂಟ ಎನ್ನುವುದು ಅರ್ಥವಾಗಿದೆ. ಬಹುಪಾಲು ಪ್ರದರ್ಶನಗಳು ಅಮೇರಿಕದ ಯುದ್ಧ ಯೋಜನೆಯ ವಿರುದ್ಧ ನಡೆದಿರುವುದು ಇದಕ್ಕೆ ಸಾಕ್ಷ್ಯ ಒದಗಿಸಿದೆ. ಶಾಂತಿಗಾಗಿ ಹೋರಾಡುವ ಎಲ್ಲರೂ ನಿಶ್ಶಸ್ತ್ರೀಕರಣದ ಕುರಿತು ಸೋವಿಯತ್ ಯೂನಿಯನ್ನಿನ ಪಾರಂಭಿಕ ಹೆಜ್ಜೆಗಳನ್ನು ಅಭಿನಂದಿಸಿದ್ದಾರೆ.

ಮತ್ತೊಂದು ಕಡೆಯಲ್ಲಿ ಶಾಂತಿಗಾಗಿ ಹೋರಾಡುತ್ತಿರುವ ಉದ್ರಿಕ್ತ ಜನಸಮೂಹ ಲಂಡನ್‌ನಿಂದ ಬರ್ಲಿನ್‌ವರೆಗೆ 'ರೇಗನ್ ಹಿಂತಿರುಗು' ಎಂಬ ಘೋಷಣೆಯನ್ನು ಕೂಗುತ್ತಿದ್ದಾರೆ.

○

ಯುದ್ಧದ ಕಾರ್ಮೋಡಗಳು

ನ್ಯೂಯಾರ್ಕಿನ, ಪ್ಯಾರಿಸ್ಸಿನ, ಲಂಡನ್ನಿನ ಝಗಝಗಿಸುವ ದೀಪರಾಶಿಗಳ ವೈಭವದ ಹಿಂದೆ ಮುಸುಕು ಹೊದ್ದುಕೊಂಡ ಒಂದು ಕರಾಳ ಮುಖ ಅಡಗಿಕೊಂಡಿದೆ ಎಂಬುದು ನಿಮಗೆ ಗೊತ್ತಿದೆಯೇ? ಕ್ಯೂಬಾ ಮತ್ತು ಚಿಲಿ, ಜಿಂಬಾಬ್ವೆ ಮತ್ತು ಕಾಂಗೋ, ವಿಯೆಟ್ನಾಂ, ಲಾವೋಸ್ ಮತ್ತು ಕಂಪೂಚಿಯಾ ಈ ದೇಶಗಳ ಹೆಸರನ್ನು ಕೇಳಿದರೆ ಆ ಕರಾಳಮುಖ ಯಾವುದೆಂದು ಬಿಡಿಸಿ ಹೇಳಬೇಕಾಗಿಲ್ಲ. ಹಣ, ಇನ್ನಷ್ಟು ಹಣ, ಲಾಭ, ಮತ್ತಷ್ಟು ಲಾಭ, ಕೊನೆಯಿಲ್ಲದ ಲಾಭ ಇವೆಲ್ಲದಕ್ಕಾಗಿ ಈ ದೇಶಗಳ ಬಡಜನತೆಯ ರಕ್ತದಲ್ಲಿ ಕೈ ಅದ್ದಿದ, ಸಾವಿನದುರ್ನಾತ ಹೊಡೆಯುತ್ತಿರುವ ಈ ಕರಾಳ ಸಾಮ್ರಾಜ್ಯಶಾಹಿ ಈಗ ಪ್ಯಾಲೆಸ್ಟೈನ್‌ನಲ್ಲಿ, ದಕ್ಷಿಣ ಆಫ್ರಿಕಾದಲ್ಲಿ, ಮಧ್ಯ ಅಮೇರಿಕಾದಲ್ಲಿ ಅತ್ಯಾಚಾರ, ಹಿಂಸೆ, ನರಮೇಧವನ್ನು ಮುಂದುವರಿಸುತ್ತಿದೆ.

ಅಸಹ್ಯ ಹಿಂಸೆ, ಅತ್ಯಾಚಾರ, ದೀರ್ಘ ಕಾಲದ ಬಂಧನ, ಜನತಾಂತ್ರಿಕ ಹಕ್ಕುಗಳಿಂದ ವಂಚನೆ ಇವೆಲ್ಲಾ ಒಂದೆಡೆ ದಿನೇ ದಿನೇ ಹದಗೆಡುತ್ತಾ ದಟ್ಟ ದಾರಿದ್ರ್ಯದ ಕಂದರದೊಳಗಿಳಿಯುತ್ತಿರುವ ಈ ದೇಶಗಳ ಜನಸಾಮಾನ್ಯರ ಜೀವನ ಪರಿಸ್ಥಿತಿ ಇನ್ನೊಂದೆಡೆ, ಸಮಸ್ಯೆಗಳ ಪರಿಹಾರಕ್ಕೆ ಶಾಂತಿಯುತ ರಾಜಕೀಯ ಪ್ರಯತ್ನಗಳಿಗೆ ಪ್ರತ್ಯುತ್ತರವಾಗಿ ಅಮಾನುಷ ದಬ್ಬಾಳಿಕೆ, ಸಾಮ್ರಾಜ್ಯಶಾಹಿಗಳ ದುರಾಕ್ರಮಣ ಎದುರಿಸಿರುವ ಈ ಜನ ಈಗ ಸಶಸ್ತ್ರ ಹೋರಾಟ ತಮಗಿರುವ ಏಕೈಕ ಮಾರ್ಗ ಎಂದು ಕಂಡುಕೊಂಡಿದ್ದಾರೆ. ಈಗ ಅಲ್ಲಿ ವರ್ಗ ಆಳ್ವಿಕೆಯ ದಿನನಿತ್ಯದ ಹಿಂಸಾಚಾರದ ವಿರುದ್ಧ ಸಮರಸಾರುವ ಮೂಲಕ ಶಾಂತಿ ಸ್ಥಾಪಿಸಲು ಯತ್ನಿಸಲಾಗುತ್ತಿದೆ. ಇದಕ್ಕೆ ಪ್ರತಿಯಾಗಿ ಸಾಮ್ರಾಜ್ಯಶಾಹೀ ಶಕ್ತಿಗಳು, ವಿಶೇಷವಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನದ ರೀಗನ್ ಆಡಳಿತ, ತಮ್ಮ ಸಂಕುಚಿತ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು, ಶೋಷಣೆಯನ್ನು ಖಾಯಂಗೊಳಿಸಲು ಅಂತರರಾಷ್ಟ್ರೀಯ ಅಭಿಪ್ರಾಯವನ್ನು ಎಗ್ಗಿಲ್ಲದೆ ಧಿಕ್ಕರಿಸಿ ಯುದ್ಧದ ತಯಾರಿ ನಡೆಸುತ್ತಿವೆ. ಶಾಂತಿಗಾಗಿ ಹೋರಾಡುವವರು ಇದನ್ನು ವಿಶೇಷವಾಗಿ ಗಮನಿಸಬೇಕು.

ಪ್ಯಾಲೆಸ್ಟೈನ್ : ತಾಯ್ನೆಲದ ಹಂಬಲ

ಎಲ್ಲಾ ಮಾನವೀಯ ಮೌಲ್ಯಗಳನ್ನು ಗಾಳಿಗೆ ತೂರಿ ಹೆಂಗಸರು, ಮಕ್ಕಳು, ಮುದುಕರ ಮೇಲೆ ಬಾಂಬು ಸುರಿಮಳೆಗರೆಯುತ್ತಿರುವ ಇಸ್ರೇಲ್ ಹಾಗೂ ಅದರ ಬೆಂಬಲಕ್ಕಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ಸುಮಾರು ನಾಲ್ಕು ದಶಕಗಳಿಂದ ತಾಯ್ನಾಡಿಗಾಗಿ ಹೋರಾಡುತ್ತಿರುವ ಪ್ಯಾಲೆಸ್ಟೈನ್‌ರ ಸಮಸ್ಯೆಗಳ ಇತಿಹಾಸವನ್ನು ಪರಿಶೀಲಿಸಿದರೆ ನಮಗೆ ಎದುರಾಗುವುದು ಒಂದು ವಿಚಿತ್ರ ತರ್ಕ. ಯೆಹೂದ್ಯರ ಮೇಲೆ ಅಮಾನುಷ ಅತ್ಯಾಚಾರ ನಡೆಸಿದ ದೇಶಗಳು ಹಿಟ್ಲರನ ಜರ್ಮನಿ ಹಾಗೂ ಇತರ ಯುರೋಪಿಯನ್ ದೇಶಗಳು. ಆ ಅಪರಾಧಗಳಿಗೆ ಶಿಕ್ಷೆ ಅನುಭವಿಸಬೇಕಾದವರು ಯಾರು? ಅದೇ ಯುರೋಪಿಯನ್ ದೇಶಗಳು ತಾನೇ? ಆದರೆ ಸಾಮ್ರಾಜ್ಯಶಾಹಿಗಳ ತರ್ಕವೇ ಬೇರೆ. ಆ ದೇಶಗಳ ಮೇಲೆ ಆ ಬಗ್ಗೆ ಯಾವ ಜವಾಬ್ದಾರಿಯನ್ನೂ ಹೊರಿಸದೆ ಪ್ಯಾಲೆಸ್ಟೈನ್‌ರಿಂದ ಅವರ ತಾಯ್ನೆಲವನ್ನು ಕಿತ್ತುಕೊಂಡು ಯೆಹೂದ್ಯರಿಗೆ ಕೊಟ್ಟು ಯುರೋಪಿಯನ್ ಆಳರಸು ತಮ್ಮ ಸಮಸ್ಯೆ ಪರಿಹರಿಸಿಕೊಂಡರು. ಈ ವೈಚಿತ್ರ್ಯ ಇಲ್ಲಿಗೇ ನಿಲ್ಲಲಿಲ್ಲ. ಭಯೋತ್ಪಾದನೆಗೆ ಒಳಗಾದವರು ಸ್ವತಃ ಭಯೋತ್ಪಾದಕರಾದರು, ಲೂಟಿಗೆ ಒಳಗಾದವರು ಸ್ವತಃ ದರೋಡೆಕೋರರಾದರು. ಹಿಟ್ಲರನ ಕೈಯಲ್ಲಿ ಹೇಳತೀರದ ಹಿಂಸೆ ಅನುಭವಿಸಿದ ಇಸ್ರೇಲಿನ ಯೆಹೂದ್ಯರು ಹಿಟ್ಲರನನ್ನೂ ಮೀರಿಸಿಬಿಟ್ಟರು! ವಸಾಹತುಶಾಹಿಗಳ, ನವವಸಾಹತುಶಾಹಿಗಳ ಶೋಷಣೆಯ ವೈಖರಿ ಹಾಗೂ ಹಠವನ್ನು ತಿಳಿದಾಗ ಮಾತ್ರ ಈ 'ವೈಚಿತ್ರ್ಯ'ವನ್ನು ಅರ್ಥಮಾಡಿಕೊಳ್ಳಲು ಸಾಧ್ಯ.

1917ರಲ್ಲಿ ಪ್ರಥಮ ಮಹಾಯುದ್ಧದ ಸಮಯದಲ್ಲಿ ಬ್ರಿಟಿಶರು ಆಗ



ಬಂಧಿತ ಪಿ.ಎಲ್.ಓ. ಯೋಧರಿಗೆ ಚಿತ್ರಹಿಂಸೆ

ತುರ್ಕರ ಅಧೀನದಲ್ಲಿದ್ದ ಪ್ಯಾಲೆಸ್ಟೈನ್ ಮೇಲೆ ಅಧಿಕಾರ ಜಮಾಯಿಸಿದರು. ಯುದ್ಧದಲ್ಲಿ ಅರಬರು ಹಾಗೂ ಯೆಹೂದ್ಯರು ಇಬ್ಬರಿಂದಲೂ ಬೆಂಬಲ ಗಿಟ್ಟಿಸಿಕೊಳ್ಳಲು ಇಬ್ಬರಿಗೂ ಈ ಪ್ರದೇಶವನ್ನು ಕೊಡುವುದಾಗಿ ಬ್ರಿಟಿಶರು ಆಶ್ವಾಸನೆಯಿತ್ತರು! ಗಮನಿಸಬೇಕಾದ ಅಂಶವೆಂದರೆ ಆಗಲೂ ಪ್ಯಾಲೆಸ್ಟೈನ್‌ನ ಜನಸಂಖ್ಯೆಯಲ್ಲಿ ಯೆಹೂದ್ಯರ ಸಂಖ್ಯೆ ಏಳು ಶೇಕಡಾ, ಕ್ರಿಶ್ಚಿಯನ್ನರು ಹತ್ತು ಶೇಕಡಾ ಹಾಗೂ ಮುಸ್ಲಿಂ ಅರಬ್ಬರ ಸಂಖ್ಯೆ ಎಂಭತ್ತು ಶೇಕಡಾ! ಬ್ರಿಟಿಷರ ಆಶ್ವಾಸನೆಯೊಂದಿಗೇ ಇಸ್ರೇಲ್ ಸ್ಥಾಪಿಸುವ ಯೆಹೂದ್ಯರ ಪ್ರಯತ್ನ ಆರಂಭವಾಯಿತು. ಪಶ್ಚಿಮ ಯುರೋಪಿನ ನಗರಗಳಿಂದ ಹಣದ ಹೊಳೆಯೇ ಇಲ್ಲಿಗೆ ಹರಿಯಿತು. ಅರಬ್ ರೈತರಿಂದ ಅತೀ ಅಗ್ಗದ ಬೆಲೆಯಲ್ಲಿ ಜಮೀನು ಕಸಿದುಕೊಳ್ಳಲಾಯಿತು. ಪ್ಯಾಲೆಸ್ಟೈನ್ನರನ್ನು ಅವರ ತಾಯ್ನೆಲದಿಂದ ಹೊರದಬ್ಬುವ ಕೆಲಸ ಭರದಿಂದ ಆರಂಭವಾಯಿತು. 1947ರ ನವಂಬರ್‌ನಲ್ಲಿ ಪಶ್ಚಿಮ ಯುರೋಪಿಯನ್ನರ ಪ್ರಭಾವದಲ್ಲಿದ್ದ ಸಂಯುಕ್ತ ರಾಷ್ಟ್ರಸಂಸ್ಥೆ ಪ್ಯಾಲೆಸ್ಟೈನ್‌ನ್ನು ಇಬ್ಭಾಗ ಮಾಡಿ ಯೆಹೂದ್ಯರು ಹಾಗೂ ಪ್ಯಾಲೆಸ್ಟೈನ್‌ರ ನಡುವೆ ಹಂಚಬೇಕೆಂದು ನಿರ್ಧರಿಸಿತು. 1948ರಲ್ಲಿ ಪ್ಯಾಲೆಸ್ಟೈನರ ಭವಿಷ್ಯದ ಬಗ್ಗೆ ಸಂಯುಕ್ತ ರಾಷ್ಟ್ರಸಂಸ್ಥೆ ವಿಚಾರ



ಝಿಯೋನಿಸ್ಟರ ಗಂಧಕ್ ಬಾಂಬ್‌ನ ಪರಿಣಾಮ

ನಡೆಸುತ್ತಿರುವಾಗಲೇ ಮೇ 14ರಂದು ಝಿಯೋನಿಸ್ಟರು ಇಸ್ರೇಲಿನ ಸ್ಥಾಪನೆಯ ಏಕಪಕ್ಷೀಯ ಘೋಷಣೆ ಹೊರಡಿಸಿದರು. ಪಶ್ಚಿಮ ಯುರೋಪಿನ ದೇಶಗಳು ಝಿಯೋನಿಸ್ಟರ ಈ ಕುತಂತ್ರದಲ್ಲಿ ಶಾಮೀಲಾಗಿದ್ದವು. ಅಮೇರಿಕಾದಿಂದ ಶಸ್ತ್ರಾಸ್ತ್ರಗಳೂ ಹೊಸ ದೇಶ ಇಸ್ರೇಲ್‌ಗೆ ಹರಿಯಲು ತಡವಾಗಲಿಲ್ಲ. ಯೆಹೂದೀ ಭಯೋತ್ಪಾದಕರ ತಂಡಗಳು ನಿರಾಯುಧರಾಗಿದ್ದ ಪ್ಯಾಲೆಸ್ಟೈನ್ ಹೆಂಗಸರು, ಮಕ್ಕಳು, ಮುದುಕರ ಸಾಮೂಹಿಕ ಹತ್ಯೆ ನಡೆಸಿದರು. ಇಂತಹ ಭಯೋತ್ಪಾದಕರ ಒಂದು ತಂಡದ ನಾಯಕ ಈಗ ಇಸ್ರೇಲಿನ ಪ್ರಧಾನ ಮಂತ್ರಿ ಬೆಗಿನ್!

ಪ್ಯಾಲೆಸ್ಟೈನನ್ನು ಒಡೆದು ಸಾಮ್ರಾಜ್ಯಶಾಹಿಗಳ ಶಿಶು ಇಸ್ರೇಲ್ ರಚನೆಯಾದಾಗ 5 ಲಕ್ಷದಷ್ಟಿದ್ದ ಯೆಹೂದ್ಯರಿಗೆ 42% ಪ್ರದೇಶ ದೊರೆತರೆ, ಒಂದೂಕಾಲು ಕೋಟಿ ಪ್ಯಾಲೆಸ್ಟೈನ್ನರಿಗೆ ದೊರೆತದ್ದು ಪರ್ವತಮಯವಾದ ಬಂಜರು ಪ್ರದೇಶ! ಇಸ್ರೇಲಿನ ಉದಯದೊಂದಿಗೇ ನಾಗರೀಕ ಹಕ್ಕು ಕಳೆದುಕೊಂಡ ಪ್ಯಾಲೆಸ್ಟೈನ್ನರನ್ನು ನಂತರ ಇಸ್ರೇಲ್ ನಡೆಸಿದ ನಾಲ್ಕು ಯುದ್ಧಗಳಲ್ಲಿ ವಿವಿಧ ಅರಬ್ ದೇಶಗಳಲ್ಲಿ ನಿರಾಶ್ರಿತ ಶಿಬಿರಗಳಲ್ಲಿ ಹರಿದು ಹಂಚಲಾಯಿತು. ಈ ರೀತಿ ತಾಯ್ನೆಲದಿಂದ ಕಿತ್ತೆಸೆಯಲ್ಪಟ್ಟೋ ಅಥವಾ ಇಸ್ರೇಲಿನ ದಬ್ಬಾಳಿಕೆಗೊಳಗಾಗಿಯೋ ಬದುಕಬೇಕಾಗಿ ಬಂದಿರುವ ಪ್ಯಾಲೆಸ್ಟೈನರು ನಿಜವಾಗಿಯೂ ಒಂದು ವಿರಾಟ್ ಅಂತರರಾಷ್ಟ್ರೀಯ ವಂಚನೆಯ ರಾಜಕೀಯದ ಬಲಿಪಶುಗಳಾದರು. ಪ್ರದೇಶದಿಂದ ಪ್ರದೇಶಕ್ಕೆ ನಿರಾಶ್ರಿತರಾಗಿ ಅಟ್ಟಲ್ಪಡುತ್ತಿರುವ ಇವರು ಜೋರ್ಡಾನ್‌ನ ಲೆಬನಾನ್‌ಗೆ ಹೋದರು. ಅಲ್ಲಿಂದ ಮುಂದೆಲ್ಲಿಗೋ? ಇಸ್ರೇಲ್‌ನ ಆಕ್ರಮಣ ತಕ್ಷಣ ನಿಲ್ಲಬೇಕು. ಸಾಮ್ರಾಜ್ಯಶಾಹಿಗಳ ಕುತಂತ್ರಗಳನ್ನು ಮುರಿದು ಪ್ಯಾಲೆಸ್ಟೈನ್ ದೇಶದ ರಚನೆಗೆ ಅವಕಾಶವಾಗಬೇಕು.

ದಕ್ಷಿಣ ಆಫ್ರಿಕಾ ವರ್ಣಭೇದ ನೀತಿಗೆ ಸವಾಲು

ಝಿಯೋನಿಸ್ಟ್ ಇಸ್ರೇಲ್ ಮಧ್ಯಪೂರ್ವದಲ್ಲಿ ಸಾಮ್ರಾಜ್ಯಶಾಹಿಗಳ ಪೋಲೀಸ್ ಪೇದೆಯಾದರೆ ಆಫ್ರಿಕಾದ ದಕ್ಷಿಣ ಭಾಗದಲ್ಲಿ ದಕ್ಷಿಣ ಆಫ್ರಿಕಾದ ಬಿಳಿಯರ ವರ್ಣಭೇದ ನೀತಿಯ ಸರಕಾರ ಇಂತಹ ಪೋಲೀಸ್ ಪೇದೆ. ಶತಮಾನಗಳ ಕಾಲ ಕರಿಯರನ್ನು ಸೂರೆ ಮಾಡುತ್ತಿದ್ದ ಬಿಳಿಯರಿಗೆ ಎಪ್ಪತ್ತರ ದಶಕದಲ್ಲಿ ಮೊಜಾಂಬಿಕ ಹಾಗೂ ಅಂಗೋಲಾ ಮೊದಲ ತಡೆಯೊಡ್ಡಿದವು. ಅಂದಿನಿಂದ ಆಫ್ರಿಕಾ ಖಂಡದ ದಕ್ಷಿಣ ಭಾಗ ಸಾಮ್ರಾಜ್ಯಶಾಹಿಗಳು ಹಾಗೂ ವಿಮೋಚನಾ ಶಕ್ತಿಗಳ ನಡುವಿನ ಹೋರಾಟದ ಕಣವಾಗಿದೆ. ಅಂಗೋಲಾ, ಮೊಜಾಂಬಿಕ್ ನಂತರ ಜಿಂಬಾಬ್ವೆಯಲ್ಲಿ ಲತ್ತೆ ತಿಂದ ಸಾಮ್ರಾಜ್ಯಶಾಹಿಗಳು ಈಗ ನಮೀಬಿಯಾದಲ್ಲಿ ಅದನ್ನೇ ಎದುರಿಸಬೇಕಾಗಿ ಬಂದಿದೆ. ದಕ್ಷಿಣ ಆಫ್ರಿಕಾದಲ್ಲೂ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ನೇತೃತ್ವದ ವಿಮೋಚನಾ ಹೋರಾಟ ಈ ಎಲ್ಲಾ ವಿಜಯಗಳಿಂದ ಪ್ರೋತ್ಸಾಹ ಪಡೆದು ಹೊಸ ಘಟ್ಟವನ್ನು ತಲುಪಿದೆ. ಈ ಮುತ್ತಲಿನದೇಶಗಳಾದ ಮೊಜಾಂಬಿಕ್, ಅಂಗೋಲಾ ಹಾಗೂ ಜಿಂಬಾಬ್ವೆಯ ಮೇಲೆ ಆಕ್ರಮಣ ನಡೆಸಲಾಗುತ್ತಿದೆ. ಈ ದೇಶಗಳು ವಿಮೋಚನೆಗೊಳ್ಳುವ ಮೊದಲು ಪ್ರತಿಕ್ರಿಯಾವಾದೀ ಶಕ್ತಿಗಳಿಗೆ ಸಂಪೂರ್ಣ ಬೆಂಬಲ ಕೊಟ್ಟು ಈ ಹಿಂದೆ ಇದೇ ಸಾಮ್ರಾಜ್ಯಶಾಹಿಗಳು ಸಾವಿರಾರು ಜನರನ್ನು ಕೊಂದಿದ್ದರು. ಈಗಲೂ ಸಾಮ್ರಾಜ್ಯಶಾಹಿಗಳು ಇಲ್ಲಿ ಮಿಲಿಯಗಟ್ಟಲೆ ಡಾಲರುಗಳ ಶಸ್ತ್ರಾಸ್ತ್ರ ಸುರಿದು ಸಾವಿರಾರು ಜನರ ಜೀವದೊಂದಿಗೆ ಆಟವಾಡುತ್ತಿರಲು ಕಾರಣ ಕೂಡಾ ಅದೇ - ಅತೀ ಲಾಭದ ಆಸೆ, ಶೋಷಣೆಗೆ ತಡೆ ಬರುವ ಭಯ. ಆಫ್ರಿಕಾ ಖಂಡದ ದಕ್ಷಿಣ ಭಾಗದ 1200 ಕಿ. ಮೀ. ಉದ್ದದ ಕರಾವಳಿ ಸಾಮ್ರಾಜ್ಯಶಾಹಿಗಳ ವ್ಯಾಪಾರೀ ಮಾರ್ಗಗಳನ್ನು ರಕ್ಷಿಸುವ ಕೆಲಸಕ್ಕೆ ಅತೀ ಮಹತ್ವದ ಪ್ರದೇಶ. ಈ ಪ್ರದೇಶದ ಯುರೇನಿಯಂ, ತೈಲ, ಚಿನ್ನ, ತಾಮ್ರ ಹಾಗೂ ಕಲ್ಲಿದ್ದಲ ಮೇಲೆ ಕಣ್ಣಿಟ್ಟಿರುವ ಸಾಮ್ರಾಜ್ಯಶಾಹಿಗಳು ಹೇಗೆ ತಾನೇ ಈ ಪ್ರದೇಶದ ಜನರ



ವರ್ಣದ್ವೇಷಿಗಳ ಶೃಂಖಲೆಯಲ್ಲಿ ದ. ಆಫ್ರಿಕಾ

ಹಿನ್ನೆಲೆಯಲ್ಲಿ ದಕ್ಷಿಣ ಆಫ್ರಿಕಾದ ಬಿಳಿಯರ ಸರಕಾರ ಸಾಮ್ರಾಜ್ಯಶಾಹಿಗಳ ಹಿತಾಸಕ್ತಿ ರಕ್ಷಿಸುವ ಏಕೈಕ ಶಕ್ತಿಯಾಗಿ ಉಳಿದಿದೆ. ಸ್ವಾಭಾವಿಕವಾಗಿಯೇ ಪಶ್ಚಿಮ ಯುರೋಪಿನ ದೇಶಗಳಿಂದ ಹಾಗೂ ಅಮೇರಿಕಾದಿಂದ ಶಸ್ತ್ರಾಸ್ತ್ರಗಳ ಸರಬರಾಜು ಅವ್ಯಾಹತವಾಗಿ ಸಾಗುತ್ತಿದೆ. ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯ ಬಿಳಿಯರ ಸರಕಾರವನ್ನು ಸಜ್ಜುಗೊಳಿಸಿ ಆಂತರಿಕವಾಗಿ ವಿಮೋಚನಾ ಹೋರಾಟವನ್ನು ಬಗ್ಗುಬಡಿಯಲು, ಹೊರಗೆ ಸುತ್ತ ವಿಮೋಚನಾ ಹೋರಾಟಗಳನ್ನು ಸಹಿಸಿಯಾರು?

ಆದರೂ ಸಾಮ್ರಾಜ್ಯಶಾಹಿಗಳ ಲೆಕ್ಕಾಚಾರ ಈ ಪ್ರದೇಶದಲ್ಲಿ ಏರುಪೇರಾಗುತ್ತಿದೆ. ಆಂತರಿಕವಾಗಿ ದಬ್ಬಾಳಿಕೆ ಹೆಚ್ಚಿದಂತೆ ದಿನೇ ದಿನೇ ಬಲಗೊಳ್ಳುತ್ತಿರುವ ವಿಮೋಚನಾ ಚಳವಳಿ, ಜತೆಗೆ ಅಂತರರಾಷ್ಟ್ರೀಯವಾಗಿ ವರ್ಣಭೇದ ನೀತಿಗೆ ತೋರ್ಪಡುತ್ತಿರುವ ಧಿಕ್ಕಾರ ದಕ್ಷಿಣ ಆಫ್ರಿಕಾದ ಬಿಳಿಯರ ಸರಕಾರ ಹಾಗೂ ಅದರ ಬೆನ್ನಿಗೆ ನಿಂತಿರುವ ರೀಗನ್ ಸರಕಾರವನ್ನು ಏಕಾಕಿಯಾಗಿ ಮಾಡುತ್ತಿವೆ. ಈ ಏಕಾಕಿತನವನ್ನು

ಇತಿಹಾಸದ ರುಧಿರ ಅಧ್ಯಾಯ

ಫ್ಯಾಸಿಸಂನ ಪತನ

ಆಗಸ್ಟ್ 30, 1939 : ಬೇಸಿಗೆಯ ಒಂದು ಮುಸ್ಸಂಜೆ : ಕೆಲವು ನಾಝಿ ಸೈನಿಕರು ಪೋಲಿಸ್ ಸೈನಿಕರ ಸಮವಸ್ತ್ರದಲ್ಲಿ ಜರ್ಮನ್-ಪೋಲೆಂಡ್ ದೇಶಗಳ ಗಡಿಯಲ್ಲಿರುವ ಗ್ಲಿವಿಟ್ಜ್ ನಗರದ ಬಾನುಲಿ ನಿಲಯಕ್ಕೆ ನುಗ್ಗಿದರು. ಒಬ್ಬ 'ಪೋಲ್' ಸೈನಿಕನು ಒಂದು ಪುಟ್ಟ ಭಾಷಣವನ್ನೂ ಸಹ ಮಾಡಿ— "ಜರ್ಮನಿಯ ವಿರುದ್ಧ ಯುದ್ಧದ ಘೋಷಣೆ ಮಾಡುವ ಕಾಲ ಸನ್ನಿಹಿತವಾಗಿದೆ"—ಎಂದು ಸಾರಿಯೇ ಬಿಟ್ಟನು. ಅದೇ ಸಮಯಕ್ಕೆ ಅವನ ಸ್ನೇಹಿತರು ಬಾನುಲಿ ನಿಲಯದ ಹೊರಗೆ ಜರ್ಮನಿಯ ಗಡಿ ರಕ್ಷಕ ಪಡೆಯವರೊಂದಿಗೆ ಒಂದು ಅಣಕು ಯುದ್ಧವನ್ನೂ ಮಾಡಿಬಿಟ್ಟರು.

ಈ ರೀತಿಯಾಗಿ ಜರ್ಮನಿಯವರು ಪೋಲೆಂಡ್‌ನವರ ವಿರುದ್ಧ ಕದನ ಹೂಡುವ ವಾತಾವರಣ ನಿರ್ಮಾಣವಾಯಿತು.

ಸೆಪ್ಟೆಂಬರ್ 1, 1930 : ಬೆಳಗಿನ ಜಾವ 4-40 ನಿಮಿಷ: ಪೋಲೆಂಡ್‌ನ ಡಾನ್‌ಸ್ಕ್ ಪಟ್ಟಣದ ಬಂದರು : 'ಸೌಹಾರ್ದ ಭೇಟಿ' ನೀಡಿದ್ದ ಜರ್ಮನಿಯ ಯುದ್ಧ ನೌಕೆಯೊಂದು, ತನ್ನಲ್ಲಿದ್ದ ಎಲ್ಲ ತುಪಾಕಿಗಳಿಂದಲೂ ಗುಂಡಿನ ಮಳೆಗೆರೆದು ಪೋಲೆಂಡಿನ ಸಮರ ನೌಕೆಯೊಂದನ್ನು ನಿರ್ಜೀವಗೊಳಿಸಿತು — ಅದೇ ಸಮಯಕ್ಕೆ ಜರ್ಮನ್ ಸೈನಿಕರು ಎಲ್ಲಾ ದಿಕ್ಕುಗಳಿಂದಲೂ ಪೋಲೆಂಡಿನ ಗಡಿ ದಾಟಿ ಒಳಗೆ ಬಂದರು— ಅದೇ ಕ್ಷಣದಲ್ಲಿ ಜರ್ಮನಿಯ ಯುದ್ಧ ವಿಮಾನಗಳು, ಇನ್ನೂ ಸಕ್ಕರೆ ನಿದ್ದೆಯಲ್ಲಿದ್ದ ಶಾಂತಿ ರಾಷ್ಟ್ರವಾದ ಪೋಲೆಂಡ್‌ನ ನಗರ ಹಾಗೂ ಹಳ್ಳಿಗಳ ಮೇಲೆ ಸಾವಿರಾರು ಟನ್ನಿನಷ್ಟು ಬಾಂಬನ್ನು ಎಸೆದು ಹಾರಿ ಹೋದವು.

ಈ ರೀತಿಯಾಗಿ ಈವರೆಗಿನ ಮಾನವ ಇತಿಹಾಸದಲ್ಲೇ ಅತ್ಯಂತ ಭೀಕರವಾದ ಎರಡನೇ ಮಹಾಯುದ್ಧವು ಪ್ರಾರಂಭವಾಯಿತು. ಹೀಗೆ ಶುರುವಾದ ಯುದ್ಧವು ಪ್ರಪಂಚದ 61 ಪಟ್ಟಣಗಳನ್ನು-ಪ್ರಪಂಚದ 80% ರಷ್ಟು ಜನಸಂಖ್ಯೆಯನ್ನು ತನ್ನ ಪ್ರವಾಹದಲ್ಲಿ ಸೆಳೆದೊಯ್ಯಿತು. 6 ವರ್ಷಗಳ ಕಾಲದಷ್ಟು ದೀರ್ಘವಾಗಿ ನಡೆದ ಯುದ್ಧದಲ್ಲಿ ಸುಮಾರು 5 ಕೋಟಿಯಷ್ಟು ಜನರು ತಮ್ಮ ಪ್ರಾಣವನ್ನು ಕಳೆದುಕೊಂಡರು.

ಏತಕ್ಕಾಗಿ ಈ ಯುದ್ಧ ?

ಮೊದಲನೆ ಮಹಾಯುದ್ಧವು ಮುಗಿದ ಸ್ವಲ್ಪ ದಿನದಲ್ಲೇ ಭಯಂಕರವಾದ ಎರಡನೇ ಮಹಾಯುದ್ಧಕ್ಕೆ ಹಂಚಿಕೆಗಳನ್ನು ಹೂಡಿ - ಎರಡನೇ ಮಹಾಯುದ್ಧದ ಮೂಲಕ ಮತ್ತೆ ಪ್ರಪಂಚವನ್ನು ಹೇಗೆ ತಮಗೆ ಬೇಕಾದ ಹಾಗೆ ಒಡೆಯಬೇಕು ಎಂಬ ಕಲ್ಪನೆಗಳನ್ನು ಯೋಚಿಸಲಾಯಿತು.

ಮೂವತ್ತರ ದಶಕದ ಪ್ರಥಮ ವರ್ಷಗಳಲ್ಲಿ ಅತ್ಯಂತ ಭೀಕರವಾದ ಹಣದುಬ್ಬರವು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ತೋರಿತು.—ಮುಖ್ಯವಾಗಿ 1932 ರಲ್ಲಿ. 1929-32, ಈ ಮೂರು ವರ್ಷದಲ್ಲಿ ಅಮೇರಿಕಾದಲ್ಲಿ ಉತ್ಪನ್ನವು 50% ರಷ್ಟು ಕೆಳಗಿಳಿದರೆ, ಜರ್ಮನಿಯಲ್ಲಿ ಅದು 40% ರಷ್ಟು ಜಾರಿತ್ತು. ನಿರ್ಮೂಲಗೊಳಿಸಲಾರದಷ್ಟು ನಿರುದ್ಯೋಗ ಸಮಸ್ಯೆಯನ್ನು ಇದು ಉಂಟುಮಾಡಿ, ಸಾಮಾನ್ಯ ಜನರ ಜೀವನ ಮಟ್ಟವು ತೀವ್ರಮಟ್ಟದಲ್ಲಿ ಕೆಳಗಿಳಿಯುವಂತೆ ಮಾಡಿತು.

ಈ ಸಮಯದಲ್ಲಿ ಆಫ್ರಿಕಾ ಖಂಡದಲ್ಲಿ ಲೈಬೀರಿಯಾ ಮತ್ತು ಇಥಿಯೋಪಿಯಾ ರಾಷ್ಟ್ರಗಳೂ ಹಾಗೂ ಏಷ್ಯಾ ಖಂಡದಲ್ಲಿ ನೇಪಾಳ ಮತ್ತು ಥಾಯ್‌ಲ್ಯಾಂಡ್ ದೇಶಗಳು ಮಾತ್ರ ಸ್ವತಂತ್ರ ರಾಷ್ಟ್ರಗಳಾಗಿದ್ದವು.

ವಸಾಹತು ರಾಷ್ಟ್ರಗಳ ಬೇಡಿಕೆಗಳನ್ನು ತಿಳಿದು ಅದರಿಂದ ಬರುವ ಉತ್ಪನ್ನಗಳನ್ನು ಸ್ವಹಿತಕ್ಕೆ ಉಪಯೋಗಿಸಿಕೊಳ್ಳುವ ವಿಧಾನವೇ ಬಂಡವಾಳಶಾಹಿ ರಾಷ್ಟ್ರಗಳು ಲಾಭ ಗಳಿಸುವ ಮೂಲ ಮಾರ್ಗವಾಗಿತ್ತು. ಹೀಗಾಗಿ 30ರ ದಶಕದ ಹಣದುಬ್ಬರದ ಕಾಲದಲ್ಲಿ ತಮ್ಮ ಪ್ರತಿಷ್ಠೆ ಮತ್ತು ಬಂಡವಾಳ ಹೂಡುವ ಕಚ್ಚಾಟದಲ್ಲಿ ಪ್ರತಿಯೊಂದು ಬಂಡವಾಳಶಾಹಿ ರಾಷ್ಟ್ರವು ಪ್ರತಿಸ್ಪರ್ಧೆಯಲ್ಲಿ ತೊಡಗಿತು. ಇದರೊಟ್ಟಿಗೆ ರಷ್ಯ ದೇಶವು ಈ ವೇಳೆಗಾಗಲೇ ಸಮಾಜವಾದಿ ರಾಷ್ಟ್ರವಾಗಿತ್ತು. ಯಾವುದೇ ಬಂಡವಾಳಶಾಹಿ ರಾಷ್ಟ್ರವು ಅಲ್ಲಿ ಬಂಡವಾಳ ಹೂಡದ ಹಾಗೆ ಇದ್ದ ಪರಿಸ್ಥಿತಿಯಿಂದ ಈ ಪ್ರತಿ ಸ್ಪರ್ಧೆಯ ಕಚ್ಚಾಟವು ಜಾಸ್ತಿಯಾಗಿತ್ತು.

ಯುದ್ಧಕ್ಕೆ ಮತ್ತೊಂದು ಕಾರಣ ಎಂದರೆ, ಜರ್ಮನಿಯು ತಾನು ಮೊದಲನೇ ಮಹಾಯುದ್ಧದ ನಂತರ ಕಳೆದುಕೊಂಡಿದ್ದ ಮಿಲಿಟರಿ ಶಕ್ತಿಯನ್ನು ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಅತಿ ಶೀಘ್ರಗತಿಯಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳನ್ನು ಹಿಂದೆ ಹಾಕಿ ಸರಿಪಡಿಸಿಕೊಂಡಿತು. ಅದೇ ಸಮಯದಲ್ಲಿ ಜಪಾನ್ ದೇಶವು ಏಷ್ಯಾ ಖಂಡದಲ್ಲಿ ತನಗೆ - ಪ್ರತಿಸ್ಪರ್ಧಿಗಳಾಗಿದ್ದ ಪಶ್ಚಿಮ ರಾಷ್ಟ್ರಗಳನ್ನು ಕೆಳಗಿಳಿಸಿ, ಆರ್ಥಿಕ ರಂಗದಲ್ಲಿ ಸ್ವಾವಲಂಬನೆಯನ್ನು ಪಡೆಯಿತು.

ಜರ್ಮನಿ, ಜಪಾನ್‌ಗಳ ಜೊತೆಗೆ ಇಟಲಿ ರಾಷ್ಟ್ರವೂ ಸೇರಿದಂತೆ-ಪ್ರಪಂಚವನ್ನು ಮತ್ತೆ ವಿಭಾಗಿಸಲು ಹೊಸ ಯೋಜನೆಗಳನ್ನು ಹಾಕಲು ಪ್ರಾರಂಭಿಸಿದವು. ಈ ರಾಷ್ಟ್ರಗಳ ಮುಖ್ಯ ಶತ್ರುಗಳೆಂದರೆ ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಾ ದೇಶಗಳಾಗಿದ್ದವು. ಆದರೆ ಈ ರಾಷ್ಟ್ರಗಳು ಎಲ್ಲಾ ರೀತಿಯಿಂದಲೂ ಪ್ರಪಂಚದ ಬಹು ದೊಡ್ಡ ರಾಷ್ಟ್ರಗಳಾಗಿದ್ದುದರಿಂದ, ಅವು ಘರ್ಷಣೆ ಇಲ್ಲದೆ ತಮ್ಮ ಸ್ಥಾನಗಳನ್ನು ಬಿಟ್ಟುಕೊಡುವ ಪರಿಸ್ಥಿತಿ ಇರಲಿಲ್ಲ. ಹೀಗಾಗಿ 1930 ರಲ್ಲಿ ಪ್ರಪಂಚದ ಮೂರು ಕಡೆ ಎರಡನೇ ಮಹಾಯುದ್ಧದ ಲಕ್ಷಣಗಳು ಮತ್ತು ತಯಾರಿಗಳು ಕಂಡು ಬಂದವು. ಅದೆಂದರೆ, ಯೂರೋಪ್ ಖಂಡದಲ್ಲಿ- ಫ್ಯಾಸಿಸ್ಟ್ ಜರ್ಮನ್, ಏಷ್ಯಾ ಖಂಡದಲ್ಲಿ— ಫ್ಯಾಸಿಸ್ಟ್ ಜಪಾನ್ ಮತ್ತು ಆಫ್ರಿಕಾ ಖಂಡದಲ್ಲಿ — ಫ್ಯಾಸಿಸ್ಟ್ ಇಟಲಿಯೂ. ಎರಡನೇ ಮಹಾಯುದ್ಧ ಉಗಮ ಸ್ಥಾನಗಳಾದವು.

ಮೇಲೆ ಹೇಳಿದ ಪ್ರದೇಶಗಳಲ್ಲಿ ಸಾಕಷ್ಟು ಕದನಗಳು ನಡೆದವು. ಪ್ರತಿಫಲವಾಗಿ ಜಪಾನ್ ದೇಶವು 1932 ರಲ್ಲಿ ಮಂಚೂರಿಯಾವನ್ನು ಕಬಳಿಸಿತು; ಇಥಿಯೋಪಿಯಾ, ಇಂಥ್ರಿಯಾ ಮತ್ತು ಸೋಮಾಲಿಯಾ ರಾಷ್ಟ್ರಗಳನ್ನು ಸೋಲಿಸಿ 1935ರಲ್ಲಿ ಇಟಲಿಯು 'ಇಟಾಲಿಯನ್ ಪೂರ್ವ ಆಫ್ರಿಕಾ' ಎಂಬ ಹೊಸ ಖಂಡವನ್ನೇ ಸೃಷ್ಟಿಸಿತು. 1933ರಲ್ಲಿ ಜರ್ಮನಿಯು ಇಡೀ ಪ್ರಪಂಚವನ್ನು ಆಳುವ ಆಸೆಯನ್ನು ವ್ಯಕ್ತಪಡಿಸಿದ್ದು; ಅದು ತನ್ನ ಮಿಲಿಟರಿ ಶಕ್ತಿಯನ್ನು ಹೆಚ್ಚುಪಡಿಸಿಕೊಂಡಿದ್ದು; ಲೀಗ್ ಆಫ್ ನೇಷನ್ಸ್‌ನ ಧೋರಣೆಯನ್ನು ಧಿಕ್ಕರಿಸಿದ್ದು; 1919ರ ವರ್ಸೆಲೀಸ್ ಶಾಂತಿ ಒಪ್ಪಂದವನ್ನು ಮುರಿದದ್ದು ಮತ್ತು ಕಡೆಯದಾಗಿ 1936ರಲ್ಲಿ ಸ್ಪೇನ್‌ನ ಅಂತರ್ಯುದ್ಧವನ್ನು ಹುಟ್ಟುಹಾಕಿದ್ದು; ಇವುಗಳಿಂದ ಯೂರೋಪ್ ಖಂಡವು ಯುದ್ಧದ ವಾತಾವರಣದಲ್ಲಿ ಭೀಬತ್ಸವಾಯಿತು.

ಹೊಸ ತಿರುವುಗಳು :

ಈ ವೇಳೆಗಾಗಲೇ ಸೋವಿಯತ್ ರಷ್ಯವು ಸಮಾಜವಾದಿ ರಾಷ್ಟ್ರವಾಗಿದ್ದುದರಿಂದ ಮತ್ತು ಈಗಿನ್ನೂ ಶುರುವಾಗುತ್ತಿದ್ದ ಎರಡನೇ ಮಹಾಯುದ್ಧವು, ಜಗತ್ತಿನ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಎರಡು ಭಾಗಗಳನ್ನಾಗಿ ವಿಭಾಗಿಸಿತು.



ಹಿಟ್ಲರನ ಕನಸು ನುಚ್ಚುನೂರು.

ರಿಚ್‌ಸ್ಟಾಗ್ ಮೇಲೆ ಕೆಂಬಾವುಟ

ವಿರೋಧಿ ಗುಂಪಿನಲ್ಲಿ ಸಾಮ್ರಾಜ್ಯಶಾಹಿಗಳ ಒಕ್ಕೂಟವೇ ಇತ್ತು. ಈ ಒಕ್ಕೂಟದಲ್ಲಿ ಒಳಜಗಳಗಳು ಸಾಕಷ್ಟು ಇದ್ದರೂ, ಸಮಾಜವಾದಿ ರಾಷ್ಟ್ರವಾದ ಸೋವಿಯತ್ ರಷ್ಯದೊಂದಿಗೆ ಹಗೆತನವನ್ನು ಸಾಧಿಸಲು ಮತ್ತು ರಷ್ಯದಿಂದ ಸಮಾಜವಾದವನ್ನು ಬುಡಸಹಿತ ಕಿತ್ತೆಸೆಯಲು ಪಣತೊಟ್ಟಿದ್ದವು.

ನಾಝಿ ಜರ್ಮನಿಯ ಬಣವು ಸೋವಿಯತ್ ರಷ್ಯಾವನ್ನು ಅದರದೇ ಮಿಲಿಟರಿ ಶಕ್ತಿಯಿಂದ ಸೋಲಿಸಲು ಪ್ರಯತ್ನಿಸುತ್ತಿತ್ತು. ಮತ್ತೊಂದೆಡೆ ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಾ ರಾಷ್ಟ್ರಗಳು, ಬೇರೆ ಯಾವುದಾದರೂ ರಾಷ್ಟ್ರದ ಮಿಲಿಟರಿ ಶಕ್ತಿಯ ಸಹಾಯ ಮತ್ತು ಹೆಸರಿನಿಂದ ರಷ್ಯಾವನ್ನು ಸೋಲಿಸಲು ಹವಣಿಸುತ್ತಿದ್ದವು. ಹೀಗಾಗಿ ಇವು ನಾಝಿ ಜರ್ಮನಿಯ ಬಣಕ್ಕೆ ರಷ್ಯಾದ ವಿರುದ್ಧ ಹೋರಾಡಲು ಬೇಕಾದ ಸಹಾಯವನ್ನು ಕೊಟ್ಟು, ಕುಮ್ಮಕ್ಕನ್ನು ನೀಡಿದವು. ನಿಜವಾದ ಅರ್ಥದಲ್ಲಿ ಬ್ರಿಟನ್-ಫ್ರಾನ್ಸ್-ಅಮೇರಿಕಾ ರಾಷ್ಟ್ರಗಳು ಈ ರೀತಿ ಸಹಾಯ ಮಾಡುವುದರಿಂದ ಒಂದೆಡೆ ರಷ್ಯ ಮೂಲೆಗುಂಪಾಗುವುದಲ್ಲದೆ, ಮತ್ತೊಂದೆಡೆ ನಾಝಿ ಜರ್ಮನಿಯ ಸೈನಿಕರು ಮತ್ತು ಬಣವೂ ಸಹ ಯುದ್ಧದಲ್ಲಿ ಸಾಯುತ್ತದೆ ಎಂದು ಅಪೇಕ್ಷಿಸುತ್ತಿದ್ದವು.

ಈ ಮಹಾ ಯೋಜನೆಯ ಸೃಷ್ಟಿಕರ್ತನೆಂದರೆ ಅಮೇರಿಕಾದ ಶಾಸಕ ಟ್ರೂಮನ್. ನಂತರದ ದಿನಗಳಲ್ಲಿ ಅವನು ಅಮೇರಿಕಾದ ಅಧ್ಯಕ್ಷನೂ ಆದ. ನಾಝಿಗಳು ರಷ್ಯಾವನ್ನು ಮುತ್ತಿದ ಮಾರನೇ ದಿನ ಅವನು ನೀಡಿದ ಪತ್ರಿಕಾ ಹೇಳಿಕೆ ಹೀಗಿತ್ತು : "ನಮಗೆ ಜರ್ಮನರು ಗೆಲ್ಲುತ್ತಾರೆ ಅನ್ನಿಸಿದರೆ, ರಷ್ಯಾದವರಿಗೆ ಸಹಾಯ ಮಾಡುವ ರಷ್ಯದವರು ಗೆಲ್ಲುತ್ತಿದ್ದಾರೆ ಅನ್ನಿಸಿದರೆ ಜರ್ಮನರಿಗೆ ಸಹಾಯ ಮಾಡುವ....ಒಟ್ಟಿನಲ್ಲಿ ಈ ಯುದ್ಧದಲ್ಲಿ ಸಾಧ್ಯವಾದಷ್ಟು ಪರಸ್ಪರ ಕೊಲೆಗಳು ನಡೆಯಲಿ".—

(ನ್ಯೂಯಾರ್ಕ್ ಟೈಮ್ಸ್ 24-6-1941)

ಹೀಗಾಗಿ ಸಾಮ್ರಾಜ್ಯಶಾಹಿ ಒಕ್ಕೂಟವು ಜರ್ಮನ್ ಫ್ಯಾಸಿಸ್ಟರಿಗೆ ಮೇಲಿನ ಆಸೆ ಈಡೇರುವ ದಿಕ್ಕಿನಲ್ಲಿ ಸಹಾಯವನ್ನು ಮಾಡುತ್ತಾ ಹೋಯಿತು. ಇದರ ಫಲವಾಗಿ ಫ್ರಾನ್ಸ್ ರಾಷ್ಟ್ರವು ಇಥೋಪಿಯಾದ ವಿಷಯದಲ್ಲಿ ಇಟಲಿಯೊಂದಿಗೆ ರಾಜಿ ಮಾಡಿಕೊಂಡಿತು; ಪ್ರಖ್ಯಾತ 'ಮ್ಯೂನಿಚ್ ಒಡಂಬಡಿಕೆ'ಯ ಮುಖಾಂತರ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಜರ್ಮನಿಯೊಂದಿಗೆ ಜೆಕೊಸ್ಲೋವಾಕಿಯಾ ವಿಷಯದಲ್ಲಿ ರಾಜಿ ಮಾಡಿಕೊಂಡು, ಜರ್ಮನಿಯು ತಮ್ಮ ದೇಶದ ವಿರುದ್ಧ ಹಗೆತನ ಸಾಧಿಸದಿರುವ ಹಾಗೆ ರಾಜಿ ಸೂತ್ರವನ್ನು ಹಿಡಿದು, ಜರ್ಮನಿಯನ್ನು ಪೂರ್ವ ರಾಷ್ಟ್ರಗಳ ಮೇಲೆ ಮುತ್ತಿಗೆ ಹಾಕುವ ಹಾಗೆ ನಿರ್ದೇಶನಗಳನ್ನು ನೀಡಿತು.

ಅದರೆ, ಇದೇ ಸಮಯದಲ್ಲಿ ರಷ್ಯಾ ದೇಶವು ಬ್ರಿಟನ್–ಅಮೇರಿಕಾ-ಫ್ರಾನ್ಸ್ ರಾಷ್ಟ್ರಗಳೊಂದಿಗೆ ಕೂಡಿ 'ಫ್ಯಾಸಿಸ್ಟ್ ವಿರೋಧಿ' (Anti fisicts) ಒಕ್ಕೂಟವನ್ನು ರಚಿಸಲು ಶಕ್ತಿಮೀರಿ ಪ್ರಯತ್ನಿಸಿತು. ಆದರೆ ಇದಕ್ಕೆ ಸಾಮ್ರಾಜ್ಯವಾದಿ ಒಕ್ಕೂಟವು ಮುಂದೆ ಬರಲಿಲ್ಲ. ರಷ್ಯಾವು ತನ್ನ ಸ್ನೇಹಹಸ್ತವನ್ನು ನೀಡಲು ಸಿದ್ಧವಿದ್ದ ಕಾಲದಲ್ಲೂ ಸಹ, ಅಮೇರಿಕಾ-ಬ್ರಿಟನ್ ಮತ್ತು ಫ್ರಾನ್ಸ್ ರಾಷ್ಟ್ರಗಳು ಒಂದೆಡೆ ಫ್ಯಾಸಿಸ್ಟರನ್ನು ಮತ್ತೊಂದೆಡೆ ಸಮಾಜವಾದವನ್ನು ಪರಸ್ಪರ ಕಿತ್ತಾಟದಲ್ಲಿ ಸಾಯಿಸುವ ಭ್ರಮೆಯಲ್ಲೇ ಇದ್ದವು.

ಜನವರಿ 1, 1939ರಲ್ಲಿ ಗಾರ್ಡಿಯನ್ ಪತ್ರಿಕೆ ಪ್ರಕಟಿಸಿದ್ದ ಲೇಖನ ಹೀಗಿತ್ತು :

1939ರ ಮಂತ್ರಿ ಮಂಡಳದ

(ಪುರವಣಿ IIನೇ ಪುಟ ನೋಡಿ)

ಮಣ್ಣುಗೂಡಿದ ಹಿಟ್ಲರನ ಕನಸು

(ಪುರವಣಿ Iನೇ ಪುಟದಿಂದ)

ಪತ್ರಿಕೆಯ ಮುಖಾಂತರ ನಮಗೆ ತಿಳಿಯುವುದೇನೆಂದರೆ, ಚೇಂಬರ್ ಲೇನ್ ಸರ್ಕಾರವು ರಷ್ಯಾದ ಸಲಹೆಯಾದ ಬ್ರಿಟನ್-ಫ್ರಾನ್ಸ್-ಅಮೇರಿಕಾ ಮತ್ತು ರಷ್ಯ ರಾಷ್ಟ್ರಗಳ ನಡುವಣ ಮೈತ್ರಿಯ ಕರಾರನ್ನು ಅರ್ಥಮಾಡಿಕೊಂಡು ಅದನ್ನು ಒಪ್ಪಿಕೊಂಡಿದ್ದರೆ, ಎರಡನೇ ಮಹಾಯುದ್ಧವು ಪ್ರಾರಂಭವಾಗುತ್ತಲೇ ಇರಲಿಲ್ಲ; ಏಕೆಂದರೆ ಜರ್ಮನಿಯು ಒಟ್ಟಿಗೆ ಎರಡು ದಿಕ್ಕಿನಲ್ಲಿ ನಾಲ್ಕು ರಾಷ್ಟ್ರಗಳ ಮಿಲಿಟರಿ ಶಕ್ತಿಗಳ ವಿರುದ್ಧ ಹೋರಾಡುವ ಸಾಹಸವನ್ನು ಮಾಡುತ್ತಿರಲಿಲ್ಲ. ಇದರಿಂದಾಗಿ ಪಶ್ಚಿಮ ರಾಷ್ಟ್ರಗಳ ಒಳ ಆಸೆಯಾದ ಜರ್ಮನಿಯನ್ನು ರಷ್ಯಾದ ಮತ್ತು ಜಪಾನ್ ವಿರುದ್ಧ ಕದನ ಹೂಡುವ ಪ್ರಯತ್ನವು ಫಲಿಸಿತು.

ಈ ಹಿನ್ನೆಲೆಯಲ್ಲಿ ರಷ್ಯಾವು ಜರ್ಮನ್ ದೇಶದೊಂದಿಗೆ ಆಗಸ್ಟ್ 39 ರಲ್ಲಿ 'ಆಕ್ರಮಣ-ವಿರೋಧಿ' ನೀತಿಯ ಒಡಂಬಡಿಕೆಯನ್ನು ಮಾಡಿಕೊಂಡಿತು. ಈ ಪ್ರಖ್ಯಾತವಾದ 10 ವರ್ಷಗಳ ಒಡಂಬಡಿಕೆಯ ಸೂತ್ರವು ಜೋಸೆಫ್ ಸ್ಟಾಲಿನ್‌ರ ಬುದ್ಧಿವಂತಿಕೆಯಿಂದ ಹೊರಬಂದು ಸೋವಿಯತ್ ರಷ್ಯಾಕ್ಕೆ ರಕ್ಷಣಾ ಪಡೆಯನ್ನು ಮತ್ತೆ ಸುಸಜ್ಜಿತಗೊಳಿಸಿಕೊಳ್ಳಲು ಸಮಯವನ್ನು ನೀಡಿತು. ಜೊತೆಗೆ ಜರ್ಮನ್ ಪಡೆಯು ರಷ್ಯಾದ ಮೇಲೆ ದಾಳಿ ಮಾಡುವುದರಿಂದ ತನಗೆ ಮಂಗೋಲಿಯಾ ದೇಶದಮೇಲಿನ ಹಿತವನ್ನುಭದ್ರಪಡಿಸಿಕೊಳ್ಳಲು ಸಹಾಯಕವಾಗಬಹುದೆಂಬ ಜಪಾನ್‌ನ ಆಲೋಚನೆಯನ್ನು ಸಹ ತಲೆಕೆಳಗು ಮಾಡಿತು. ಇದರ ಜೊತೆಗೆ 1941ರಲ್ಲಿ ರಷ್ಯಾ ಮತ್ತು ಜಪಾನ್ ದೇಶಗಳು ತಟಸ್ಥ ನೀತಿಯ ಒಡಂಬಡಿಕೆ ಸಹಿ ಮಾಡಿದವು. ಇದೆಲ್ಲವೂ ಸೋವಿಯತ್ ರಷ್ಯಾಕ್ಕೆ ತನ್ನ ರಕ್ಷಣಾ ಪಡೆಯು ವ್ಯವಸ್ಥಿತ ರೀತಿಯಲ್ಲಿ ಫ್ಯಾಸಿಸ್ಟ್ ಜರ್ಮನಿಯ ದಾಳಿಯನ್ನು ತಡೆಹಿಡಿಯಲು ಸಹಾಯ ಮಾಡಿತು.

ಯುದ್ಧಾರಂಭ :

ಈ ಎಲ್ಲಾ ಹಿನ್ನೆಲೆಯಲ್ಲಿ ಎರಡನೇ ಮಹಾಯುದ್ಧವು ನಡೆಯಿತು. ಜರ್ಮನಿಯು ಪೋಲೆಂಡನ್ನು ಮುತ್ತಿದ 2 ದಿನಗಳಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ಜರ್ಮನಿಯ ವಿರುದ್ಧ ತಮ್ಮ ಯುದ್ಧವನ್ನು ಸಾರಿದವು. ಆದರೆ, ಅದು ಕ್ರಿಯಾತ್ಮಕವಾಗಿ ಏನನ್ನೂ ಸಾಧಿಸಲು ಆಗಲಿಲ್ಲ; ಕಾರಣ ಎಂದರೆ ಈ ಎರಡೂ ದೇಶಗಳೂ ಯುದ್ಧ ಘೋಷಣೆ ನೀಡಿದ ನಂತರದ 9 ತಿಂಗಳುಗಳಲ್ಲಿ ಯಾವುದೇ ರೀತಿಯ ಯುದ್ಧ ಸನ್ನಾಹವನ್ನು ನಡೆಸಲಿಲ್ಲ. ಆ ವೇಳೆಗಾಗಲೇ ಅಂದರೆ ಸುಮಾರು ಅಕ್ಟೋಬರ್ 39ರಲ್ಲಿ ಜರ್ಮನಿಯು ಪೋಲೆಂಡ್ ದೇಶವನ್ನು ತನ್ನ ಕೈಯೊಳಗೆ ಸಂಪೂರ್ಣವಾಗಿ ತೆಗೆದುಕೊಂಡುಬಿಟ್ಟಿತ್ತು.

1940ರ ಏಪ್ರಿಲ್ ವೇಳೆಗೆ ಜರ್ಮನಿಯು ನಾರ್ವೆ ಮತ್ತು ಡೆನ್ಮಾರ್ಕ್ ನಗರಗಳನ್ನು ಕೈವಶಪಡಿಸಿಕೊಂಡಿತು.

ಅದೇ ವರ್ಷದ ಮೇ ತಿಂಗಳಲ್ಲಿ ಅದು ಬೆಲ್ಜಿಯಂ, ನೆದರ್‌ಲ್ಯಾಂಡ್ಸ್ ಮತ್ತು ಲಕ್ಸೆಂಬರ್ಗ್ ಮಾರ್ಗವಾಗಿ ಫ್ರಾನ್ಸನ್ನು ಮುತ್ತಿತ್ತು.

ಜೂನ್ 22 ರಂದು ಫ್ರಾನ್ಸ್ ತನ್ನ ಶಸ್ತ್ರಾಸ್ತ್ರಗಳನ್ನು ಕೆಳಗೆ ಹಾಕಿ ಜರ್ಮನರಿಗೆ ಶರಣಾಗತವಾಯಿತು. ಪ್ಯಾರಿಸ್ ಸೇರಿದಂತೆ ಬಹುಪಾಲು ಭಾಗವನ್ನು ಕೈವಶ ಮಾಡಿಕೊಂಡು ಮಿಕ್ಕ ಭಾಗಕ್ಕೆ ತನ್ನ ಮಾತು ಕೇಳುವ ಸರ್ಕಾರವನ್ನು ನೇಮಿಸಿತ್ತು.

ಈ ಎಲ್ಲಾ ಸೋಲುಗಳಿಂದ ತಾವು ರಾಜಿ ಮಾಡಿಕೊಂಡು ಎಂತಹ ತಪ್ಪನ್ನು ಮಾಡಿದೆವು ಎಂಬ ಅರಿವು ಈಗ ಬ್ರಿಟನ್—ಫ್ರಾನ್ಸ್ ಅಮೇರಿಕಾ ರಾಷ್ಟ್ರಗಳಿಗೆ ಮನವರಿಕೆಯಾಯಿತು. ನಿಜವಾಗಿ ಹೇಳಬೇಕೆಂದರೆ ರಾಜಿಯಿಂದ ಜರ್ಮನಿಯ ಫ್ಯಾಸಿಸ್ಟ್‌ಗಳಿಗೆ ಹೆಚ್ಚು ಅನುಕೂಲವಾಗಿತ್ತು. ಅವರು ಬೇರೆ ಬೇರೆ ರಾಷ್ಟ್ರಗಳ ಜೊತೆ ಬೇರೆ ಬೇರೆ ವೇಳೆಯಲ್ಲಿ ಮಾಡಿಕೊಂಡ ಒಪ್ಪಂದಗಳನ್ನು ತಿರಸ್ಕರಿಸಿ ಯುದ್ಧವನ್ನು ಸಾರಿದ್ದರು. ಈಗ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಸಾಮಾನ್ಯ ಜನರು ಫ್ಯಾಸಿಸಂ ಬಗ್ಗೆ ಯೋಚಿಸಲು ತೊಡಗಿದ್ದರು. ತಮ್ಮ ದೇಶ ಮತ್ತು ವಸಾಹತು ರಾಷ್ಟ್ರಗಳು ಫ್ಯಾಸಿಸಂ ವಿರುದ್ಧ ಹೋರಾಡಲು ಅವರು ಕರೆ ಕೊಟ್ಟರು. ಇವೆಲ್ಲವು ಫ್ಯಾಸಿಸಂ ವಿರುದ್ಧ ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಾ ದೇಶವು ಸೂಕ್ತ ಧೋರಣೆಯನ್ನು ತಳೆಯಲು ಸಾಧ್ಯವಾಯಿತು.

ಜುಲೈ ೧೬, ೧೯೪೦

ಹಿಟ್ಲರ್ ತಲೆಯಲ್ಲಿ ಹೊಸ ಯೋಜನೆಯೊಂದು ಹುಟ್ಟಿಕೊಳ್ಳುತ್ತಿತ್ತು. ಅದರ ಪ್ರಕಾರವಾಗಿ ಅವನು 'ಸೀಲಯನ್' ಎಂಬ ಯೋಜನೆಯನ್ನು ತೇಲಿಬಿಟ್ಟ. ಇದರ ಪ್ರಕಾರವಾಗಿ ಒಂದು ಕಡೆ ಬ್ರಿಟನ್ ದೇಶವನ್ನು ದಾಳಿ ಮಾಡುವುದರೊಟ್ಟಿಗೆ ರಷ್ಯದ ದೂರದ ಪೂರ್ವದ ಗಡಿಪ್ರದೇಶದಲ್ಲೂ ಆಕ್ರಮಣ ನಡೆಸಲು ಒಟ್ಟೊಟ್ಟಿಗೆ ಸಿದ್ಧತೆ ನಡೆಸಿದ್ದ. ಈ ದುಸ್ಸಾಹಸಕ್ಕೆ ಇದುವರೆಗಿನ ಅವನ ವಿಜಯಗಳೇ ತಳಹದಿಯಾಗಿತ್ತು. ಅವನ ಪ್ರಕಾರ ಸೋವಿಯತ್ ರಷ್ಯಾವನ್ನು ಸೋಲಿಸಿದರೆ ಅವನ "ಪ್ರಪಂಚವನ್ನೇ ಆಳುವ" ಕನಸಿನ ಮೊದಲ ಗುರಿಯನ್ನು ಸಾಧಿಸುತ್ತಿದ್ದ. ಇದಕ್ಕೆ ಈ ಮುಂಚೆ ಹೇಳಿದ ಕಾರಣಗಳಿಗಾಗಿ ಬ್ರಿಟನ್-ಫ್ರಾನ್ಸ್ ದೇಶಗಳ ಸಹಕಾರವು ಅವನಿಗೆ ಇತ್ತು. ಆದ್ದರಿಂದ ತನ್ನ ಸೈನ್ಯದ ಬಹುಪಾಲು ಭಾಗವನ್ನು ಈಗ ತನ್ನ ಗೆಳೆಯರಾದ ಜಪಾನ್ ಮತ್ತು ಇಟಲಿ ದೇಶಗಳ ಸೈನಿಕರೊಂದಿಗೆ ಪೂರ್ವಕ್ಕೆ ಕಳುಹಿಸಿದ್ದ.

ಡಿಸೆಂಬರ್ ೧೮, ೧೯೪೦

ಹಿಟ್ಲರ್‌ನ ಮತ್ತೊಂದು ಗುಪ್ತ ಯೋಜನೆ— 'ಆಪರೇಶನ್ ಬಾರ್ಬೋಸ'ವನ್ನು ಸಹಿ ಮಾಡಿದ. ಇದರ ಪ್ರಕಾರ ಅವನು ಒಂದು ಕಡೆ ರಷ್ಯಾದ ಮೇಲೆ ಆಕ್ರಮಣವನ್ನ ಮುಂದುವರಿಸುತ್ತಾ ಮತ್ತೊಂದು ಕಡೆ ಬ್ರಿಟನ್‌ನ ಮೇಲೆ ಹೊಸದಾಳಿಯನ್ನು ಮಾಡುವ ಯೋಜನೆ ಇತ್ತು.

ಇದೇ ರೀತಿ ಅವನ ತಲೆಯಲ್ಲಿ ಸಾಕಷ್ಟು ಗುಪ್ತಯೋಜನೆಗಳು ಇದ್ದವು :

ಆದರೆ ಅವನಿಗೆ ಇವೆಲ್ಲಕ್ಕು ಇದ್ದ ಅಡಚಣೆ ಎಂದರೆ ಸೋವಿಯತ್ ರಷ್ಯ. ಆ ಕಾರಣದಿಂದ ಅವನು ಈಗ ಅದರ ಮೇಲೆ ಹೆಚ್ಚು ಒತ್ತು ಕೊಟ್ಟಿದ್ದ. ಆದರೆ ಸೋವಿಯತ್ ರಷ್ಯದ ಜನತೆ ಜಗತ್ತಿನ ಇತಿಹಾಸವನ್ನೇ ಬದಲು ಮಾಡಿಬಿಟ್ಟಿತು. ಅದು ಅವನ 'ಏಕ ಚಕ್ರಾಧಿಪತ್ಯ'ದ ಕನಸನ್ನು ನುಚ್ಚುನೂರು ಮಾಡಿದ್ದಲ್ಲದೆ ಪ್ರಪ್ರಥಮ ಬಾರಿಗೆ ಅವನಿಗೆ ಸೋಲಿನ ರುಚಿಯನ್ನು ನೀಡಿ ಅವನು ಆತ್ಮಹತ್ಯೆ ಮಾಡಿಕೊಳ್ಳುವ ಹಾಗೆ ಮಾಡಿತು. ಅಷ್ಟೇ ಅಲ್ಲದೆ ಫ್ಯಾಸಿಸಂ ಜಗತ್ತಿನ ಮೂಲೆ ಮೂಲೆಗೂ ಹಬ್ಬದ ಹಾಗೆ ತಡೆ ಒಡ್ಡಿತು. ಈ ಕಾರಣಕ್ಕಾಗಿ ಜಗತ್ತಿನ ಮಾನವ ಜನಾಂಗವು ರಷ್ಯ ದೇಶದ ಜನತೆಗೆ ಕೃತಜ್ಞರಾಗಿರಬೇಕು.

ಸ್ವದೇಶಾಭಿಮಾನದ ಮಹಾಯುದ್ಧ :

22 ತಿಂಗಳ ಯುದ್ಧದಲ್ಲಿ ಹಿಟ್ಲರನಿಗೆ ರಷ್ಯದ ತಟಸ್ಥ ನೀತಿಯ ಪಡೆಯಿಂದ ಆದ ಸೋಲು ಚೇತರಿಸಿಕೊಳ್ಳಲಾರದಷ್ಟು ಪೆಟ್ಟನ್ನು ಕೊಟ್ಟಿತು. ಅವನ ವಿರುದ್ಧ ನಿಂತಿದ್ದ ರಷ್ಯದ ಇಡೀ ಪಡೆಯು ಅವನಿಗೆ, ಯೂರೋಪಿನ ಎಲ್ಲಾ ಮಿಲಿಟರಿ ಶಕ್ತಿಗಳಿಗಿಂತ ಹೆಚ್ಚಿನದಾಗಿತ್ತು. [ಯೂರೋಪಿನ ಗುಂಪಿನಲ್ಲಿ ಪೋಲ್ಸ್, ಡೇನ್ಸ್, ನಾರ್ವೇಯನ್ಸ್, ಡಚ್, ಬೆಲ್‌ಜಿಯನ್ಸ್, ಫ್ರೆಂಚ್, ಗ್ರೀಕ್ಸ್, ಯುಗೋಸ್ಲಾವ್ಸ್ ಮತ್ತು ಬ್ರಿಟಿಷ್ ಪಡೆಗಳಿದ್ದವು.]

೨೨ ಜೂನ್ ೧೯೪೧

ಹಿಟ್ಲರನು ಆಕ್ರಮಣ ವಿರೋಧಿ ನೀತಿಯ ಕರಾರನ್ನು ಮುರಿದು ರಷ್ಯದ ಮೇಲೆ ಯುದ್ಧವನ್ನು ಸಾರಿದನು "ರಷ್ಯದ ಪಡೆಯನ್ನು ನಿರ್ನಾಮಗೊಳಿಸಿ ಆ ರಾಷ್ಟ್ರವನ್ನು ನೆಲಸಮಗೊಳಿಸುವುದೇ ನಮ್ಮ ಗುರಿ....ಇದು ಒಂದು ವಿನಾಶಕಾರಿ ಯುದ್ಧ" ಎಂದು ಹೇಳಿಕೆ ನೀಡಿದನು. ತನ್ನ ಸೈನಿಕ ಪಡೆಯ 77% ನ್ನು ರಷ್ಯದ ಗಡಿಯುದ್ದಕ್ಕು ವಿಸ್ತರಿಸಿ ಆಕ್ರಮಣ ನಡೆಸಿದನು. ಅವನ ಯೂರೋಪ್‌ನ ಮೇಲಿನ ಆಸೆಯು ಕಮ್ಮಿ ಆಗಿ, ಸದ್ಯಕ್ಕೆ ಅವನಿಗೆ ರಷ್ಯ ಮತ್ತು ಅದರ ಪಶ್ಚಿಮ ಭಾಗದ ರಾಷ್ಟ್ರಗಳು ಮುಖ್ಯವಾದವು.

ಜಗತ್ತಿನ ಎಲ್ಲಾ ರಾಷ್ಟ್ರಗಳ ದೃಷ್ಟಿಯೂ ಈಗ ಸೋವಿಯತ್ ರಷ್ಯದ ಮೇಲಿತ್ತು. ಇದರ ಬಗ್ಗೆ ವಿನ್‌ಸ್ಟನ್ ಚರ್ಚಿಲ್‌ರು ತಮ್ಮ ಪುಸ್ತಕದಲ್ಲಿ ಹೀಗೆ ನೆನಪಿಸಿಕೊಳ್ಳುತ್ತಾರೆ. ಜಗತ್ತಿನ ಎಲ್ಲಾ ಮಿಲಿಟರಿ ವಕ್ತಾರರೂ ಸಹ ಹಿಟ್ಲರನ ಮಿಲಿಟರಿ ಪಡೆಯಿಂದ ರಷ್ಯದ ಸೈನಿಕ ತುಕಡಿಯು ಸೋಲನ್ನು ಅನುಭವಿಸುತ್ತದೆ ಮತ್ತು ಹೆಚ್ಚಿನ ನಷ್ಟವನ್ನು ಅನುಭವಿಸುತ್ತದೆ ಎಂದು ಭಾವಿಸಿದ್ದರು". ಜರ್ಮನ್ನರು ಮೊದಲ ಕೆಲವು ವಾರಗಳಲ್ಲಿ ಬಹು ವೇಗವಾಗಿ ರಷ್ಯದ ಒಳಗೆ ನುಗ್ಗಿದ್ದರು. ಉತ್ತರದಲ್ಲಿ ಲೆನಿನ್‌ಗ್ರಾಡ್ ಕಡೆಗೆ, ಮಧ್ಯಭಾಗದಿಂದ ಮಾಸ್ಕೋ ಕಡೆಗೆ ಮತ್ತು ಸ್ಟಾಲಿನ್‌ಗ್ರಾಡ್ ಕಡೆಗೆ ಕೆಳಭಾಗದಿಂದ ಬಂದರು.

ಆದರೆ ಜರ್ಮನರಿಗೆ ಎಲ್ಲಾ ಎಣಿಸಿದಷ್ಟು ಸುಲಭವಾಗಿರಲಿಲ್ಲ. ಅವರು 1941ರ ಚಳಿಗಾಲದಲ್ಲಿ ಮಾಸ್ಕೋ ಕಡೆಗೆ ಮುಂದುವರಿಯುವುದನ್ನು ರಷ್ಯನ್ನರು ತಡೆದು ನಿಲ್ಲಿಸಿದರು ಜಗತ್ತನ್ನೇ ಕಬಳಿಸುವ, ತನ್ನ ಯೋಜನೆ ಮೊದಲ ಪ್ರಯತ್ನದಲ್ಲೇ ಫಲ ಪಡೆಯದೇ ಹೋದುದು ಹಿಟ್ಲರನಿಗೆ ಜಿಗುಪ್ಸೆಯನ್ನು ಉಂಟುಮಾಡಿತು. ದಿನ ದಿನಕ್ಕೆ ನಾಜಿ ಬಣದಲ್ಲಿ ಸಾವುನೋವು ಹೆಚ್ಚಾಗುತ್ತಾ ಬಂದಿತು. ಇಷ್ಟೆಲ್ಲಾ ಆದರೂ ಜರ್ಮನ್ನರು ಸ್ಟಾಲಿನ್‌ಗ್ರಾಡ್ ಕಡೆಗೆ ಹೋಗುವ ಪ್ರಯತ್ನವನ್ನು ಕೈಬಿಡಲಿಲ್ಲ. 42ರ ಬೇಸಿಗೆಯ ಹೊತ್ತಿಗೆ ಅವರು ಸ್ಟಾಲಿನ್‌ಗ್ರಾಡ್‌ನಲ್ಲಿ ಸುಮಾರು 30 ಮೈಲಿ ಒಳಗೆ ಬಂದಿದ್ದರು "ಹೇಗಾದರೂ ಮಾಡಿ ಸ್ಟಾಲಿನ್‌ಗ್ರಾಡ್‌ನ್ನು ಪಡೆಯಿರಿ"— ಇದು ಹಿಟ್ಲರನ ಘೋಷಣೆಯಾಗಿತ್ತು. "ವೋಲ್ಗಾ ನದಿಯಿಂದ ಮುಂದಕ್ಕೆ ಯಾವುದೂ ನೆಲವಿಲ್ಲ" ಇದು ಸ್ಟಾಲಿನ್‌ಗ್ರಾಡ್‌ನ ಮನೆ ಮಾತಾಯಿತು. ಇಂಥ ಸನ್ನಿವೇಶದಲ್ಲಿ 182 ದಿನಗಳ ಕಾಲದವರೆಗೆ ಸತತವಾಗಿ ಕದನ ನಡೆಯಿತು. ಸ್ಟಾಲಿನ್‌ಗ್ರಾಡ್‌ನ ಪ್ರತಿಯೊಬ್ಬ ಸಾಮಾನ್ಯ ಪ್ರಜೆಯೂ ತನ್ನ ಮನೆಯ ಉಪ್ಪರಿಗೆಯಿಂದಲೇ ಸಾವಿರಾರು ಟ್ಯಾಂಕ್ ಹಾಗೂ ವಿಮಾನಗಳನ್ನು ಎದುರಿಸಿದರು. ಇಷ್ಟು ಹೊತ್ತಿಗೆ ಸೈಬೀರಿಯಾದಿಂದ ರಷ್ಯದ ಹೊಸ ತುಕಡಿಗಳು ಬಂದವು. ಅವು ಸ್ಟಾಲಿನ್‌ಗ್ರಾಡ್‌ನಲ್ಲಿದ್ದ ಜರ್ಮನ್ ಪಡೆಗಳನ್ನು ಹಿಂಭಾಗದಿಂದ ಮುತ್ತಿ ಸ್ಟಾಲಿನ್‌ಗ್ರಾಡ್‌ನ್ನು ಮತ್ತೆ ತಮ್ಮದಾಗಿಸಿಕೊಂಡರು. ಫೆಬ್ರವರಿ 2,1943 ರಂದು 300 ಸಾವಿರ ಜರ್ಮನ್ನರು ರಷ್ಯನ್ನರಿಗೆ ಶರಣಾಗತರಾದರು. ಇದು ಜಗತ್ತಿನ ಗತಿಯನ್ನೇ ಬದಲಾಯಿಸಿತು.

ಮುಂದಿನ ಯುದ್ಧವು 2 ವರ್ಷಕ್ಕೂ ಮೇಲ್ಪಟ್ಟು ನಡೆಯುವುದಿತ್ತು. ಆದರೆ ಸ್ಟಾಲಿನ್‌ಗ್ರಾಡ್‌ನ ಸೋಲಿನ ನಂತರ ಜರ್ಮನ್ನರು ಹಿಂದೆಗೆಯಬೇಕಾಯಿತು. 1943 ರಲ್ಲಿ ಅವರು ಉಕ್ರೇನ್ ಪಟ್ಟಣದಿಂದ ಹೊರಹೋಗಬೇಕಾಯಿತು. 44 ರ ಬೇಸಿಗೆಯಲ್ಲಿ ಅವರು ರಷ್ಯದಿಂದ ನಿರ್ಗಮಿಸಲಾರಂಭಿಸಿದರು. ಅದೇ ವರ್ಷದ ಜುಲೈನಲ್ಲಿ ವಾರ್ಸಾದಲ್ಲಿ ಸೋಲು–ನಂತರ ಏಪ್ರಿಲ್ 45ರಲ್ಲಿ ಕೆಂಪು ತುಕಡಿಯು ಜರ್ಮನ್ನರಿಂದ ಬರ್ಲಿನ್‌ನ್ನು ವಶಪಡಿಸಿಕೊಂಡಿತು.

ರಷ್ಯನ್ನರು ಈ ಯುದ್ಧದಿಂದ ಜಗತ್ತಿನಲ್ಲಿ ಯಾರೂ ಅಜೇಯರಲ್ಲ ಎಂದು ಸಾರಿದರು. ಆದರೆ ಹೀಗೆ ಸಾರುವಾಗ ಅವರು ಅದಕ್ಕೆ ಸಾಕಷ್ಟು ಬೆಲೆಯನ್ನು ಕೊಡಬೇಕಾಗಿ ಬಂತು. 1418 ದಿನಗಳವರೆಗೆ ನಡೆದ ಈ ಮಹಾಯುದ್ಧದಲ್ಲಿ ಒಟ್ಟು 20 ಮಿಲಿಯ ರಷ್ಯನ್ನರು ತಮ್ಮ ಪ್ರಾಣವನ್ನು ದೇಶಕ್ಕಾಗಿ ಮುಡಿಪಾಗಿಟ್ಟರು. ಯುದ್ಧದಲ್ಲಿ ಪ್ರತಿ ನಿಮಿಷಕ್ಕೆ 9 ಜನರೂ ಮತ್ತು ಘಂಟೆಗೆ 857 ಜನರೂ ದಿನಕ್ಕೆ 14,000 ಜನರೂ ಸಾಯುತ್ತಿದ್ದರು. ಅದೇ ರೀತಿ ನಾಜಿಗಳು ಸಹ ರಷ್ಯನ್ನರ ವಿರುದ್ಧ ತಮ್ಮ ಸೈನ್ಯದ 607 ತುಕಡಿಗಳನ್ನು ಕಳೆದುಕೊಂಡರು. ಇದು ಯೂರೋಪ್ ರಾಷ್ಟ್ರದ ಮೇಲಿನ ಯುದ್ಧದಲ್ಲಿ ಕಳೆದುಕೊಂಡಿದ್ದಕ್ಕಿಂತ ಮೂರು ಪಟ್ಟು ಹೆಚ್ಚಾಗಿತ್ತು. ಒಟ್ಟು ಶೇ. 80 ಮಿಲಿಟರಿ ಶಕ್ತಿಯನ್ನು ಹಿಟ್ಲರ್ ರಷ್ಯನ್ನರ ವಿರುದ್ಧದ ಈ ಯುದ್ಧದಲ್ಲಿ ಕಳೆದುಕೊಂಡ.

ಜನತೆಯ ಯುದ್ಧ

ಯುದ್ಧವೆಲ್ಲವೂ ಸಂಪೂರ್ಣವಾಗಿ ಮುಗಿದ ನಂತರ ಜಗತ್ತಿನ ಪ್ರತಿಯೊಬ್ಬನ ಮನಸ್ಸಿನಲ್ಲೂ ಇದ್ದಂತಹ ಕುತೂಹಲ–ರಷ್ಯನ್ನರು ಈ ಯುದ್ಧದಲ್ಲಿ ಹೇಗೆ ಸಫಲರಾದರು ? ಇದಕ್ಕೆ ರಷ್ಯನ್ನರು ನೀಡಿದ ಉತ್ತರವೆಂದರೆ " ಎಲ್ಲಿ ಫಿರಂಗಿ ಮೊಳಗುವುದೋ ಅದು ಮಾತ್ರ ಯುದ್ಧ ಪ್ರದೇಶವಲ್ಲ. ಅದು ಎಲ್ಲೆಲ್ಲೂ ಇದೆ- ನನ್ನ ಮನೆಯ ತೋಟದಲ್ಲಿ ಹಾಗು ಎಲ್ಲೆಲ್ಲೂ " ಈ ಮಹಾಯುದ್ಧದಲ್ಲಿ ಪಾಲ್ಗೊಳ್ಳಲು ರಷ್ಯಾದ ಎಲ್ಲಾ ಜನತೆಯಲ್ಲೂ ಮನವಿ ಮಾಡಿಕೊಂಡ ಸ್ಟಾಲಿನ್ನರ ಮೊದಲ ಭಾಷಣದ ತೀವ್ರತೆ ಈ ರೀತಿ ಇತ್ತು. "ಜರ್ಮನರು ನಮ್ಮನ್ನೆಲ್ಲಾ ಕೊಚ್ಚಿ ಹಾಕಿ ನಿರ್ನಾಮ ಮಾಡಲು ಒಂದು ಮಹಾ ಅವಕಾಶವನ್ನೇ ಕಂಡುಕೊಂಡಿದ್ದಾರೆ.

ಜರ್ಮನ್ ಧಾಳಿಕಾರರಿಗೆಧಿಕ್ಕಾರವಿರಲಿ." ರಷ್ಯಾದ ಜನತೆ ಈ ಯುದ್ಧವನ್ನು ಬೇರೆ ರಾಷ್ಟ್ರಗಳಂತೆ ಬರೀ ಜರ್ಮನರ ದಾಳಿಯೆಂತಲೋ ಅಥವಾ ಕೇವಲ ನಮಗೆ ಸಂಬಂಧಿಸಿದ್ದು ಎಂತಲೋ ಖಂಡಿತಾ ಭಾವಿಸಿರಲಿಲ್ಲ. ಅವರಲ್ಲಿದ್ದ ದೂರದೃಷ್ಟಿಯೆಂದರೆ "ಹಿಟ್ಲರನ ಗೆಲುವು ಫ್ಯಾಸಿಸಂನ ಗೆಲುವು. ಫ್ಯಾಸಿಸಂನ ಗೆಲುವಿನಿಂದ ಮಾನವಕೋಟಿಯ ನಿರ್ನಾಮವೆಂದು.' ಈ ಕಾರಣಕ್ಕಾಗಿ ಅವರು ಏನೆಲ್ಲವನ್ನೂ ಕಳೆದುಕೊಳ್ಳಲು ಸಿದ್ಧರಿದ್ದರು. ಜರ್ಮನರು ಬರುವ ದಾರಿಯಲ್ಲಿ ಇದ್ದ ಹೊಲಗದ್ದೆಗಳನ್ನೆಲ್ಲಾ ರಷ್ಯನ್ನರು ತಾವೇ ನಿರ್ನಾಮ ಮಾಡಿದರು. - ನಾಝಿಗಳಿಗೆ ಯುದ್ಧದ ಸಮಯದಲ್ಲಿ ಆಹಾರದ ಕೊರತೆಯನ್ನು ಉಂಟುಮಾಡಲು ಜಗತ್ಪ್ರಸಿದ್ಧವಾದ ನೀಪರ್ ಸೇತುವೆಯನ್ನು ರಷ್ಯನ್ನರೇ ಕೈಯಾರ ಸಿಡಿಸಿದಾಗ ಜಗತ್ತಿಗೆ ಅವರು ಯುದ್ಧವನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದ್ದರು ಎಂಬುದರ ಅರಿವು ಆಯಿತು. ಇಷ್ಟಕ್ಕೆ ನಿಲ್ಲದೆ ಜರ್ಮನ್ನರು ಬರುವ ದಾರಿಯಲ್ಲಿ ಅವರಿಗೆ ಉಪಯೋಗಕ್ಕೆ ಬರುವ ಎಲ್ಲಾ ರೀತಿಯ ವಸ್ತುಗಳನ್ನು ಕೊಡೆದುಹಾಕಿದರು.

ಮತ್ತೊಂದು ಗಮನಾರ್ಹ ಬೆಳವಣಿಗೆಯೆಂದರೆ ಜೋಸೆಫ್ ಸ್ಟಾಲಿನ್‌ರ ಮಾತುಗಳಲ್ಲೇ ಹೇಳುವುದಾದರೆ "ಈ ಯುದ್ಧ ಕೇವಲ ಶಸ್ತ್ರಾಸ್ತ್ರಗಳಿಂದ ಮಾತ್ರ ನಿರ್ಧರಿಸುವ ವಿಚಾರವಾಗಿರಲಿಲ್ಲ. ಇದರಲ್ಲಿ ಪ್ರಪಂಚದ ಎಲ್ಲಾ ದೇಶಗಳ ರಾಜಕೀಯ ಚಿಂತನೆಯಿಂದ ಕೂಡಿತ್ತು. ಹಾಗೆ ನೋಡಿದಲ್ಲಿ ರಷ್ಯನ್ನರು ಹಿಟ್ಲರನನ್ನು ಈ ಕಾಲಘಟ್ಟಕ್ಕೆ ಮುಂಚೆಯೇ ಎದುರಿಸಬಹುದಾಗಿತ್ತು. 1939ರಲ್ಲಿ ಜರ್ಮನರು ಪೋಲೆಂಡನ್ನು ಮುತ್ತಿದಾಗಲೂ ಅಥವಾ ಹಿಟ್ಲರ್‌ನ ಬಾಲ್ಕನ್ ಸಮಾವೇಶದಲ್ಲೋ ರಷ್ಯ ಜರ್ಮನ್ ಮತ್ತು ಹಿಟ್ಲರ್‌ನ ದಾಳಿಯನ್ನು ಎದುರಿಸಿ ಅವನ ಪ್ರಭಾವವನ್ನು ಮೊಟಕುಗೊಳಿಸಬಹುದಾಗಿತ್ತು. ಆದರೆ ರಷ್ಯನ್ನರು ಆ ರೀತಿ ದುಡುಕದೆ ಹಿಟ್ಲರ್‌ನೊಂದಿಗೆ 22 ತಿಂಗಳುಗಳವರೆವಿಗೆ ಆಕ್ರಮಣ ವಿರೋಧಿ ಒಡಂಬಡಿಕೆಗೆ ಬದ್ಧರಾಗಿ ಕೊನೆಯಲ್ಲಿ ಹಿಟ್ಲರನೇ ಈ ಒಡಂಬಡಿಕೆಯನ್ನು ಮುರಿದಾಗ ಫ್ಯಾಸಿಸಂನ ದುರಾಸೆಯನ್ನು ಜಗತ್ತಿಗೇ ಸಾರಿದರು. ಜೊತೆಗೆ ಈ 22 ತಿಂಗಳುಗಳಲ್ಲಿ ಜಗತ್ತಿನ ಬೇರೆಬೇರೆ ದೇಶಗಳಿಗೂ ಹಿಟ್ಲರ್‌ನ ಮೋಸ ಅಧಿಕಾರದ ಆಸೆ ಮತ್ತು ಅವನು ಏಕಚಕ್ರಾಧಿಪತಿಯಾದಲ್ಲಿ ಫ್ಯಾಸಿಸಂ ಮಾನವ ಜನಾಂಗಕ್ಕೆ ಏನು ಮಾಡಬಲ್ಲದು ಎನ್ನುವ ವಿಚಾರ ಸೂಕ್ಷ್ಮವಾಗಿ ಪರಿಚಯವಾಗಿತ್ತು. ಈ ವೇಳೆಗಾಗಲೇ ಸಾಮ್ರಾಜ್ಯಶಾಹಿ ಶಕ್ತಿಗಳ ಗುಂಪು ತಾವು ಮಾಡಿದ ತಪ್ಪಿಗೆ ಪರಿತಪಿಸುತ್ತಿದ್ದರು. ಈ ಎಲ್ಲ ವಿಷಯಗಳ ಮೇಲೆ ಸ್ಟಾಲಿನ್ ಜಗತ್ತಿನ ಎಲ್ಲಾ ದೇಶಗಳ ಜನತೆಯನ್ನೂ ಒಗ್ಗೂಡಿಸಿ ಪ್ರಪಂಚದಲ್ಲೇ ಒಂದು ವಿಶಾಲವಾದ 'ಫ್ಯಾಸಿಸಂ ವಿರೋಧಿ ವೇದಿಕೆ'ಯನ್ನು ಸ್ಥಾಪಿಸಲು ಸಾಧ್ಯವಾಯಿತು. ಮತ್ತು ಆ ಒಂದು ವೇದಿಕೆಯಿಂದ ಮಾತ್ರ ಪ್ರತಿಯೊಬ್ಬ ರಷನ್ನನೂ ಜಗತ್ತಿನ ಮಾನವ ಕೋಟಿಯ ಉಳಿವಿಗೋಸ್ಕರ ಹಿಟ್ಲರ್‌ನನ್ನು ಎದುರಿಸಿ ಸೋಲಿಸಲು ಸಾಧ್ಯವಾಯಿತು. ಇಷ್ಟೆಲ್ಲವನ್ನೂ ಮಾಡುತ್ತಿದ್ದ ಸ್ಟಾಲಿನ್ ಅದೇ ಸಮಯದಲ್ಲಿ ತನ್ನ ಸೈನ್ಯವನ್ನು ವ್ಯವಸ್ಥಿತವಾಗಿ ಕಟ್ಟಿ ಅದನ್ನು ಸಿದ್ಧಗೊಳಿಸಿದ್ದ. ಸ್ಟಾಲಿನ್‌ರ ಈ ಒಳವಿವೇಚನೆ ಬೇರೆ ದೇಶದ ನಾಯಕರುಗಳಿಗೆ ಕಲ್ಪನೆಗೂ ಮೀರಿದ ಸಾಹಸವಾಗಿದ್ದರಿಂದ ಅವರು ಈ ಯುದ್ಧದಲ್ಲಿ ರಷ್ಯನ್ನರು ಸೋತು ಸಮತಾವಾದವು ಮಣ್ಣುಪಾಲಾಗುವುದು ಎಂದು ಭಾವಿಸಿದರು.

ಆದರೆ ಏಪ್ರಿಲ್ 30, 1945ರಂದು ಹಿಟ್ಲರ್‌ನ ರಾಜಧಾನಿಯಾದ ಬರ್ಲಿನ್‌ನ ರೀಚ್‌ಸ್ಟಾಗ್‌ನಲ್ಲಿ ರಷ್ಯನ್ನರು ಕೆಂಬಾವುಟವನ್ನು ಹಾರಿಸಿದಾಗ, ಇಡೀ ಪ್ರಪಂಚವೇ ದುಡಿಯುವ ಜನತೆಯ ಆಶಾಸಂಕೇತವಾದ ಕುಡುಗೋಲು ಮತ್ತು ಸುತ್ತಿಗೆಯ ಚಿನ್ಹೆಯ ಕಡೆಗೆ ನಿಬ್ಬೆರಗಾಗಿ ನೋಡಿತು. ಅಲ್ಲಿಗೆ ಫ್ಯಾಸಿಸಂ ಮತ್ತು ಹಿಟ್ಲರನ ಕೊನೆಯ ಅಧ್ಯಾಯವು ಮುಗಿದು ಚರಿತ್ರೆಯ ಪರದೆಯು ಅವರನ್ನು ಮುಚ್ಚಿತು.

ಮೇ ೨, ೧೯೪೫

ಮಧ್ಯಾಹ್ನ 3 ಘಂಟೆ: ಬರ್ಲಿನ್‌ನ ರೀಚ್‌ಸ್ಟಾಗ್; ಎಲ್ಲಾ ಜರ್ಮನ್ ಸೈನಿಕರೂ ರಷ್ಯನ್ನರಿಗೆ ಯಾವ ಶರತ್ತುಗಳೂ ಇಲ್ಲದೆ ಸಂಪೂರ್ಣವಾಗಿ ಶರಣಾಗತರಾದರು.

ಮೇ 9, 1945ರ ವರೆಗೆ, ಅಂದರೆ ಸೋವಿಯತ್ ಪಡೆಗಳು ಬರ್ಲಿನ್ ನಗರವನ್ನು ವಶಪಡಿಸಿಕೊಳ್ಳುವವರೆಗೆ ಸೋವಿಯೆತ್ ಸೈನಿಕನೊಬ್ಬ ಬರ್ಲಿನ್‌ನ ರೀಚ್‌ಸ್ಟಾಗ್‌ನ ಮೇಲೆ ಕೆಂಪು ಧ್ವಜವನ್ನು ಹಾರಿಸುವವರೆಗೆ, ಗೋರಿಯಲ್ಲಿ ಹಿಟ್ಲರನ ಬೂದಿಯು ಇನ್ನೂ ಬೆಚ್ಚಗಿರುವವರೆಗೆ ದ್ವಿತೀಯ ಪ್ರಪಂಚ ಯುದ್ಧವು ರೊಚ್ಚಿನಿಂದ ಮುಂದುವರಿದಿತ್ತು.

ಈ ಯುದ್ಧದಲ್ಲಿ ಪ್ರಪಂಚದ 61 ದೇಶಗಳು ಭಾಗವಹಿಸಿದ್ದವು. ಈ ಸಮರ ವೃತ್ತದಲ್ಲಿ 170 ಮಿಲಿಯ ಜನ ಸೆಳೆಯಲ್ಪಟ್ಟಿದ್ದರು. 90 ಮಿಲಿಯ ಜನ ಗಾಯಗೊಂಡರು. 28 ಮಿಲಿಯ ಜನ ಆಜೀವ ಪರ್ಯಂತ ಅಂಗವಿಕಲರೂ, ದುರ್ಬಲರೂ ಆದರು. 54.8 ಮಿಲಿಯ ಜನ ಪ್ರಾಣ ತೆತ್ತರು.

ಈ ಯುದ್ಧದ ಪ್ರಾಣಹಾನಿ, ಧನ ಹಾನಿಗಳಲ್ಲಿ ಸಿಂಹಪಾಲನ್ನು ಸೋವಿಯತ್ ಒಕ್ಕೂಟವೇ ಭರಿಸಬೇಕಾಯಿತು; ಸ್ವರಕ್ಷಣೆಗಾಗಿ ಮಾತ್ರವಲ್ಲ, ಆದರೆ ಇಡೀ ಮಾನವ ಕುಲವನ್ನು ಫ್ಯಾಸಿಸಮ್ಮಿನ ಕರಾಳ ಬಾಹು ಬಂಧನದಿಂದ ಮುಕ್ತಗೊಳಿಸಲು ಸೋವಿಯತ್ ಒಕ್ಕೂಟ ತೆತ್ತಬೆಲೆ ಅಪಾರವಾದುದು.

ಹಿಟ್ಲರ್ ಜರ್ಮನಿಯ ಫ್ಯಾಸಿಸಮ್ಮಿನ ಮೇಲಿನ ವಿಜಯಕ್ಕಾಗಿ ಸೋವಿಯತ್ ಒಕ್ಕೂಟ ತೆತ್ತ ಬೆಲೆಯೇನು? ಇಲ್ಲಿದೆ ನೋಡಿ :

—20 ಮಿಲಿಯ ಜನ ಪ್ರಾಣ ತೆತ್ತರು;

—1,710 ಸೋವಿಯತ್ ನಗರಗಳು ನಾಶಗೊಂಡವು;

—70,000 ಹಳ್ಳಿಗಳು ಭೂಗತವಾದವು;

—40,000 ಆಸ್ಪತ್ರೆ, ಕ್ಲಿನಿಕ್‌ಗಳು ಹಾಳಾದವು;

—84,000 ಶಾಲೆ, ಕಾಲೇಜು, ಸಂಶೋಧನಾ ವ್ಯವಸ್ಥಾಪನೆಗಳು ಕುಸಿದವು;

—43,000 ಗ್ರಂಥಾಲಯಗಳು ನಾಮಾವಶೇಷಗೊಂಡವು;

—427 ಮ್ಯೂಸಿಯಂಗಳು ಮಣ್ಣುಪಾಲಾದವು.

ಇಡೀ ದೇಶ ಕಳೆದುಕೊಂಡ ಆಸ್ತಿಯು ಮೊತ್ತ 6,79,000 ಮಿಲಿಯ ರೂಬಲ್‌ಗಳಿಗೂ ಅಧಿಕ!

ಆದರೆ ಇವು ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಸೋವಿಯತ್ ಜನರು ಯುದ್ಧದ ಕಾವು ಸಂಪೂರ್ಣವಾಗಿ ಆರುವ ಮೊದಲೇ ತಾವು ಕಳೆದುಕೊಂಡಿದ್ದನ್ನು ಮತ್ತೆ ಕಟ್ಟಿ ಮುಗಿಸಿದ್ದರು.

●

ಅಮೇರಿಕಾ ಮೊದಲನೆಯದು


ಭಯಂಕರ, ಭಯಾನಕ ನ್ಯೂಕ್ಲಿಯರ್ ಯುದ್ಧ ಸಾಮಗ್ರಿಗಳ ಪಂದ್ಯಾಟದಲ್ಲಿ ಅಮೇರಿಕ ಮೊಟ್ಟ ಮೊದಲ ತಯಾರಕ ಎಂದು ಹೇಳುವ ಅವಶ್ಯಕತೆಯೇ ಇಲ್ಲ. ಅವರ ನ್ಯೂಕ್ಲಿಯರ್ ಸಾಧನೆಗಳು ಇದನ್ನು ರುಜುವಾತುಪಡಿಸುತ್ತವೆ.

ಈ ಕೆಳಗಿನ ಯುದ್ಧ ಸಾಮಗ್ರಿಗಳನ್ನು ಮೊದಲನೆಯದಾಗಿ ತಯಾರಿಸಿದ ಶ್ರೇಯಸ್ಸು (?) ಅಮೇರಿಕದ್ದೇ :

ಮೊದಲನೆ ಆಟೋಮಿಕ್ ಬಾಂಬ್	.... 1945 ರಲ್ಲಿ
ಮೊದಲನೆ ಖಂಡಾಂತರ ಬಾಂಬರುಗಳು	... 1948 ರಲ್ಲಿ
ಮೊದಲನೆ ಹೈಡ್ರೋಜನ್ ಬಾಂಬ್	... 1954 ರಲ್ಲಿ
ನ್ಯೂಕ್ಲಿಯರ್ ಸಬ್‌ಮೆರೀನ್‌ಗಳು	... 1954 ರಲ್ಲಿ
ಖಂಡಾಂತರ ಬ್ಯಾಲಿಸ್ಟಿಕ್ ಮಿಸೆಲ್ಸ್	... 1955 ರಲ್ಲಿ
ಮೊದಲನೆ ಬ್ಯಾಲಿಸ್ಟಿಕ್ ಮಿಸೆಲ್ಸ್‌ನ್ನು ಸಬ್‌ಮೆರೀನ್‌ನಿಂದ ಹಾರಿಸಿದ್ದು	... 1960 ರಲ್ಲಿ
ಎಂ. ಐ. ಆರ್. ವಿ.	... 1970 ರಲ್ಲಿ
ಎಂ. ಎಕ್ಸ್. ಮಿಸೆಲ್ಸ್ ವ್ಯವಸ್ಥೆ	... 1978 ರಲ್ಲಿ

ಈಗ 1980ರ ದಶಕದಲ್ಲಿ ನ್ಯೂಟ್ರಾನ್ ಬಾಂಬ್.

ಇವುಗಳನ್ನು ಮೊದಲನೆಯದಾಗಿ ಉಪಯೋಗಿಸಿದ ದೇಶವೆಂದರೆ ಅಮೇರಿಕವೇ. ಹಿರೋಷಿಮಾ–ನಾಗಸಾಕಿ ಹತ್ಯಾಕಾಂಡದ ನೆನಪನ್ನು ಜನಮನದಿಂದ ಅಳಿಸಲಾಗಿಲ್ಲ. ಮೂವತ್ತಾರು ವರ್ಷಗಳ ನಂತರವೂ ಅಲ್ಲಿಯ ಜನರು ಬಾಂಬ್ ಪ್ರಯೋಗದ ಪರಿಣಾಮವನ್ನು ಅನುಭವಿಸುತ್ತಿದ್ದಾರೆ.



ಮಾನವ ಹಕ್ಕುಗಳು, ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮುಂತಾದ ಶಬ್ದಗಳನ್ನು ಬಡಬಡಿಸಿ ಇನ್ನೊಂದು ಪ್ರದೇಶದ ಜನರನ್ನು ಗುಲಾಮಗಿರಿಯಲ್ಲಿಡಲು ಪ್ರಯತ್ನಿಸುವ, ಜಗತ್ತನ್ನು ನ್ಯೂಕ್ಲಿಯರ್ ಯುದ್ಧದ ಪಂದ್ಯಾಟದಲ್ಲಿ ನೂಕಿ ಇಡೀ ಮಾನವ ಅಸ್ತಿತ್ವವನ್ನೇ ಅಳಿಸಲು ಪ್ರಯತ್ನಪಡುವ ಅಮೇರಿಕನ್ ಸಾಮ್ರಾಜ್ಯವಾದಿಗಳ ವಿರುದ್ಧ ಧ್ವನಿಯೆತ್ತಬೇಕಾಗಿದೆ.

ಶಾಂತಿಯನ್ನು ಬಯಸುವ ಪ್ರತಿಯೊಬ್ಬ ಮನುಷ್ಯನೂ, ಮಾನವನ ಉಳಿವನ್ನು ಬಯಸುವ ಪ್ರತಿಯೊಬ್ಬನೂ ರೇಗನ್ ಮತ್ತು ಅವರ ಪೆಂಟಾಗನ್ ಜನರಲ್‌ಗಳ ಕನಸನ್ನು ನುಚ್ಚುನೂರು ಮಾಡಬೇಕಾದ ಕಾಲ ಸನ್ನಿಹಿತವಾಗಿದೆ.

ಓದುಗರಲ್ಲಿ,

ಅಕ್ಟೋಬರ್ 4 ರಂದು ದೆಹಲಿಯಲ್ಲಿ ಆರು ಪಕ್ಷಗಳ ನೇತೃತ್ವದಲ್ಲಿ ನಡೆಯಲಿರುವ ಶಾಂತಿ ಯಾತ್ರೆಯ ಕಾರ್ಯಕ್ರಮಕ್ಕೆ ಪೂರಕವಾಗಿ ಈ 'ಶಾಂತಿ ಯಾತ್ರೆ ವಿಶೇಷಾಂಕ'ವನ್ನು ಹೊರತರುತ್ತಲಿದ್ದೇವೆ.

ಸಾಮ್ರಾಜ್ಯಶಾಹಿಗಳ ಯುದ್ಧ ಪಿಪಾಸೆಯಿಂದಾಗಿ ಒದಗಲಿರುವ ಭೀಕರ ಗಂಡಾಂತರದ ವಿರುದ್ಧ ವಿಶ್ವದ ಜನತೆ ಬೃಹತ್ ಮತಪ್ರದರ್ಶನ, ರ್‍ಯಾಲಿಗಳ ಮೂಲಕ ತಮ್ಮ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಜಾತಿ, ಮತ, ದೇಶ, ಭಾಷೆ, ವರ್ಣಗಳನ್ನು ಮೀರಿ ನಿಂತ ಈ ಶಾಂತಿ ಚಳವಳಿಯಲ್ಲಿ ಭಾರತದ ಜನತೆಯೂ ಪಾಲ್ಗೊಳ್ಳುತ್ತಿರುವುದು ಅತ್ಯಂತ ಸಂತಸದ ವಿಷಯ.

ಸಿ. ಪಿ. ಐ. (ಎಂ) ರಾಜ್ಯ ಸಮಿತಿಯ ಮುಖ ಪತ್ರವಾದ ಐಕ್ಯರಂಗವು, ಯುದ್ಧ ಗಂಡಾಂತರದ ಕುರಿತು ಜನತೆಗೆ ತಿಳಿಸಲು ಪ್ರಯತ್ನಿಸಿದೆ. ವಿಶ್ವದ ನಾನಾ ಕಡೆ, ಭೀಕರ ಶೋಷಣೆಯ ವಿರುದ್ಧ ರಾಷ್ಟ್ರೀಯ ಸ್ವಾತಂತ್ರ್ಯಕ್ಕೋಸ್ಕರ ಹೋರಾಡುತ್ತಿರುವ ವಿಮೋಚನಾ ಹೋರಾಟಗಾರರನ್ನು ಸದೆಬಡೆಯುತ್ತಿರುವ ಸಾಮ್ರಾಜ್ಯಶಾಹಿಗಳ ದುಷ್ಟ ಯತ್ನಗಳ ಕುರಿತು, ನ್ಯೂಕ್ಲಿಯರ್ ಯುದ್ಧದ ಭೀಕರತೆಯ ಕುರಿತು, ಸಮಾಜವಾದಿ ವ್ಯವಸ್ಥೆಯನ್ನು ಬುಡಮೇಲು ಮಾಡಲು ನಡೆಸುತ್ತಿರುವ ಕುತಂತ್ರಗಳ ಕುರಿತು, ವಿಶ್ವದ ನಾನಾ ಭಾಗದಲ್ಲಿ ನಡೆದ ಉತ್ಸಾಹದಾಯಕ ಶಾಂತಿ ಚಳುವಳಿಗಳ ಕುರಿತು ಅನೇಕ ಲೇಖನಗಳ ಮೂಲಕ ಮಾಹಿತಿ ನೀಡಲು ಈ ಹಿಂದೆಯೂ ನಾವು ಶ್ರಮಿಸಿದ್ದೇವೆ.

ಈ ಸಂದರ್ಭದಲ್ಲಿ, ಯುದ್ಧ ಗಂಡಾಂತರದ ಕುರಿತು, ಶಾಂತಿಯ ಅವಶ್ಯಕತೆಯ ಕುರಿತು ಮನದಟ್ಟು ಮಾಡಲು, ಮತ್ತಷ್ಟು ಮಾಹಿತಿ ಒದಗಿಸಲು ಈ ಸಂಚಿಕೆ ಸಹಾಯವಾದೀತೆಂಬ ಆಶಯ ನಮ್ಮದು.

ಈ ಸಂಚಿಕೆಗೆ ಲೇಖನಗಳನ್ನು ಅನುವಾದಿಸಿ ಕೊಟ್ಟು ನೆರವಾದ ಸಂಗಾತಿಗಳನ್ನು ನಾವು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುತ್ತೇವೆ. ಎಸ್. ಎಫ್. ಐ. ಮುಖ ಪತ್ರವಾದ 'ಸ್ಟೂಡೆಂಟ್ಸ್ ಸ್ಟ್ರಗಲ್'ನ ನೆರವನ್ನು ಈ ಸಂಚಿಕೆಗೆ ಪಡೆದಿದ್ದೇವೆ. ಅದರ ಸಂಪಾದಕ ವರ್ಗಕ್ಕೂ ನಾವು ಕೃತಜ್ಞರು. ಅಂದವಾದ ಮುಖ ಪುಟದ ವಿನ್ಯಾಸ ರೂಪಿಸಿದ ಸಂಗಾತಿ ವಸಂತ ಅವರಿಗೆ ನಾವು ಋಣಿ. ಪುರವಣಿ IV ರಲ್ಲಿ ಮುದ್ರಿತವಾಗಿರುವ 'ವಿಶ್ವವೇ ನಮ್ಮ ಮನೆ' ಚಿತ್ರ ಬರೆದವರು 'ಚಿತೆ' ಅವರು. ಅವರಿಗೂ ನಮ್ಮ ವಂದನೆ.

ಮಾನವಕುಲಕ್ಕೆ ಮಾರಕವಾಗಿರುವ ಯುದ್ಧ ಪ್ರಯತ್ನಗಳ ವಿರುದ್ಧ ಶಾಂತಿ ಪ್ರಿಯರೆಲ್ಲ ಅವಿರತ ಯತ್ನ ನಡೆಸಬೇಕಾಗಿದೆ. ಈ ಮೂಲಕ ಐಕ್ಯರಂಗವೂ ತನ್ನ ಕಿರುಕಾಣಿಕೆ ನೀಡುತ್ತಲಿದೆ. ನೀವೆಲ್ಲ ತುಂಬು ಮನದಿಂದ ಸ್ವಾಗತಿಸುವಿರೆಂದು ಆಶಿಸುತ್ತೇವೆ.

ವ್ಯವಸ್ಥಾಪಕ
ಐಕ್ಯರಂಗ

ಪಾರಿವಾಳಗಳು ಹಾರಲಿ

ನೇಟೋ ರಾಷ್ಟ್ರಗಳ ಕೂಟ
ಯುದ್ಧದ ಬಲೆ ನೇಯ ತೊಡಗಿದೆ
ನ್ಯೂಟ್ರಾನ್ ಬಾಂಬುಗಳ ತೋರಣ
ಜಗತ್ತಿನ ಮೇಲೆ ತೂಗ ತೊಡಗಿದೆ.

ವಿಶ್ವ ಯುದ್ಧಗಳ ಭಯಾನಕ ನೆನಪು
ಮಾಸುವ ಮೊದಲೇ
ಮಾರಣ ಹೋಮದ ಯಜ್ಞ ಕುಂಡ
ಹೊಗೆಯಾಡ ತೊಡಗಿದೆ

ನಿಶ್ಶಸ್ತ್ರೀಕರಣದ ನಿರ್ಲಿಪ್ತ
ಘೋಷಣೆಯ ಮೂಗಿನಡಿಯಲ್ಲೇ
ತಯಾರಾಗುತ್ತಿವೆ
ಮಾನವನ ಕೊಲ್ಲುವ ಮಾರಕಾಸ್ತ್ರಗಳು

ಯುದ್ಧೋನ್ಮಾದಿಗಳ ಶಸ್ತ್ರಪೈಪೋಟಿ
ಜನಕೋಟಿಯ ಜೀವಸೆಲೆಯನ್ನು
ಸಾವಿನಂಚಿಗೆ ಸಾಗಿಸತೊಡಗಿದೆ.

ಪೀಳಿಗೆಯಿಂದ ಪೀಳಿಗೆಗೆ
ಸಾಗತೊಡಗಿವೆ
ನಾಗಸಾಕಿ, ಹಿರೋಶಿಮಾ, ವಿಯೆಟ್ನಾಂಗಳ
ಕಣ್ಣು, ಕಿವಿ, ಕೈಕಾಲುಗಳಿಲ್ಲದ
ನರಸಂತಾನದ ನರಕಯಾತ್ರೆ.

ನ್ಯೂಕ್ಲಿಯರ್ ಯುದ್ಧದ
ರೋಮಾಂಚಕತೆಯಲ್ಲಿ
ಜೀವದೊಂದಿಗೆ ಚೆಲ್ಲಾಟವಾಡುವ
ಸಾಮ್ರಾಜ್ಯಶಾಹಿಗಳೇ ! ನೆನಪಿಡಿ !
ನಿಮ್ಮ ಯುದ್ಧ ಏನನ್ನೂ ಸೃಷ್ಟಿಸಲಾರದು
ವಿನಾಶವೊಂದನ್ನುಳಿದು.
ಅದು ಶತ್ರುಗಳನ್ನಷ್ಟೇ ಕೊಲ್ಲಲಾರದು
ಜೊತೆಗೆ ನಿಮ್ಮನ್ನೂ ಕೂಡ.

ಆದ್ದರಿಂದಲೇ 'ಇಂದು—

ನಮ್ಮ ತಲೆಯ ಮೇಲೆ
ಬಾಂಬು ಸುರಿಸುವ
ಯುದ್ಧ ವಿಮಾನಗಳ ಬದಲು
ಶಾಂತಿ ಸಂದೇಶ ಸಾರುವ
ಪಾರಿವಾಳಗಳು ಹಾರಬೇಕಾಗಿದೆ

ಸಾಗರದ ತಳದಲ್ಲಿ
ಸಬ್‌ಮೇರಿನ್‌ಗಳ ಬದಲು
ಮಿಂಚುವ ಬಣ್ಣಗಳ ಮೀನುಗಳು
ನಿರಾತಂಕವಾಗಿ ಬದುಕಬೇಕಾಗಿದೆ.

ನೆಮ್ಮದಿ ಕಲಕುವ
ಯುದ್ಧ ಭೀತಿಯು ತೊಲಗಿ
ಶಾಶ್ವತ ಶಾಂತಿಯ ಸುಂದರ ಬದುಕು
ನಮ್ಮದಾಗಬೇಕಾಗಿದೆ.

'ಉದಯ'



(2ನೇ ಪುಟದಿಂದ)

ಫ್ರಾನ್ಸ್ ಅನ್ನು ಮತ್ತೊಮ್ಮೆ ಘೋಷಿಸಲಾಯಿತು. ಆದರೂ ಯುದ್ಧನಿರತ ವಿಭಾಗಗಳ ನಡುವೆ ಹೋರಾಟ ಮುಂದುವರಿದು 1870ರಲ್ಲಿ ಮತ್ತೊಮ್ಮೆ ಫ್ರಾನ್ಸ್‌ಅನ್ನು ಗಣರಾಜ್ಯವೆಂದು ಘೋಷಿಸಲಾಯಿತು. ಈ ವೇಳೆಗೆ ಫ್ರಾನ್ಸ್‌ನಲ್ಲಿ ವರ್ಗ ಹೋರಾಟ ತೀವ್ರವಾಗಿದ್ದು 1871ರ ಪ್ಯಾರೀಸ್ ಕಮ್ಯೂನ್‌ನ ಸ್ಥಾಪನೆಯಾಯಿತು.

ಇದು ಕಾರ್ಮಿಕವರ್ಗದ ನಾಯಕತ್ವದ ಪ್ರಥಮ ರಾಜ್ಯವಾಗಿತ್ತು. ಆದರೆ ವಂಚಕ ಅಡೋಲ್ಫ್ ಥಿಯರ್ಸ್ ಬರ್ಬರವಾಗಿ ಆಕ್ರಮಣಮಾಡಿ ಕಮ್ಯೂನ್‌ನ ಆಳ್ವಿಕೆಯನ್ನು ಸದೆಬಡಿದ.

ಕ್ರಮಬದ್ಧವಾಗಿ ಆರಿಸಿ ಬಂದ ಗಣರಾಜ್ಯ ಸರ್ಕಾರದ ವಿರುದ್ಧ ಸ್ಪೇನ್‌ನಲ್ಲಿ (1936-39) ಜನರಲ್ ಫ್ರಾಂಕೊನ ನೇತೃತ್ವದಲ್ಲಿ ಚಕ್ರಾಧಿಪತ್ಯವು ರಕ್ತಪಾತದ ಯುದ್ಧ ನಡೆಸಿತು. ಸ್ಪ್ಯಾನಿಷ್ ಜನತೆಗೆ ಬೆಂಬಲ ನೀಡಲು ಸಮಾಜವಾದೀ ರಷ್ಯಾದ ಮುಖಂಡತ್ವದಲ್ಲಿ ಎಲ್ಲಾ ಪ್ರಗತಿಪರ ಶಕ್ತಿಗಳು ವಿಶ್ವದಾದ್ಯಂತ ನೆರೆದವು. ಆದರೆ ಜರ್ಮನಿ, ಇಟಲಿಯ ಫ್ಯಾಸಿಸ್ಟರ ಬೆಂಬಲ ಹಾಗೂ ಇತರ ಬಂಡವಾಳಶಾಹಿ ರಾಷ್ಟ್ರಗಳ ಬೆಂಬಲ ಪಡೆ ದಫ್ರಾಂಕೊ, ಸ್ಪ್ಯಾನಿಷ್ ಜನತೆಯ ಧೀರೋದಾತ್ತ ಹೋರಾಟವನ್ನು ಪುಡಿಮಾಡಿದ. ಮತ್ತು 1939ರಲ್ಲಿ ದ್ವೇಷಭರಿತ ಸರ್ವಾಧಿಕಾರವನ್ನು ಘೋಷಿಸಿದ.

1918-20ರಲ್ಲಿ, ಕಾರ್ಮಿಕ ವರ್ಗದ ಕ್ರಾಂತಿಯನ್ನು ತಲೆಕೆಳಗು ಮಾಡಲು ರಷ್ಯನ್ ಚಕ್ರಾಧಿಪತ್ಯ ಮತ್ತು ಪ್ರಪಂಚದ ಬಂಡವಾಳಶಾಹಿ ಆಸಕ್ತಿಗಳು ಯುದ್ಧ ನಡೆಸಿದವು. ಆದರೆ ರಷ್ಯಾದ ರೈತ-ಕಾರ್ಮಿಕ ಜನತೆ ವಿರೋಚಿತ ಹೋರಾಟದ ಮೂಲಕ ಈ ಯತ್ನವನ್ನು ಹಿಮ್ಮೆಟ್ಟಿಸಿದರು. ಹಾಗೂ ವಿಶ್ವದ ಪ್ರಥಮ ಸಮಾಜವಾದೀ ರಾಷ್ಟ್ರವನ್ನು ಸ್ಥಾಪಿಸಿದರು. 1917ರ ಕ್ರಾಂತಿ ಮತ್ತು 1920ರಲ್ಲಿ ಕಾರ್ಮಿಕ ವರ್ಗದ ವಿಜಯ ಇವು ಮಾನವ ಸಮಾಜದ ಪ್ರಗತಿಯ ಮತ್ತೊಂದು ಕ್ರಾಂತಿಕಾರಿ ಘಟ್ಟವಾಗಿದೆ—ಅಂದರೆ ಬಂಡವಾಳಶಾಹಿಯಿಂದ ಸಮಾಜವಾದದ ಕ್ರಾಂತಿಕಾರಿ ಬದಲಾವಣೆಯಾಗಿದೆ.

ಜನತೆಯ ಯುದ್ಧಗಳು

ವಸಾಹತುಗಳ ವಿಸ್ತರಣೆಯೊಂದಿಗೆ ಸಾಮ್ರಾಜ್ಯಶಾಹಿಯ ಕೊಳ್ಳೆ ನಡೆಯಿತು. ಅದೇ ಸಮಯದಲ್ಲಿ ವಸಾಹತು ರಾಷ್ಟ್ರಗಳಲ್ಲಿ ವಿದೇಶೀ ಆಳ್ವಿಕೆಯನ್ನು, ಶೋಷಣೆಯನ್ನು ಪ್ರತಿಭಟಿಸಲಾಯಿತು. ಈ ಪ್ರತಿಭಟನೆಯು ಮುಂದೆ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ವಿಮೋಚನೆಗಾಗಿ ಯುದ್ಧದ ರೂಪವನ್ನು ಪಡೆದವು.

1770ರ ವೇಳೆಗೆ ಉತ್ತರ ಅಮೇರಿಕಾದಲ್ಲಿ ಬ್ರಿಟಿಷ್ ಆಳ್ವಿಕೆ ಹಾಗೂ ನಿರ್ಬಂಧಗಳ ಹೇರಿಕೆಯ ವಿರುದ್ಧ

ಚರಿತ್ರೆಯಲ್ಲಿ ಯುದ್ಧಗಳು

ವಸಾಹತುಗಳ ಜನ ಒಂದಾದರು. 1774ರಲ್ಲಿ ಅಮೇರಿಕನ್ ಶಕ್ತಿಗಳು ಒಗ್ಗೂಡಿದವು. ಅಮೇರಿಕದ ಪ್ರಖ್ಯಾತ ಸ್ವಾತಂತ್ರ್ಯ ಘೋಷಣೆಯು 1776ರಲ್ಲಿ ಆಯಿತು. ದೀರ್ಘ ಹೋರಾಟಗಳ ನಂತರ 1781ರ ಹೊತ್ತಿಗೆ ಬ್ರಿಟಿಷರ ಆಳ್ವಿಕೆಯಿಂದ ಅಮೇರಿಕ ಮುಕ್ತವಾಯಿತು.

ಎರಡು ಶತಮಾನಗಳ ಕಾಲ ಕ್ರೂರ ಶೋಷಣೆಯನ್ನು ಅನುಭವಿಸಿದ ಮಧ್ಯ ಮತ್ತು ಲ್ಯಾಟಿನ್ ಅಮೇರಿಕದ ಜನತೆ ತಮ್ಮ ವಿಮೋಚನೆಗಾಗಿ 1810-15ರಲ್ಲಿ ಹೋರಾಡಲು ಮೊದಲಾರಂಭಿಸಿದರು. ಅರ್ಜೆಂಟೈನವನ್ನು ಬಿಟ್ಟು ಉಳಿದೆಡೆ ಈ ಹೋರಾಟವನ್ನು ಅಮಾನುಷವಾಗಿ ಹತ್ತಿಕ್ಕಲಾಯ್ತು. ಮುಂದಿನ ದಶಕದಲ್ಲಿ (1816—26) ಸೈಮನ್ - ಬೊಲಿವಾರ್, ಸಾನ್-ಮಾರ್ಟಿನ್ ಮುಂತಾದವರ ನೇತೃತ್ವದಲ್ಲಿ ವಸಾಹತುಶಾಹಿ ಶಕ್ತಿಗಳ ಮೇಲೆ ಮತ್ತೊಮ್ಮೆ ದಾಳಿ ಮಾಡಲಾಯ್ತು. ಇದು ಸ್ಪೇನ್ ಮತ್ತು ಪೋರ್ಚುಗಲ್ ಸಾಮ್ರಾಜ್ಯಕ್ಕೆ ಭಾರಿ ಪೆಟ್ಟನ್ನು ನೀಡಿತು. ಕ್ಯೂಬಾ ಪೂರ್ಟೊರಿಕೊವನ್ನುಳಿದು (ಮುಂದೆ ಕ್ಯೂಬಾದಲ್ಲಿ ಕ್ರಾಂತಿಯಾಗಿ ಸಮಾಜವಾದಿ ವ್ಯವಸ್ಥೆ ಬಂದಿತು) ಬೇರೆಲ್ಲಾ ಲ್ಯಾಟಿನ್ ಅಮೇರಿಕದ ವಸಾಹತುಗಳು ವಿಮೋಚನೆಗೊಂಡವು. ಇದರಿಂದ ಹೊಸ ಸ್ವತಂತ್ರ ರಾಷ್ಟ್ರಗಳು ಉದಯವಾದವು.

ರಷ್ಯಾದಲ್ಲಿನ ಸಮಾಜವಾದಿ ಕ್ರಾಂತಿಯ ವಿಜಯದಿಂದ ಆಫ್ರಿಕಾ ಮತ್ತು ಏಷ್ಯಾದ ವಸಾಹತುಗಳಲ್ಲಿನ ಹೋರಾಟಗಳು ಮತ್ತಷ್ಟು ಸ್ಫೂರ್ತಿ ಪಡೆದವು. ಎರಡನೆ ಜಾಗತಿಕ ಯುದ್ಧದಲ್ಲಿ ಫ್ಯಾಸಿಸ್ಟ್ ಶಕ್ತಿಗಳ ಸೋಲಿನಿಂದಾಗಿ ಈ ಹೋರಾಟಗಳು ಮತ್ತಷ್ಟು ತೀವ್ರಗೊಂಡು ರಾಷ್ಟ್ರೀಯ ಸ್ವಾತಂತ್ರ್ಯದ ಅಲೆಗಳು ವಸಾಹತು ಸಾಮ್ರಾಜ್ಯದಲ್ಲಿ ಎದ್ದವು. ಈ ಪ್ರಕ್ರಿಯೆಯಲ್ಲಿ ಬೇರೆ ದೇಶಗಳೊಂದಿಗೆ ಭಾರತವು ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಿತು.

ಜಾಗತಿಕ ಯುದ್ಧಾನಂತರದಲ್ಲಿ ಅಮೇರಿಕದ ಮುಖಂಡತ್ವದಲ್ಲಿ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗಳು ಇಂತ ಬೆಳವಣಿಗೆಗಳನ್ನು ತಡೆಯಲು ಹೊಸ ಯೋಜನೆಗಳನ್ನು ಹೂಡತೊಡಗಿದರು. ಯಾಕೆಂದರೆ ಈ ಹೊತ್ತಿಗೆ ಪ್ರಪಂಚದ 1/3 ಭಾಗದಲ್ಲಿ ಸಮಾಜವಾದ ಸ್ಥಾಪಿತಗೊಂಡಿದ್ದು ಬಂಡವಾಳದ ಹೂಡಿಕೆಯಲ್ಲಿ ತೀವ್ರ ಕಡಿತ ಉಂಟುಮಾಡಿದುದನ್ನು ಬಂಡವಾಳಶಾಹಿ ಆಸಕ್ತಿಗಳು ಸಹಿಸಲಿಲ್ಲ. ಹೊಸದಾಗಿ ಸ್ವತಂತ್ರಗೊಂಡ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವ ಪ್ರಯತ್ನ ನಡೆಯಿತು. ಈ ಪ್ರಯತ್ನಗಳು ವಿಫಲವಾದಾಗ ಅಲ್ಲಿನ ಜನಪ್ರಿಯ ಸರ್ಕಾರವನ್ನು ಉರುಳಿಸಲು ನಾಗರಿಕ ಅಶಾಂತಿ ಮತ್ತು ಟಿಕ್ಕಾಟ ಹುಟ್ಟಿಸುವ ಕೆಲಸಕ್ಕೆ ಕೈ ಹಚ್ಚಿದವು, ನವ-ವಸಾಹತುಶಾಹಿಯ ಈ ಹೊಸ ಘಟ್ಟದಿಂದಾಗಿ, ತಮ್ಮ ರಾಷ್ಟ್ರದ ರಕ್ಷಣೆಗಾಗಿ ಅಲ್ಲಿನ ಜನತೆ ಮುಂದೆ ಬಂದರು. ಇದರಿಂದ ರಕ್ತಪಾತದ ಯುದ್ಧಗಳು ಘಟಿಸಿದವು ಹಾಗೂ ಇನ್ನೂ ನಡೆಯುತ್ತಿವೆ.

ವಿಯೆಟ್ನಾಮ್ ಜನತೆಯ ಹೋರಾಟ ಸುವರ್ಣಾಕ್ಷರಗಳಿಂದ ಬರೆದಿಡುವಂತದ್ದು. ಅಮೇರಿಕದ ವಿರುದ್ಧ ಅತಿ ದೀರ್ಘಕಾಲ ರಕ್ತಹರಿಸಿ ಯುದ್ಧ ನಡೆಸಿದ ವಿಯೆಟ್ನಾಮ್ ಜನತೆ ತಮ್ಮ ರಾಷ್ಟ್ರವನ್ನು ವಿಮೋಚನೆಗೊಳಿಸಿ ಸಮಾಜವಾದವನ್ನು ಸ್ಥಾಪಿಸಿದರು. ರಾಷ್ಟ್ರೀಯ ವಿಮೋಚನಾ ಶಕ್ತಿಗಳ ಮೇಲೆ ಮತ್ತು ಮಾನವ ನಾಗರೀಕತೆಯ ಪ್ರಗತಿಯ ಮೇಲೆ ಈ ಹೋರಾಟದಿಂದ ಆದಷ್ಟು ಗಾಢ ಪ್ರಭಾವ ಚರಿತ್ರೆಯಲ್ಲಿ ಬೇರಾವ ಯುದ್ಧದಿಂದಲೂ ಆಗಿಲ್ಲವೆನ್ನಬಹುದು.

○




ವಿಶ್ವವೇ ನಮ್ಮ ಮನೆ

ಮುರಿದು ಆಫ್ರಿಕಾ ಖಂಡದ ದಕ್ಷಿಣ ಭಾಗದ ಸ್ವಾಭಾವಿಕ ಸಂಪತ್ತಿನ ಮೇಲೆ ಮತ್ತೆ ಅಧಿಪತ್ಯ ನಡೆಸಲು ಸಾಧ್ಯವಾಗುವಂತೆ ವ್ಯಾಪಕ ಪ್ರಮಾಣದ ಯುದ್ಧ ಆರಂಭಿಸುವುದು ಈಗ ಸಾಮ್ರಾಜ್ಯಶಾಹಿಗಳ ಕಾರ್ಯಕ್ರಮದ ಮೊದಲ ಅಂಶವಾಗುವ ಸಾಧ್ಯತೆಯಿದೆ. ಇದೇ ಈ ಪ್ರದೇಶದಲ್ಲಿ ಶಾಂತಿಗೆ ಬಂದಿರುವ ಬೆದರಿಕೆ.

ಮಧ್ಯ ಅಮೇರಿಕಾ: ರಕ್ತದ ಹೊಳೆ

ಅಮೇರಿಕಾ ಬೆಂಬಲಿತ ಯುದ್ಧದ ಬೆದರಿಕೆ ತೀವ್ರವಾಗಿರುವ ಇನ್ನೊಂದು ಪ್ರದೇಶ ದಕ್ಷಿಣ ಅಮೇರಿಕಾ. ಇಲ್ಲಿನ ನಿಕಾರಾಗುವಾ, ಎಲ್‌ಸಾಲ್ವಡೋರ್, ಗ್ವಾಟೆಮಾಲಾ, ಹೊಂಡುರಾಸ್, ಕೋಸ್ಟಾರಿಕಾ, ಪನಾಮಾ ಈ ದೇಶಗಳ ಎರಡು ಕೋಟಿ ನಿವಾಸಿಗಳು ಇದುವರೆಗೆ ಕಂಡಿರದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ಸುಮಾರು ಐದು ಶತಮಾನಗಳಿಂದ ಸ್ಪ್ಯಾನಿಶರು, ಫ್ರೆಂಚರು, ಬ್ರಿಟಿಷರು ಹಾಗೂ ಅಮೇರಿಕನ್ನರ ವಿಲಾಸಕ್ಕಾಗಿ ಬೆವರುಸುರಿಸಿ ಸೊರಗಿಸಿಕೊಂಡ ಇಲ್ಲಿಯ ಜನತೆ ಜಗತ್ತಿನಲ್ಲಿಯೇ ಅತ್ಯಂತ ದಾರಿದ್ರ್ಯದಲ್ಲಿ ನರಳುತ್ತಿರುವವರು. ಇವರ ಬಾಳೆ ತೋಟಗಳು, ಕಾಫಿ ತೋಟಗಳು, ಹತ್ತಿ ಹಾಗೂ ಕಬ್ಬು ಹಲವಾರು ಹಳ್ಳಿಗಳನ್ನು ನಿರ್ನಾಮಗೊಳಿಸಲಾಗಿದೆ. ಹೊಂಡುರಾಸ್‌ನದ್ದು ಇದೇ ಕಥೆ. ಎಲ್‌ಸಾಲ್ವಡೋರ್ ಅಂತೂ ಒಂದು ದೊಡ್ಡ ಕಸಾಯಿಖಾನೆಯಾಗಿಬಿಟ್ಟಿದೆ. ಕಳೆದ 27 ತಿಂಗಳಲ್ಲೇ 35 ಸಾವಿರ ಜನರನ್ನು ಕೊಲ್ಲಲಾಗಿದೆ. ಲಕ್ಷಗಟ್ಟಲೆ ರೈತರನ್ನು ಜಮೀನು ಬಿಟ್ಟೋಡುವಂತೆ ಮಾಡಲಾಗಿದೆ. ಎರಡು ವರ್ಷಗಳ ಹಿಂದೆ ವಿಮೋಚನೆಗೊಂಡ ನಿಕಾರಗುವಾದ ಕ್ರಾಂತಿಯನ್ನು ಇಲ್ಲದಂತೆ ಮಾಡಲು ಭಯೋತ್ಪಾದನೆ, ಬುಡಮೇಲು ಚಟುವಟಿಕೆ ಹಾಗೂ ಆಕ್ರಮಣದ ಬೆದರಿಕೆಯಿಂದ ಪ್ರಯತ್ನಿಸಲಾಗುತ್ತಿದೆ. ಶಾಂತ ಸಾಗರ ಹಾಗೂ ಅಟ್ಲಾಂಟಿಕ್ ಸಾಗರದ ನಡುವೆ ಅಮೇರಿಕಾದ ವ್ಯಾಪಾರೀ ಸಂಪರ್ಕವಾಗಿದ್ದ ಪನಾಮಾ ಕಾಲುವೆ



ವಿಮೋಚನಾ ಹೋರಾಟಗಾರರಿಗೆ ಈ ಹಣೆಪಟ್ಟಿ !

ವಿದೇಶೀ ಕಂಪೆನಿಗಳ ಬೊಕ್ಕಸ ತುಂಬಿಸುತ್ತಿವೆ. ಈ ವಿಶಾಲ ತೋಟಗಳ ಮಾಲೀಕರೂ ಆ ವಿದೇಶೀ ಕಂಪೆನಿಗಳೇ. ತಮ್ಮ ಬಹುರಾಷ್ಟ್ರೀಯ ಕಂಪೆನಿಗಳು, ಸೈನ್ಯ ಹಾಗೂ 'ಮಿತ್ರ' ಆಡಳಿತಗಳ (ವಾಸ್ತವವಾಗಿ ಸರ್ವಾಧಿಕಾರಿಗಳು) ಮೂಲಕ ಈ ದೇಶಗಳ ಜನತೆಯನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳು ತಮ್ಮ ಕಪಿಮುಷ್ಠಿಯಲ್ಲಿ ಸಿಲುಕಿಸಿಕೊಂಡಿದ್ದಾರೆ. ಕೊನೆಯಿಲ್ಲದ ಬಡತನ, ಹಸಿವೆ, ಅತ್ಯಂತ ಕೀಳು ಮಟ್ಟದ ಶೋಷಣೆ, ನಿರಕ್ಷರತೆ, ರೋಗ, ಸಾಮೂಹಿಕ ಅನ್ಯಾಯದಿಂದಾಗಿ, ನಾಗರಿಕ ಹಾಗೂ ಮಾನವೀಯ ಹಕ್ಕುಗಳಿಂದ ವಂಚಿತರಾದ ಈ ಜನ ಸಿಡಿದೆದ್ದಾಗ ಅವರನ್ನು ದಮನಿಸಲು ಈ ದೇಶಗಳ ಸರ್ವಾಧಿಕಾರಿಗಳ ಕೈಯಲ್ಲಿ ಅಮೇರಿಕಾ ಕೊಟ್ಟ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿವೆ. ಅದೂ ಸಾಲದಿದ್ದರೆ ಅಮೇರಿಕಾದ ಸಾವಿರಾರು ಮಿಲಿಟರಿ ಸಲಹೆಗಾರರು ಸದಾ ಸಿದ್ಧರಾಗಿದ್ದಾರೆ. ಗ್ವಾಟೆಮಾಲಾದಲ್ಲಿ ಕಳೆದ 25 ವರ್ಷಗಳಲ್ಲಿ 35 ಸಾವಿರ ಜನರನ್ನು ಕೊಲ್ಲಲಾಗಿದೆ. ಯನ್ನು ಪನಾಮಾದ ರಾಷ್ಟ್ರೀಯವಾದೀ ಸರಕಾರ ಅಮೇರಿಕಾದ ಅಧಿಪತ್ಯದಿಂದ ವಿಮೋಚನೆಗೊಳಿಸಿದ್ದಕ್ಕಾಗಿ ಸಾಮ್ರಾಜ್ಯಶಾಹಿಗಳು ಹಲ್ಲು ಕಡಿಯುತ್ತಿದ್ದಾರೆ. ಕೋಸ್ಟಾರಿಕಾದ ಸರಕಾರವನ್ನಂತೂ ಐ ಎಮ್.ಎಫ್. ನಡೆಸುತ್ತಿದೆ.

ದಕ್ಷಿಣ ಅಮೇರಿಕಾದ ಈಗಿನ ಪರಿಸ್ಥಿತಿ ವಿಯೆಟ್ನಾಂನ್ನು ನೆನಪಿಸುತ್ತಿದೆ. ಒಂದೆಡೆ ಬಿಲಿಯನ್‌ಗಟ್ಟಲೆ ಡಾಲರುಗಳನ್ನು ಶಸ್ತ್ರಾಸ್ತ್ರಗಳ ಹಾಗೂ ಮಿಲಿಟರಿ 'ಸಲಹೆಗಾರರ' ಮೂಲಕ ರೇಗನ್ ಆಡಳಿತ ಇಲ್ಲಿ ಸುರಿಯುತ್ತಿದ್ದರೆ ಇನ್ನೊಂದೆಡೆ ಅಮೇರಿಕಾದ ಸುಮಾರು ನೂರು ನಗರಗಳಲ್ಲಿ ಈ ಅಪಾರ ಅಪವ್ಯಯ ಹಾಗೂ ಅಮಾನವೀಯ ಕ್ರಮಗಳ ಬಗ್ಗೆ ಬಲವಾದ ವಿರೋಧ ವ್ಯಕ್ತಪಟ್ಟಿದೆ. ಫ್ರಾನ್ಸ್, ಗ್ರೀಸ್ ಹಾಗೂ ಮೆಕ್ಸಿಕೋ ಕೂಡಾ ರಾಜಕೀಯ ಪರಿಹಾರ ಕಂಡುಕೊಂಡು ಈ ದೇಶಗಳ ಜನರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯಮಾಡಿವೆ. ಮಧ್ಯ ಅಮೇರಿಕಾದಲ್ಲಿ ಜನತೆಯ ಬಂಡಾಯವನ್ನು ಬಚ್ಚಿ ಹಾಕಲು ಪಿತೂರಿ ಮಾಡುತ್ತಿರುವ ಸಾಮ್ರಾಜ್ಯಶಾಹಿಗಳ ಕುತಂತ್ರಗಳನ್ನು ಯುದ್ಧ ಸಿದ್ಧತೆಗಳನ್ನು ವಿಫಲಗೊಳಿಸಲು ಕೇವಲ ಇವಿಷ್ಟೇ ಸಾಲದು. ಜಗತ್ತಿನ ಶಾಂತಿಪ್ರಿಯ ಶಕ್ತಿಗಳು ಇನ್ನೂ ಹೆಚ್ಚಿನ ಪ್ರಯತ್ನ ನಡೆಸಬೇಕಾಗಿದೆ.

ಶಾಂತಿ : ಶೋಷಿತರ ಪ್ರಯೋಜನಕ್ಕಾಗಿ

ಜಗತ್ತನ್ನು ಹತೋಟಿಯಲ್ಲಿಟ್ಟುಕೊಂಡು ಬದಲಾವಣೆ ಬರದಂತೆ ನೋಡಿಕೊಳ್ಳಲು ಮಾತ್ರವಲ್ಲ ಸಾಮ್ರಾಜ್ಯಶಾಹಿಗಳಿಗೆ ಯುದ್ಧ ಅಗತ್ಯವಾಗಿರುವುದು. ಅದು ಅವರಿಗೊಂದು ಉತ್ತಮ ವ್ಯಾಪಾರೀ ಮೂಲವೂ ಹೌದು. ಮನುಷ್ಯನ ಕ್ರಿಯಾಶೀಲತೆ, ವಿಜ್ಞಾನದ ಆಧುನಿಕ ಸಾಧನೆಗಳನ್ನು ಜಗತ್ತಿನ ಜನತೆಯ ಬಡತನ, ಹಸಿವು, ರೋಗ ನಿವಾರಿಸಲು, ಕೈಗಾರಿಕೀಕರಣಕ್ಕಾಗಿ ಬಳಸಲು ಹಣವೇ ದೊರೆಯದಿದ್ದರೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಗೆ ಅಡೆ-ತಡೆಯಿಲ್ಲದೆ ದುಡ್ಡು ಸಿಗುತ್ತದೆ.

ಜನಸಾಮಾನ್ಯರಿಗೆ ಶಾಂತಿ ಬೇಕು. ನಿಜ. ಆದರೆ ಅವರ ವಿಮೋಚನೆಯನ್ನು ತಡೆಯುವ, ಹಸಿವಿನ ಹಿಡಿತದಿಂದ ಪಾರು ಮಾಡದೆ ಅವರನ್ನು ಮತ್ತಷ್ಟು ದರಿದ್ರಗೊಳಿಸುವ ಶಾಂತಿಯಲ್ಲ ಅವರು ಬಯಸುವುದು. ಸಾಮ್ರಾಜ್ಯಶಾಹಿಗಳು ಯುದ್ಧ ನಡೆಸಲು ಅಸಾಧ್ಯವಾಗುವಂತಹ ಶಾಂತಿ ಅವರಿಗೆ ಬೇಕು. ಜನತೆಯ ತೀವ್ರ ಪ್ರತಿಭಟನೆ ಎದುರಿಸಬೇಕಾಗಿ ಬಂದಾಗ ಶೋಷಕರೂ ಶಾಂತಿಗಾಗಿ ಬೊಬ್ಬೆಯಿಡುತ್ತಾರೆ. ಶಾಂತಿಯೆಂಬುದು ಕೆಲವೊಮ್ಮೆ ಶೋಷಕರಿಗೇ ಪ್ರಯೋಜನಕಾರಿಯಾಗಬಹುದು. ಜನತೆಗೆ ಶಾಂತಿಯುತ ಸಾಮಾಜಿಕ ಕ್ರಾಂತಿ ಬೇಕು. ಆದರೆ ಅದು ಶಾಂತಿಯುತವಾಗಿ ದೊರೆತಿರುವ ಉದಾಹರಣೆ ಇದುವರೆಗೆ ಚರಿತ್ರೆಯಲ್ಲಿ ಇಲ್ಲ.

ಆದ್ದರಿಂದ ಶಾಂತಿಹೋರಾಟಗಾರರು ಈಗ ಕರೆ ನೀಡಬೇಕಾಗಿರುವುದು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಜನತೆಯನ್ನು ನಿಶ್ಶಸ್ತ್ರಗೊಳಿಸುವ ಶಾಂತಿಗಾಗಿ ಅಲ್ಲ; ಜಗತ್ತನ್ನು ತಮ್ಮ ವ್ಯಾಪಾರೀ ಲಾಭಕ್ಕಾಗಿ, ಸಂಕುಚಿತ ಹಿತಾಸಕ್ತಿಗಳಿಗಾಗಿ ವಿನಾಶದ ಅಂಚಿಗೆ ಒಯ್ಯುತ್ತಿರುವ ಸಾಮ್ರಾಜ್ಯಶಾಹಿಗಳನ್ನು ನಿಶ್ಶಸ್ತ್ರಗೊಳಿಸುವ ಶಾಂತಿಗಾಗಿ ಕರೆ ನೀಡಬೇಕಾಗಿದೆ.

○

> ಜಗತ್ತಿನ ಶೋಷಿತ ಜನತೆ ಬಯಸುವುದು ಶಾಂತಿಯುತ ಸಾಮಾಜಿಕ ಕ್ರಾಂತಿ ಆದರೆ ಅದು ಶಾಂತಿಯುತವಾಗಿ ದೊರೆತಿರುವ ಉದಾಹರಣೆ ಇದುವರೆಗೆ ಚರಿತ್ರೆಯಲ್ಲಿ ಇಲ್ಲ. ಆದ್ದರಿಂದ ಶಾಂತಿ ಹೋರಾಟಗಾರರು ಈಗ ಕರೆ ನೀಡಬೇಕಾಗಿರುವುದು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಜನತೆಯನ್ನು ನಿಶ್ಶಸ್ತ್ರಗೊಳಿಸುವ ಶಾಂತಿಗಾಗಿ ಅಲ್ಲ; ಜಗತ್ತನ್ನು ವಿನಾಶದ ಅಂಚಿಗೆ ಒಯ್ಯುತ್ತಿರುವ ಸಾಮ್ರಾಜ್ಯಶಾಹಿಗಳನ್ನು ನಿಶ್ಶಸ್ತ್ರಗೊಳಿಸುವ ಶಾಂತಿಗಾಗಿ ಕರೆ ನೀಡಬೇಕಾಗಿದೆ.

ಐಕ್ಯರಂಗ
ಚಂದಾ ವಿವರ

ವಾರ್ಷಿಕ ಚಂದಾ	30 ರೂ
ಅರ್ಧ ವಾರ್ಷಿಕ ಚಂದಾ	15 ರೂ.

[ಈ ಸುಂದರ ಕವನವನ್ನು ಖ್ಯಾತ ಕವಿ ಫೈಜ್ ಪ್ಯಾಲೆಸ್ತೈನಿಯ ಹುತಾತ್ಮರಿಗೆ ಅರ್ಪಿಸಿದ್ದಾರೆ.]

ಎಲ್ಲೇ ಹೋಗಲಿ ನಾನು
ಓ ! ನನ್ನ ತಾಯ್ನೆಲವೇ
ಸುಡುತಲಿದೆ ಎದೆಯನ್ನು
ನೀ ಅನುಭವಿಸಿದ
ಅವಮಾನದ ನೋವು

ನೀ ಪಡೆವ ಗೌರವ ನನ್ನದಾಗುತ್ತದೆ
ನಿನ್ನ ಬದುಕು ನನ್ನೊಡನೆ ಬೆಸೆಯುತ್ತದೆ
ನನ್ನುಸಿರಲ್ಲಿ ಬೆರೆಯುತ್ತದೆ
ನಿನ್ನ ನೆಲದ ನಿಂಬೆಯ ಕಂಪು

ಕಾಣದ ಗೆಳೆಯರು
ನನ್ನೊಂದಿಗಿದ್ದಾರೆ
ನಾ ಸ್ಪರ್ಶಿಸದ ಅವರ ಕೈಗಳು
ನನ್ನ ಕೈಗಳಿಗೆ ಶಕ್ತಿಯನ್ನೀಯುತ್ತಿವೆ

ದೂರದ ಹೆದ್ದಾರಿಗಳಲ್ಲಿ
ಅಪರಿಚಿತ ಹಾದಿಗಳಲ್ಲಿ
ಪರದೇಶದ ಪಟ್ಟಣಗಳಲ್ಲಿ
ಎಲ್ಲೆಲ್ಲಿ ನನ್ನ ರಕ್ತ ಪತಾಕೆ
ಅರಳುವುದೋ
ಅಲ್ಲೆಲ್ಲಾ ತುಡಿಯುತ್ತದೆ
ಪ್ಯಾಲೆಸ್ತೀನಿನ ಧ್ವಜ

ಶತ್ರುಗಳು ಪ್ಯಾಲೆಸ್ತೀನನ್ನು
ನಾಶ ಮಾಡಿದ್ದಾರೆ
ಆದರೆ ಸೃಷ್ಟಿಸುತ್ತದೆ
ನನ್ನೆದೆಯ ಸಂಕಟ
ಅಸಂಖ್ಯ ಪ್ಯಾಲೆಸ್ತೀನುಗಳನ್ನು

— ಫೈಜ್ ಅಹ್ಮದ್ ಫೈಜ್

ಪ್ರಗತಿ ಏತಕ್ಕಾಗಿ ? ಯಾವ ಲಕ್ಷ್ಯ ಸಾಧನೆಗಾಗಿ ?

—ಎ. ಎಸ್. ಮೂರ್ತಿ

ಮಹಾ ವಿಜ್ಞಾನಿ ಐನ್‌ಸ್ಟೀನ್‌ರನ್ನು ಮೂರನೇ ಪ್ರಪಂಚದ ಯುದ್ಧದಲ್ಲಿ ಯಾವ ಮಾದರಿಯ ಶಸ್ತ್ರಾಸ್ತ್ರಗಳನ್ನು ಬಳಸಲಾಗುವುದು ಎಂದು ಪ್ರಶ್ನಿಸಿದಾಗ, ಅವರು ನಾಲ್ಕನೇ ಮಹಾ ಯುದ್ಧದಲ್ಲಿ ಕಲ್ಲುಗಳಂಥ ಆದಿಮ ಕಾಲದ ಆಯುಧಗಳನ್ನು ಬಳಸಲಾಗುತ್ತದೆಂದು ಸಕಾರಾತ್ಮಕವಾಗಿ ಖಂಡಿತ ಹೇಳುತ್ತೇನೆ ಎಂದು ಉತ್ತರವಿತ್ತರು. ಅವರ ಈ ಮಾತಿನ ಅಂತರಾರ್ಥವೂ ಸ್ಪಷ್ಟ. ಈಗೇನಾದರೂ ಮೂರನೇ ಪ್ರಪಂಚ ಯುದ್ಧ ಸಂಭವಿಸಿದ ಪಕ್ಷದಲ್ಲಿ, ಆ ಯುದ್ಧದಲ್ಲಿ ಬಳಸಲಾಗುವ ಶಸ್ತ್ರಾಸ್ತ್ರಗಳು ಎಷ್ಟು ಅಪಾಯಕಾರಿಯಾದುವು ಎಂದರೆ, ಈ ಯುದ್ಧದಲ್ಲಿ ಮಾನವರು ಬದುಕಿ ಉಳಿದರೂ, ಅವರು ಶಿಲಾಯುಗದ ಪರಿಸ್ಥಿತಿಗಳಲ್ಲಿರುತ್ತಾರೆ. ಶತಮಾನಗಳ ಕಾಲದಲ್ಲಿ ಮಾನವ ಪ್ರತಿಭೆಯು ಶ್ರಮವಹಿಸಿ ನಿರ್ಮಿಸಿದ ನಾಗರಿಕತೆಯು ನಾಶವಾಗುತ್ತದೆ. ಮಾನವನ ಬೌದ್ಧಿಕ ಸೃಷ್ಟಿಗಳಾದ ಕಾರ್ಖಾನೆಗಳು - ಕೃಷಿಕ್ಷೇತ್ರಗಳು, ವೈಜ್ಞಾನಿಕ ಸಂಸ್ಥೆಗಳು, ವೈದ್ಯಕೀಯ ಪ್ರಯೋಗಾಲಯಗಳು, ಗಗನಚುಂಬಿ ಕಟ್ಟಡಗಳು – ಸಣ್ಣಪುಟ್ಟ ಮನೆಗಳು – ಸಂಕ್ಷಿಪ್ತವಾಗಿ ಹೇಳಬಹುದಾದರೆ ಶತಮಾನಗಳಲ್ಲಿ ವಿಕಾಸಗೊಳಿಸಿದ ಎಲ್ಲ ಮಾನವ ಸೃಷ್ಟಿಗಳೂ, ಮೌಲ್ಯಗಳೂ ನಾಶವಾಗುತ್ತದೆ. ಶ್ರೀಮಂತರು - ಬಡವರು, ಉದ್ಯೋಗಿಗಳು - ನಿರುದ್ಯೋಗಿಗಳು, ವೃದ್ಧರು - ಯುವಕರು, ಮಾತೆಯರು - ಮಕ್ಕಳು ಎಲ್ಲರ ಪಾಡೂ ಒಂದೇ. ಮೃತ್ಯು ಎಲ್ಲವನ್ನೂ, ಎಲ್ಲರನ್ನೂ ಸಮಗೊಳಿಸುವುದೆಂಬುದು ಸರ್ವವಿದಿತವಷ್ಟೆ.

ಇದು ಕಲ್ಪನೆಯೂ ಅಲ್ಲ. ಇಲ್ಲವೆ ವೈಜ್ಞಾನಿಕ ಕಥೆ, ಕಾದಂಬರಿಯ ಸೃಷ್ಟಣೆಯೂ ಅಲ್ಲ. ಅಥವಾ ಜನರನ್ನು ಭೀತಿಗೊಳಿಸುವ ಸಲುವಾಗಿ ಹೇಳುತ್ತಿರುವ ಮಾತೂ ಅಲ್ಲ. ಇದು ಕಟು ಸತ್ಯ.

ಕೆಲವು ಶತಮಾನಗಳ ಹಿಂದೆ ವಿಜ್ಞಾನ ಪ್ರಗತಿಯ ವೇಗ ತುಂಬ ನಿಧಾನವಾಗಿದ್ದಿತು. ಪ್ರತಿ ಶತಮಾನದಲ್ಲೂ ಹೆಮ್ಮೆಪಡಬಹುದಾದಂತಹ ಒಂದೆರಡು "ಯುಗಪ್ರವರ್ತಕ" ಸಂಶೋಧನೆಗಳು ನಡೆದಿದ್ದವು ಅಷ್ಟೆ. ಕಳೆದ ಶತಮಾನದಲ್ಲಿ ಈ ಪ್ರಗತಿಯ ವೇಗ ಸ್ವಲ್ಪ ಹೆಚ್ಚಿತು. ಆದರೆ ಈಗ, ಒಂದು ಕಾಲುನೂರಿನ ಅವಧಿಯಲ್ಲಿ ವಿಜ್ಞಾನ ಮತ್ತು ಪ್ರಾವಿಧಿಗಳು ಒಟ್ಟಾಗಿ ದಾಪುಗಾಲಿರಿಸಿವೆ.

ಸಣ್ಣ ಹೋಲಿಕೆಗಳು, ತುಲನೆಗಳು ಈ ವಿಷಯವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತವೆ. 1552ರ ಡಿಸೆಂಬರ್ 6 ರಂದು ಶಿಥಿಲಗೊಂಡ ಸಣ್ಣ ಯುದ್ಧ ನೌಕೆ ವಿಕ್ಟೋರಿಯ ಸ್ಪ್ಯಾನಿಷ್ ಬಂದರು ಸಾನ್‌ಲುಕಾರ್‌ಗೆ ತೆವಳಿಕೊಂಡು ಬಂದಿತು. ಆ ಹಡಗಿನಲ್ಲಿ ಅಸ್ಥಿಪಂಜರದಂತಿದ್ದ ಕೆಲವೇ ವಿಮುಕ್ತ ಕಲಾಸಿಗಳಿದ್ದರು. ಜ್ವೇಗ್ ನೀಡಿರುವ ವಿವರಣೆಗಳಿಂದ, "ಮ್ಯಾಗೆಲಾನ್‌ನ ನೇತೃತ್ವದಲ್ಲಿ, ಅಡೇವಿನಿಂದ 265 ಮಂದಿ ಪುನಃ ಪ್ರಯಾಣ ಹೊರಟರು. ಈ ಬಾರಿ, 18 ಮಂದಿ ಮಾತ್ರ ಉಳಿದಿದ್ದ ಆ ನೌಕೆ ತೌರು ಬಂದರಿಗೇ ವಾಪಸಾಯಿತು. ಜನ ಅವರತ್ತ, ತಾವು ಅದೇ ತಾನೇ ಗೋರಿಯಿಂದ ಎದ್ದು ಬಂದ ಭೂತಗಳತ್ತ ನೋಡುತ್ತಿರುವಂತೆ ಭೀತರಾಗಿ ನೋಡಿದರು...." ಎಂದು ತಿಳಿದುಬರುತ್ತದೆ.

ಆದರೆ ಆ ದಿನಗಳಲ್ಲಿ ಅವರ ಸಾಧನೆಗಳು ತುಂಬ ರೋಮಾಂಚಕಾರಿ ಸಾಹಸಗಳಾಗಿದ್ದವು. ಈ ಸಮುದ್ರಯಾನಗಳ ಸಂಚಾಲಕ ಮ್ಯಾಗೆಲಾನ್, ಈ ಅದ್ಭುತ ಸಾಧನೆಗೆ ಮೊದಲು ಸತ್ತರೂ, ಹಡಗಿನ ಕಲಾಸಿಗಳು ಈ ಮೊದಲಿಗೆ ಯಾರೂ ಸಾಧಿಸದಿದ್ದುದನ್ನು ಸಾಧಿಸಿದ್ದರು. ಅವರೇ ಇಡೀ ಜಗತ್ತನ್ನು ಮೊಟ್ಟಮೊದಲ ಬಾರಿಗೆ ಸುತ್ತುಹಾಕಿದ ನಾವಿಕರಾಗಿದ್ದರು !

ಮ್ಯಾಗೆಲಾನ್‌ನ ಈ ಸಾಹಸದ 450 ವರ್ಷಗಳ ನಂತರ 1961ರ ಏಪ್ರಿಲ್ 12 ರಂದು, ಗಗನ ನೌಕೆ ವೋಸ್ತೋಕ್—1 ರಲ್ಲಿ ಕೇವಲ 1 ಗಂಟೆ 40 ನಿಮಿಷಗಳಲ್ಲಿ ನಮ್ಮ ಈ ಇಡೀ ಭೂಗ್ರಹವನ್ನು ಪ್ರದಕ್ಷಿಣೆ ಹಾಕಲಾಯಿತು. 20 ಮಿಲಿಯ ಅಶ್ವಶಕ್ತಿ ಸಾಮರ್ಥ್ಯದ ಎಂಜಿನುಗಳನ್ನುಳ್ಳ ರಾಕೆಟ್‌ಅನ್ನು ಮಾಸ್ಕೋ ವೇಳೆ 9-07ಕ್ಕೆ ಹಾರಿಸಲಾಯಿತು; 10-55ಕ್ಕೆಲ್ಲ, ಜಗತ್ತಿನ ಪ್ರಪ್ರಥಮ ಗಗನಯಾನಿಯು ನಮ್ಮ ಇಡೀ ಭೂಗ್ರಹವನ್ನು ಪ್ರದಕ್ಷಿಣೆ ಹಾಕಿದ ನಂತರ ಸರಾತೋವ್ ಬಳಿ ಇಳಿದ !

ಮತ್ತೊಂದು ಉದಾಹರಣೆ: ಮಾನವ ಸಾವಿರಾರು ವರ್ಷಗಳ ಹಿಂದೆ ವಿದ್ಯುಚ್ಛಕ್ತಿ ಮತ್ತು ಕಾಂತಶಕ್ತಿಯ ಬಗೆಗೆ ಸ್ಥೂಲ ತಿಳಿವಳಿಕೆ ಪಡೆದನೆಂದು ಹೇಳಬಹುದು. ಆದರೆ ಅವುಗಳ ನಡುವಣ ನಿಕಟ ಸಂಬಂಧಗಳು ಅಂದರೆ ಹೆಚ್ಚು ಸಂಕೀರ್ಣವಾದ ಏಕ ಅಖಂಡ ನಿಯಮದ ವಿವಿಧ ಲಕ್ಷಣಗಳು, ಗುಣ ಧರ್ಮಗಳು 19ನೇ ಶತಮಾನದ 30ರ ವರ್ಷಗಳಲ್ಲಿ ಸ್ಪಷ್ಟವಾದುವು. 1831 ರಲ್ಲಿ ಮೈಕೇಲ್ ಫ್ಯಾರಡೆ ವಿದ್ಯುತ್ಕಾಂತೀಯ ಚೋದಕ ಶಕ್ತಿಯನ್ನು ಗಮನಿಸಿದ ನಂತರ ಅವನ್ನು ಕೈಗಾರಿಕೆಗಳಿಗೆ ಬಳಸಿಕೊಳ್ಳುವ ವಿಧಾನವನ್ನು ಅರಿಯಲು 40 ವರ್ಷಗಳು ಹಿಡಿದವು; 1873 ರಲ್ಲಿ ತಾಂತ್ರಿಕವಾಗಿ ಮುಂದುವರೆದ ಪ್ರಪ್ರಥಮ ಡೈನಾಮೊ ಅನ್ನು ನಿರ್ಮಿಸಲು ಸಾಧ್ಯವಾಯಿತು; ಕೇವಲ ಒಂದು ಶತಮಾನಕ್ಕೆ ಹಿಂದೆ ಅಂದರೆ 1882ರಲ್ಲಿ ವಿದ್ಯುಚ್ಛಕ್ತಿ ಉತ್ಪಾದಿಸುವ ಪ್ರಪ್ರಥಮ ಕೇಂದ್ರವನ್ನು ಸ್ಥಾಪಿಸಲಾಯಿತು.

ಛಾಯಾಚಿತ್ರಗ್ರಹಣ ಕಲೆಯ ಸೂತ್ರಗಳು ಕಾರ್ಯತಃ ಅನುಷ್ಠಾನಕ್ಕೆ ಬರಲು ಶತಮಾನವೇ(1727-1829) ಹಿಡಿಯಿತು; ಟೆಲಿಫೋನ್‌ಗೆ ಅರ್ಧ ಶತಮಾನಕ್ಕೂ (1820-1876) ಹೆಚ್ಚು ಕಾಲ ಬೇಕಾಯಿತು; ರೇಡಿಯೋಗೆ ಸುಮಾರು 35 ವರ್ಷಕಾಲ (1867–1902)ವೂ; ದೂರ ದರ್ಶನಕ್ಕೆ 15 ವರ್ಷ (1922–1936) ಗಳೂ, ರಾಡಾರ್‌ಗೆ 14 ವರ್ಷಗಳೂ (1926-1940) ಬೇಕಾದವು. ನೀವೇ ನೋಡುವಂತೆ ಸಿದ್ಧಾಂತಗಳ, ಸೂತ್ರಗಳ ಪ್ರತಿಪಾದನೆ ಮತ್ತು ಅವುಗಳ ಕಾರ್ಯತಃ ಅಳವಡಿಕೆಯ ಅವಧಿ ನಿರಂತರವಾಗಿ ಹೆಚ್ಚು ಹೆಚ್ಚು ಕಡಿಮೆಯಾಗುತ್ತ ಬಂದಿದೆ. ಪರಮಾಣು ಶಸ್ತ್ರಾಸ್ತ್ರಗಳನ್ನು ವಿಕಾಸಗೊಳಿಸಲು ಕೇವಲ ಆರು ವರ್ಷಗಳೂ (1939-1945), ಟ್ರಾನ್ಸಿಸ್ಟರ್‌ಗಳ ತಯಾರಿಕೆಗೆ ಕೇವಲ ಐದು ವರ್ಷಗಳೂ (1948-1953), ಲೇಸರ್‌ಗಳಿಗೆ ಮೂರು ವರ್ಷಗಳೂ (1958-1961) ಹಿಡಿದವಷ್ಟೆ. ನಮ್ಮ ಈ ಶತಮಾನವನ್ನು ಹಾಗೆಯೇ ಈ ಇಳೆಯ ಮೇಲಿನ ನಮ್ಮೆಲ್ಲರ ಬದುಕನ್ನೂ ರೂಪಾಂತರಿಸುವುದರಲ್ಲಿ ಕಾಲದ ಉಳಿತಾಯದಿಂದಾಗುತ್ತಿರುವ ಅಧಿಕ ಪ್ರಯೋಜನಗಳನ್ನು ಎಲ್ಲರೂ ಸ್ಪಷ್ಟವಾಗಿ ಕಾಣಬಹುದಾಗಿದೆ.

ಮತ್ತೊಂದು ದೃಷ್ಟಾಂತವನ್ನೂ ನೋಡಿ: "ಈ ಶೋಧನೆಯು ನಾಗರಿಕತೆಯ ಇತಿಹಾಸದಲ್ಲೇ ಹೊಸ ಯುಗವನ್ನು ಆರಂಭಿಸಿತು. ಅದು, ಮಾನವ ಸಮಾಜದ ವಿಕಾಸದಲ್ಲಿ ಚಕ್ರದ ಶೋಧನೆ, ಲೋಹಗಳ ಬಳಕೆ ಇಲ್ಲವೇ ಉಗಿ ಎಂಜಿನಿನ ಶೋಧನೆಗಿಂತ ಹೆಚ್ಚು ಕ್ರಾಂತಿಕಾರಿಯಾದುದೆಂದು ಇಂದಲ್ಲ ನಾಳೆ ಇಡೀ ಜಗತ್ತಿಗೆ ಸ್ಪಷ್ಟವಾಗುತ್ತದೆ. ಮಾನವ ಸಮಾಜವು ತನ್ನ ಇತಿಹಾಸದಲ್ಲಿ ಈ ಮೊದಲಿಗೆ ಎಂದಿಗೂ, ಅತ್ಯಂತ ಹೆಚ್ಚು ಭೀಕರವಾದ, ಅಪಾಯಕಾರಿಯಾದ, ಆದರೆ ಅದೇ ಸಮಯದಲ್ಲಿ ಮಾನವನ ಭವಿತವ್ಯಕ್ಕೆ, ಜಾಗತಿಕ ಶಾಂತಿಗೆ ಸಂಪೂರ್ಣ ಆಸೆ ಭರವಸೆಗಳನ್ನು ನೀಡುವಂತಹ ಶಕ್ತಿಯನ್ನು ಎದುರಿಸಿರಲಿಲ್ಲ."

ಯಾವುದನ್ನು ಕುರಿತು ಹೀಗೆ ಬರೆಯಲಾಗಿದೆ ಎಂದು ನೀವು ಊಹಿಸಬಲ್ಲಿರಾ ? ಇಂಥ ಕ್ರಾಂತಿಕಾರಿ ಲಕ್ಷಣಗಳನ್ನುಳ್ಳ ಆ ಹೊಸ ನವ ಶೋಧನೆ ಏನು ? ಸ್ವತಶ್ಚಲೀ ವ್ಯವಸ್ಥೆಗಳೇ ? ಅಲ್ಲ. ಪ್ರಾಯಶಃ ನ್ಯೂಕ್ಲಿಯರ್ ಎಂಜಿನೀಯರಿಂಗ್ ಇರಬಹುದೇ ? ಅಲ್ಲ ರಾಕೆಟ್ಟುಗಳೇ ? ಖಂಡಿತ ಅಲ್ಲ.

ಒಂದು ಶತಮಾನದ ಹಿಂದೆ, 1875 ರಲ್ಲಿ, ಕುದುರೆಗಳಿಲ್ಲದ ಬಂಡಿಗಳನ್ನು ಕುರಿತು ಸಂ. ರಾ. ಅಮೆರಿಕದ ಕಾಂಗ್ರೆಸ್‌ನ ಜಂಟಿ ಸಮಿತಿ ಮಾಡಿದ ವರದಿಯಿಂದ ಈ ಮೇಲಿನ ಮಾತುಗಳನ್ನು ಉಲ್ಲೇಖಿಸಲಾಗಿದೆ. ಆ ಸಮಿತಿ ಕುದುರೆರಹಿತ ಬಂಡಿ ಅಂದರೆ ಅಂತರ್ದಹನ ಎಂಜಿನ್ (ಇಂಟರ್‌ನಲ್‌ಕಂಬಸ್ಟನ್ ಎಂಜಿನ್) ಕಾರು ಕುರಿತು ಹೀಗೆ ವರದಿ ಮಾಡಿದ್ದಿತು.

ಆದರೆ ಈ ವರದಿಯ ನಂತರ 75 ವರ್ಷಗಳು,—ಈ ಅವಧಿ ಇತಿಹಾಸದ ಮಾಪನದಲ್ಲಿ ತುಂಬ ಕಡಿಮೆಯಾದುದು —ಕಳೆಯುವುದಕ್ಕೆ ಮೊದಲೇ ಇಡೀ ಮಾನವ ಕುಲ, ಜಗತ್ತು ನಾಗರಿಕತೆಯ ಇತಿಹಾಸದ ಹೊಸ ಶಕೆಯ, ಪರಮಾಣುಶಕ್ತಿ ಯುಗದ ಬಗೆಗೆ ಮಾತನಾಡಲು ಆರಂಭಿಸಿತು.

"19ನೇ ಶತಮಾನ ಕೇವಲ ಉಗಿ ಮತ್ತು ವಿದ್ಯುಚ್ಛಕ್ತಿಯ ಕಾಲವಷ್ಟೆ" ಎಂದೊಬ್ಬರು ಹೇಳಿದ್ದಾರೆ.

"ಆದರೆ 20ನೇ ಶತಮಾನವನ್ನು ನಾವು ಯಾವ ಹೆಸರಿನಿಂದ, ಏನೆಂದು ಕರೆಯೋಣ ? ಪರಮಾಣುಶಕ್ತಿಯ ಯುಗವೆಂದೆ? ಇಲ್ಲವೆ ಅಂತರಿಕ್ಷ ಮತ್ತು ಬಾಹ್ಯಾಂತರಿಕ್ಷಗಳ ಮೇಲೆ ಮಾನವನ ವಿಜಯ ಸಾಧನೆಯ ಶಕೆ ಎಂದೆ ? ಇಲ್ಲವೆ ಪಾಲಿಮರ್‌ಗಳ ಯುಗವೆಂದೆ ? ಅಥವಾ ರೇಡಿಯೊ, ದೂರದರ್ಶನ, ಎಲೆಕ್ಟ್ರಾನಿಕ್ಸ್‌ಗಳ ಶತಮಾನವೆಂದು ಕರೆಯೋಣವೆ ? ಇಲ್ಲ ಸೈಬರ್‌ನೆಟಿಕ್ಸ್, ಕಂಪ್ಯೂಟರ್‌ಗಳ ಶಕವೆನ್ನೋಣವೆ ? ಇಲ್ಲವೆ ಕೃಷಿಯನ್ನೂ ಯಾಂತ್ರೀಕರಣಗೊಳಿಸಿದ, ಬೇಸಾಯಕ್ಕೂ ರಸಾಯನ ಶಾಸ್ತ್ರವನ್ನು ಅಳವಡಿಸಿದ ಶತಮಾನವೆನ್ನೋಣವೆ ? ಇಲ್ಲವೆ, ಹೊಸ ಔಷಧಿಗಳ, ಮಾನವನ ಆಯುಸ್ಸನ್ನು ಹೆಚ್ಚಿಸಿದ ದೀರ್ಘಾಯು ಯುಗವೆಂದು ಕರೆಯಬೇಕೆ ?"

ಸುಪ್ರಸಿದ್ಧ ಇಂಗ್ಲೀಷ್ ಕಾದಂಬರಿಕಾರ ಆಲ್ಡಸ್ ಹಕ್ಸ್ಲೆ ತನ್ನ "ಬ್ರೇವ್ ನ್ಯೂ ವರ್ಲ್ಡ್" ಕಾದಂಬರಿಯ ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ : "ಪರಮಾಣು ಶಕ್ತಿಯ ಅನ್ವೇಷಣೆ, ಆ ಶಕ್ತಿಯ ವಿಸರ್ಜನೆಯು, ಮಾನವನ ಇತಿಹಾಸದಲ್ಲಿ ಮಹಾ ಕ್ರಾಂತಿಯ ಹೆಜ್ಜೆ ಗುರುತಾಗಿದೆ. ಆದರೆ (ಸ್ವತಃ ನಾವೇ ನಮ್ಮನ್ನು ಚೂರುಚೂರಾಗಿ ಸ್ಫೋಟಿಸಿಕೊಂಡು, ಇತಿಹಾಸಕ್ಕೆ ಚರಮಗೀತೆ ಹಾಡುವತನಕ) ಇದೇ ಕೊನೆಯದಾದ ಮತ್ತು ಅತ್ಯಂತ ಮಹತ್ವದ ಕ್ರಾಂತಿಕಾರಕ ಸಾಧನೆ ಏನಲ್ಲ. ನಿಜವಾದ, ಯಥಾರ್ಥವಾದ ಕ್ರಾಂತಿದಾಯಕವಾದ ಮಹಾ ಕ್ರಾಂತಿಯನ್ನು, ಬಾಹ್ಯಜಗತ್ತಿನಲ್ಲಿ ಅಲ್ಲ, ಆದರೆ ಮಾನವ ಜೀವಿಗಳ ದೇಹ, ಮನಸ್ಸುಗಳಲ್ಲಿ, ಅವರ ಚೇತನಗಳಲ್ಲಿ ಸಾಧಿಸಬೇಕಾಗಿದೆ."

ನಮ್ಮ ಈ ಶತಮಾನದಲ್ಲಿ, ಹಿಂದಿನ ಶತಮಾನಗಳಲ್ಲಿ ಆಗದೇ ಇರುವಂತಹ ಬೇಕಾದಷ್ಟು ಕ್ರಾಂತಿಕಾರಿ ಶೋಧನೆಗಳಾಗಿವೆ, ನಿಜ. ಇದು ಕೇವಲ ಪರಮಾಣು ಯುಗವಷ್ಟೇ ಅಲ್ಲ. ಮಾಲೆಕ್ಯುಲಾರ್ ಬಯಾಲಜಿ ವಿಷಯವೇನು ? ಸಾಪೇಕ್ಷ ಸಿದ್ಧಾಂತ ಹಾಗೂ ಕ್ವಾಂಟಂ ಮೆಕ್ಯಾನಿಕ್ಸ್ ಬಗೆಗೆ ಏನು ಹೇಳುವುದು ? ಲೇಸರ್ ಕಿರಣ ದಂಡಗಳು ? ಟ್ರಾನ್ಸಿಸ್ಟರ್‌ಗಳು ಮತ್ತು ಇತರ ಸೆಮಿ-ಕಂಡಕ್ಟರ್ ಮಿನಿ-ಉಪಕರಣಗಳು ? ಮಾಹಿತಿಗಳ ಸಂಸ್ಕರಣ, ಪರಿಷ್ಕರಣ ಸಾಧನಗಳಲ್ಲಿ ನಿಜವಾದ ಕ್ರಾಂತಿ ಸಾಧಿಸಲು ಎಲೆಕ್ಟ್ರಾನಿಕ್ ಕಂಪ್ಯೂಟರುಗಳೇ ಆಧಾರ ಎಂದು ಕೆಲವರು ಹೇಳುವರು. 1964ರಷ್ಟು ಹಿಂದೆಯೇ, ಅಮೆರಿಕನ್ ಅರ್ಥಶಾಸ್ತ್ರಜ್ಞ ಆರ್. ಥಾಯೊಬಾಲ್ಡ್, ಸೈಬರ್ ನೆಟಿಕ್ಸ್‌ನ ಅನ್ವಯವು ಈಗಾಗಲೇ ಕೈಗಾರಿಕಾ ಕ್ರಾಂತಿಯ ಮೂಲಭೂತ ಸ್ವರೂಪಗಳನ್ನು ಪ್ರದರ್ಶಿಸುತ್ತಿದೆ ಎಂದು ಸಾರಿದ್ದರು.

ಇಂಥ ಕ್ರಾಂತಿಗಳು ಇನ್ನೂ ಎಷ್ಟು? ಇವುಗಳಲ್ಲಿ ಅತ್ಯಂತ ಮಹತ್ವದ, ಗಹನವಾದ, "ನಿಜವಾಗಿಯೂ ಕ್ರಾಂತಿದಾಯಕವಾದ ಕ್ರಾಂತಿ" ಎನ್ನಬಹುದಾದುದು ಯಾವುದಾದರೂ ಇದೆಯೆ ? ಪ್ರವಿದ್ಧ ಸ್ವತಶ್ಚಲೀಕರಣ ಮತ್ತು ಆರ್ಥಿಕ ಪ್ರಗತಿ ಕುರಿತ ಸಂ. ರಾ. ಅಮೆರಿಕದ ರಾಷ್ಟ್ರೀಯ ಮಂಡಲಿಯು ಅಮೇರಿಕದ ಅಧ್ಯಕ್ಷರಿಗೆ ಸಲ್ಲಿಸಿದ ವರದಿಯಲ್ಲಿ (1966) ಹೀಗೆ ಹೇಳಿದೆ : "ಕಂಪ್ಯೂಟರ್, ನ್ಯೂಕ್ಲಿಯರ್ ಪವರ್ ಮತ್ತು ಮಾಲೆಕ್ಯುಲಾರ್ ಬಯಾಲಜಿಗಳು; ಟೆಲಿಫೋನ್ ವಿದ್ಯುಚ್ಛಕ್ತಿ ಮತ್ತು ಬ್ಯಾಕ್ಟೀರಿಯಾಲಜಿಗಳಿಗಿಂತ ಪರಿಮಾಣಾತ್ಮಕವಾಗಿಯೂ, ಗುಣಾತ್ಮಕವಾಗಿಯೂ ಹೆಚ್ಚು 'ಕ್ರಾಂತಿಕಾರಿ' ಯಾದುವು ಎಂದು ತಿಳಿಯುವ ಕಾರ್ಯ ನಮ್ಮ ಅರಿವಿಗೂ ಮೀರಿದುದಾಗಿದೆ."

ನಿಜ, ಖಚಿತವಾಗಿ ಹೇಳುವುದು ಕಷ್ಟ.

ಆದರೆ ಒಂದು ವಿಷಯ ಮಾತ್ರ ಸ್ಪಷ್ಟ, ನಿಸ್ಪೃಷ್ಟ. ಮಾನವನ ನಾಗರಿಕತೆಯ ಇಡೀ ಇತಿಹಾಸದಲ್ಲಿ ಹಿಂದೆಂದೂ ಮಾನವನ ಪ್ರತಿಭೆ, ಬುದ್ಧಿಮತ್ತೆ ಇಂದಿನಷ್ಟು ಔನ್ನತ್ಯವನ್ನಾಗಲೀ, ವೈಜ್ಞಾನಿಕ ಮತ್ತು ಪ್ರಾವಿಧಿಕ ಪರಿಪೂರ್ಣತೆಯ ಗರಿಷ್ಠ ಮಟ್ಟವನ್ನಾಗಲಿ ಮುಟ್ಟಿರಲಿಲ್ಲ. ಆದರೆ ಈ ವಿಷಯದಲ್ಲಿ ಕಡೆಯ ಮಾತನ್ನು ಹೇಳಲು ಇನ್ನೂ ಯಾರಿಗೂ ಸಾಧ್ಯವೂ ಆಗಿಲ್ಲ.

(7ನೇ ಪುಟ ನೋಡಿ)

ಸರಿಯುತ್ತರ ಹುಡುಕಲೇಬೇಕು

(6ನೇ ಪುಟದಿಂದ)

ಈ ಮೊದಲಿನಂತೆಯೇ ಇಂದಿಗೂ ಸಹ, ಈ ಎಲ್ಲ ಸಿದ್ಧಿ ಸಾಧನೆಗಳನ್ನೂ, ಈ ಇಳೆಯ ಮೇಲೆ ಸ್ವರ್ಗವನ್ನು ಸೃಷ್ಟಿಸಲು, ಜಗತ್ತನ್ನು ಅತ್ಯಂತ ಸುಖಿಯಾಗಿಡಲು, ರಚನಾತ್ಮಕವಾಗಿ ಬಳಸಿಕೊಳ್ಳಲು ಮಾನವನಿಗೆ ಸಾಧ್ಯವಿದೆ. ಇಲ್ಲವೇ, ಮಾನವನು ಈ ಸಿದ್ಧಿಸಾಧನೆಗಳನ್ನೂ ಈ ಭೂಗ್ರಹವನ್ನು ಚೂರು ಚೂರಾಗುವಂತೆ ಸ್ಫೋಟಗೊಳಿಸಲೂ ಬಳಸಿಕೊಳ್ಳುವ ಸಂಭವವೂ ಇದೆ.

ಮಾನವ ಕುಲವು ಈವರೆಗೂ ನಡೆದು ಬಂದಿರುವ ಪಥವನ್ನು ಗುರುತಿಸಿ ಸ್ಮರಿಸುವುದು ಇಂದಿನ ನಮಗೆ ಅಗತ್ಯ, ಆಸಕ್ತಿದಾಯಕ. ಹಾಗೆ ಸ್ಮರಿಸಿದರೆ ನಮ್ಮ ಈ ಶತಮಾನದಲ್ಲಿನ ಪ್ರಗತಿಯ ದ್ರುತಗತಿಯನ್ನು ಅರಿಯಲು ಸಾಧ್ಯ. ಈ ಉದ್ದೇಶದಿಂದಲೇ ನಾನು ಇಲ್ಲಿ ಎಲ್. ಬೊಬ್ರೋವ್‌ರ "ಆಶಾವಾದಕ್ಕೆ ಬುನಾದಿಗಳು" ಎಂಬ ಕೃತಿಯಿಂದ ಉದ್ಧೃತ ಭಾಗಗಳನ್ನು ಉಲ್ಲೇಖಿಸುತ್ತೇನೆ:

"ಮಾನವ ಕುಲವು 600,000 ವರ್ಷಗಳಲ್ಲಿ ನಡೆದು ಬಂದ ಹಾದಿಯನ್ನು 60 ಕಿಲೋಮೀಟರುಗಳ ಮಾರಥಾನ್ ಓಟದ ಸ್ಪರ್ಧೆಗೆ ಹೋಲಿಸೋಣ. ಛಾಯಾಚಿತ್ರದಲ್ಲಿ ಈ ಓಟದ ಕಡೆಯ ಒಂದು ಗಂಟೆಯನ್ನು ನಿಮಿಷಕ್ಕೊಂದು ಮೀಟರಿನಂತೆ ದಾಖಲು ಮಾಡೋಣ.

"ಮಾನವ ಕುಲ ನಡೆದು ಬಂದ ಈ ಮಾರ್ಗವು ಗುಹೆಯಿಂದ ಆರಂಭವಾಗುವುದು ಆದಿಮಾನವನು ವಾಸಿಸುತ್ತಿದ್ದ ಗುಹೆಯಲ್ಲಿ ಮೊದಲ ಶಿಬಿರಾಗ್ನಿಗಳ ಜ್ಯೋತಿ ಬೆಳಗಲಾರಂಭಿಸುವುದು. ಈ ಯುಗದ ಮುಖಂಡ ಮಂಗಮಾನವ, ಅವನ ಸೋದರರು. ಅವರ ಸಂಖ್ಯೆ ಒಂದು ಮಿಲಿಯ ವಿರಬಹುದು ಅವರ ಕೈಗಳಲ್ಲಿ ಕೋಲು, ಕೆತ್ತಿ ಚೂಪುಗೊಳಿಸಿದ ಕಲ್ಲುಗಳಿದ್ದವು. ಈ ಮಾರ್ಗದ ದ್ವಿತೀಯಾರ್ಧದಲ್ಲಿನ ಓಟದ ಸ್ಪರ್ಧೆಯಲ್ಲಿ 'ನೆಂಡರ್‌ಥಾಲ್' ಮಾನವರು ಮುಂದಾದರು. ಇವರು ಹೆಚ್ಚು ಸುಸಂಘಟಿತ ಗುಂಪಾಗಿದ್ದರು. (ಅವರನ್ನು ಆಗಲೇ ಹೋಮೋ ಮಾನವರೆಂದು ಕರೆಯಲಾಗುತ್ತಿದ್ದಿತು.) ಅವರು ಬಳಸುತ್ತಿದ್ದ ಉಪಕರಣಗಳು ಹೆಚ್ಚು ಪರಿಷ್ಕೃತವಾಗಿದ್ದವು. ಅವರ ಕಲ್ಲು ಕೊಡಲಿಗಳು ಹೆಚ್ಚು ಚೂಪಾಗಿದ್ದವು. ಮೊನಚಾದ, ಗೃಹೋಪಕರಣಗಳಿದ್ದವು. ಈ ಪಥದಲ್ಲಿ 50ನೇ ಮೀಟರುದೂರದಲ್ಲಿ ಕ್ರೊಮ್ಯಾಗ್ನನ್ ಮಾನವರು ನಮ್ಮಂಥ ಮಾನವರ ಗುಂಪಿಗೆ ಸೇರಿದ (ಹೋಮೋಸೇಪಿಯನ್ಸ್-ಚಿಂತನಾಶೀಲ ಮಾನವ)ವರು ಮುಂದಾದರು. ಅವರು ಯೋಧರು, ಬೇಟೆಗಾರರು ಆಗಿದ್ದರು. ಜೊತೆಗೆ ಕರಕುಶಲ ವಸ್ತುಗಳನ್ನೂ ತಯಾರಿಸುತ್ತಿದ್ದರು. ಅಲಂಕೃತ, ಆಕರ್ಷಕ ಕಲ್ಲಿನ ಉಪಕರಣಗಳನ್ನು ಮಾಡುವ ಪರಿಣತ ಕರಕುಶಲ ಕಲಾವಿದರಾಗಿದ್ದರು, ಒಳ್ಳೆ ಚಿತ್ರಕಾರರೂ ಆಗಿದ್ದರು. 58ನೇ ಕಿಲೋಮೀಟರು ತಲುಪಿದಾಗ ಮಾನವರ ಇತಿಹಾಸದಲ್ಲಿ ಗುಹಾ ಚಿತ್ರಗಳು ಮೂಡಿದವು. ಆ ಮಾನವರು ಜೇಡಿಮಣ್ಣು, ಕೊಬ್ಬು ಮತ್ತು ಇಲ್ಲಣ ಮಸಿಯ ಮಿಶ್ರಣದಿಂದ ಗುಹೆಗಳ ಗೋಡೆಗಳ ಮೇಲೆ ವರ್ಣ ಚಿತ್ರಗಳನ್ನು ರಚಿಸಿದರು. 59ನೇ ಕಿಲೋಮೀಟರು ತಲಪುವ ಹೊತ್ತಿಗೆ ಪಶುಪಾಲನೆ ಆರಂಭವಾಯಿತು. ಮಾನವನೊಡನೆ ನಾಯಿಯೂ ಅಲೆಯಲಾರಂಭಿಸಿತು; ಅವನ ಸಹಚರಿಯಾಯಿತು.

"ನಮ್ಮ ಕಾಲದಲ್ಲಿ ಕೇವಲ 700 ಮೀಟರುಗಳನ್ನು ಮಾತ್ರ ಕ್ರಮಿಸಬೇಕಾಗಿದ್ದ ಅವಧಿಯಲ್ಲಿ ಬೇಟೆಗಾರರು, ಮೀನುಗಾರರು, ಪಶುಪಾಲಕರೊಡನೆ ಕೃಷಿಕರೂ ಸೇರಿದರು. ಈ ಮೊದಲಿನ ಅಲೆಮಾರಿಗಳು ಒಂದೆಡೆ ನೆಲೆಸಲು ಆರಂಭಿಸಿದರು, ನೆಲಸು ಪ್ರದೇಶಗಳು ತಲೆಯೆತ್ತಿದವು. (ಮನೆಗಳು, ಸಾಯಿ ಮನೆಗಳು, ಮಣ್ಣಿನ ಗುಡಿಸಲು, ಅನಂತರ ಮರದ ದಿಮ್ಮಿಗಳಿಂದಮಾಡಿದ ಮನೆಗಳು ತಲೆ ಎತ್ತಿದವು. ಇಂದಿಗೆ ಐನೂರು ಮೀಟರು ದೂರದಲ್ಲಿ ಈಜಿಪ್ಷಿಯನ್ ಪಿರಾಮಿಡ್ಡುಗಳು ನಿರ್ಮಾಣಗೊಂಡವು.) ಮನೆಗಳಲ್ಲಿ ಮಣ್ಣಿನ ಪಾತ್ರೆಗಳ ಬಳಕೆ ಆರಂಭವಾಯಿತು ಸಾರಿಗೆಯ ಸಾಧನಗಳೂ ವಿಕಾಸಗೊಂಡವು: ಚಕ್ರದ ಬಂಡಿಗಳು, ಹರಿಗೋಲು, ದೋಣಿಗಳು ಕಾಣಿಸಿಕೊಂಡವು.

"ಆಹಾರೋತ್ಪಾದನೆ ಹೆಚ್ಚುಚ್ಚಿ ಜನಸಂಖ್ಯೆಯೂ ಬೆಳೆಯಿತು. ಮಾನವರ ಸಂಖ್ಯೆ ಹತ್ತಾರು ಮಿಲಿಯ ಮುಟ್ಟಿತು.

"ಐನೂರು ಮೀಟರುಗಳ ದೂರದಲ್ಲಿದ್ದಾಗ ತಾಮ್ರ ಮತ್ತು ಅದರ ಮಿಶ್ರಲೋಹ (ಕಂಚು ಹಿತ್ತಾಳೆ)ಗಳಿಂದ ಮಾಡಿದ ವಸ್ತುಗಳು ಕಾಣಿಸಿಕೊಂಡವು, 350 ಮೀಟರು ದೂರದಲ್ಲಿದ್ದಾಗ ಕಬ್ಬಿಣ ಕಂಡು ಬಂದಿತು. ಜನಸಂಖ್ಯೆ 20-40 ಮಿಲಿಯದ ನಡುವೆ ಇದ್ದಿತು.

"250 ಮೀಟರು ದೂರ ಉಳಿದಿದ್ದಾಗ ಗ್ರೀಕ್ ವಿಜ್ಞಾನಿಗಳಾದ ಪೈಥಾಗೊರಸ್, ಹೆರಿಕ್ಲಿಟಸ್, ಲೆಂಕಿಪ್ಪಸ್, ಡೆಮೊಕ್ರಿಟಸ್ ಮತ್ತು ಹೆಲ್ಲಾಸ್‌ನ ಪ್ರಸಿದ್ಧ ಮುತ್ಸದ್ದಿಗಳು ಪೆರಿಕ್ಲಿಸ್ ಮೊದಲಾದವರು ಕಾಣಿಸಿಕೊಂಡರು.

"60-50 ಮೀಟರು. ನೂರಾರು ಮಿಲಿಯ ಜನಸಂಖ್ಯೆಯೊಡನೆ ಮಧ್ಯಯುಗದ ಆರಂಭ.

"60 ಮೀಟರು. 14ನೇ ಶತಮಾನದ ಫ್ಲಾರೆನ್ಸ್ ಮತ್ತು ನವೋದಯದ ಆರಂಭ.

"45 ಮೀಟರು. ಮ್ಯಾಗೆಲಾನ್, ಸಮುದ್ರಯಾನದ ಮೂಲಕ ಭೂಪ್ರದಕ್ಷಿಣೆ ಹಾಕಿದ.

"27 ಮೀಟರು ರಶಿಯದಲ್ಲಿ ಮಹಾನ್ ಪೀಟರ್ ಸುಧಾರಣೆಗಳನ್ನು ಜಾರಿಗೆ ತಂದ.

"17 ಮೀಟರು. ಉಗಿ ಎಂಜಿನ್. ಜನಸಂಖ್ಯೆ 1,000 ಮಿಲಿಯ ಮುಟ್ಟಿತು.

"ಇದೇ ರೀತಿ ಮುಂದುವರಿಸಬಹುದು. ಆದರೆ ಒಂದು ವಿಷಯವನ್ನು ಗಮನಿಸಿ. 60 ಮೀಟರುಗಳಲ್ಲಿನ ಕಡೆಯ ಮೀಟರುಗಳ ನಡಿಗೆಯಲ್ಲಿ ಮಾನವಕುಲದ ಇತಿಹಾಸದಲ್ಲಿ ವಿದ್ಯುದ್ದೀಪಗಳು ಹೆಚ್ಚಾಗಿ ಬೆಳಗಿದವು, ಗರ್ಜಿಸುವ ಕಾರುಗಳು ಹೆಚ್ಚಿದವು. ವಿಮಾನಗಳು ಅಂತರಿಕ್ಷವನ್ನೂ ಭೇದಿಸಿದುವು, ಅಂತರಿಕ್ಷಯಾನ ರಾಕೆಟ್ಟುಗಳು ಭೂಮಿಯ ಬಂಧನವನ್ನು ಭೇದಿಸಿ ಬಾಹ್ಯಾಂತರಿಕ್ಷದಲ್ಲಿ ಓಡಿದವು.

"ನಮ್ಮ ಈ ಕಲ್ಪನಾ ಚಿತ್ರದ ಕಡೆಯ 'ಫ್ರೇಮ್'ಗಳಲ್ಲಿ ಮಹತ್ವದ ಘಟನೆಗಳು ಕಿಕ್ಕಿರಿದು ತುಂಬಿವೆ. ವಿಪುಲವಾಗಿ ಪರದೆಗಳನ್ನು ಬಳಸಿದರೂ, ಸರ್ಕೋರಮಾ, ಸ್ಟೀರಿಯೋ ವಿಧಾನವನ್ನು ಅಳವಡಿಸಿಕೊಂಡರೂ ಈ ಚಿತ್ರಗಳೆಲ್ಲವನ್ನೂ ಸ್ಪಷ್ಟವಾಗಿ ಪ್ರದರ್ಶಿಸುವುದು ಅಸಾಧ್ಯ ಇಂಥ ಅದ್ಭುತ ಪ್ರದರ್ಶನವನ್ನು ನೋಡುವ ಪ್ರೇಕ್ಷಕನ ಕಣ್ಣಮುಂದೆ ಎಂಥ ಪರಿಣಾಮಕಾರಿಯಾದ, ಅದ್ಭುತ ಘಟನಾವಳಿಗಳ ಪ್ರವಾಹ ಹರಿಯುವುದೆಂದು, ಅದರ ಅಂತ್ಯ ಹೇಗಿರುವುದೆಂದೂ ಊಹಿಸಿಕೊಳ್ಳಿ!"



ಈ ಉದ್ಧೃತ ಭಾಗಗಳು ತುಂಬ ಸಾಂಕೇತಿಕವಾಗಿದೆಯಾದರೂ. ಬಹು ಅರ್ಥಪೂರ್ಣವಾಗಿ, ಮನೋಜ್ಞವಾಗಿ, ನಾವು ಇಂದು ಎಲ್ಲಿ ನಿಂತಿದ್ದೇವೆ ಎಂಬುದನ್ನು ಖಚಿತವಾಗಿ ಮನದಟ್ಟುಮಾಡಿಕೊಡುವುವು. ಮಾನವ ಕುಲವು ಹಾದು ಬಂದಿರುವ ಮಹಾ ರಸ್ತೆಯ ಕಡೆಯ ಕೆಲವೇ ಸೆಂಟಿಮೀಟರುಗಳ ದೂರದಲ್ಲಿ ನಾವು ನ್ಯೂಕ್ಲಿಯರ್ ಅಸ್ತ್ರಗಳನ್ನು ಮಿಸ್ಸೈಲುಗಳನ್ನು, ಬಿ-52 ಬಾಂಬರುಗಳನ್ನು, ಮಾರಕವಾದ ಲೇಸರ್‌ಗಳನ್ನು ಕಾಣುತ್ತೇವೆ ಈಗ, ಇಡೀ ಜಗತ್ತನ್ನು ಅತ್ಯಂತ ಮಾರಕವಾದ ಸ್ಫೋಟಕಗಳ ಪರ್ವತದ ಮೇಲೆ ಎತ್ತಿ ಇರಿಸಿಟ್ಟಿದ್ದಾರೆ. ಈ ಸ್ಫೋಟಕಗಳ ಪ್ರಮಾಣ, ಜಗತ್ತಿನ ಪ್ರತಿ ಗಂಡಸು, ಹೆಂಗಸು, ಮಗುವಿನ ತಲಾಮಾನವರ ಲೆಕ್ಕದಲ್ಲಿ 15 ಟನ್ ಟಿ. ಎನ್. ಟಿ. ಗಳಷ್ಟಾಗುತ್ತದೆ.

ಹಾಗಾದರೆ, ವೈಜ್ಞಾನಿಕ ಮತ್ತು ಪ್ರಾವಿಧಿಕ ಕ್ರಾಂತಿಯು ಮಾನವ ಕುಲಕ್ಕೆ ಇಷ್ಟೊಂದು ಅಪಾಯಕಾರಿಯೆ? ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯನ್ನು ಮಾನವಕುಲ ವಿನಾಶಕಾರಿಯೆಂದು ಪರಿಗಣಿಸಬೇಕೆ? ಮಾನವನ ನಾಗರಿಕತೆಯ ಉದಯದಲ್ಲಿ ಕಲ್ಲಿನ ಕೊಡಲಿಗಳು ಕಾಣಿಸಿಕೊಂಡವು. ಅವು ಗುಡಿಸಲನ್ನು ಕಟ್ಟಲು, ಮರ ಕಡಿಯಲು, ಬೇಟೆ ಆಡಲು, ಇತರ ಬುಡಕಟ್ಟುಗಳ ದಾಳಿಯಿಂದ ಸ್ವರಕ್ಷಣೆಮಾಡಿಕೊಳ್ಳಲು ನೆರವಾದುವು. ಅತಿ ಪ್ರತಿಭಾನ್ವಿತ ಅನ್ವೇಷಣೆಯಾದ ಚಕ್ರ, ಕೃಷಿಕರು ಮತ್ತು ವ್ಯಾಪಾರಿಗಳು ಸರಕು ಸಾಗಿಸಲು ಬಂಡಿಗಳಿಗಾಗಿ ಬಳಸಿದರು, ಕೆಲವರು ಯುದ್ಧದ ರಥಗಳಿಗೂ ಬಳಸಿದರು. ನೇಗಿಲ ಗುಳಗಳು ಮತ್ತು ಕತ್ತಿಗಳನ್ನು ಲೋಹಗಳಿಂದಲೇ ತಯಾರಿಸಲಾಯಿತು.

ಮಾನವನ ಅದ್ಭುತ ಸಾಧನೆಗಳು ಮತ್ತು ಮಾನವನ ಬುದ್ಧಿ ಪ್ರಮತ್ತವೆ, ಮೇಧಾಶಕ್ತಿಗಳೇ ಪ್ರಚೋದಕವಾದ ವಿಜ್ಞಾನದ ದಾಪುಗಾಲಿನ ಪ್ರಗತಿ ಬಗೆಗೆ ನಾವು ಖಂಡಿತವಾಗಿಯೂ ಹೆಮ್ಮೆಪಡುತ್ತೇವೆ.

ಅದೇ ಸಮಯದಲ್ಲಿ, ನಮ್ಮ ಯಶಸ್ಸು, ಸಾಧನೆಗಳು ಎಷ್ಟೇ ಮಹತ್ವದ್ದಾಗಿದ್ದರೂ, ಪ್ರತಿ ನಿಮಿಷವೂ ಈ ಜಗತ್ತಿನ ಯಾವುದಾದರೊಂದು ಮೂಲೆಯಲ್ಲಿ ಮಾನವರು ಹಸಿವು, ಬಡತನಗಳಿಂದ ಸಾಯುತ್ತಿದ್ದಾರೆಂಬ ಸತ್ಯಸಂಗತಿ ಅರಿತಾಗ ಅಪಮಾನದಿಂದ ತಲೆ ತಗ್ಗಿಸಬೇಕಾಗುತ್ತದೆ ಅಲ್ಲವೆ? ಮತ್ತು ಅದೇ ಪ್ರತಿ ನಿಮಿಷದಲ್ಲಿ ಜಗತ್ತಿನಲ್ಲಿ 130 ಹೊಸ ಮಾನವರು ಜನಿಸುತ್ತಿದ್ದಾರೆ (ವರ್ಷಕ್ಕೆ 70 ಮಿಲಿಯ ಜನ). ಇಂದು 2,000 ಮಿಲಿಯಕ್ಕೂ ಅಧಿಕ ಜನರು ನಿರಂತರವಾಗಿ ಸಾಕಷ್ಟು ಆಹಾರವಿಲ್ಲದೆ, ನರಳುತ್ತಿರುವುದನ್ನು ಕಾಣುವಾಗ, ಇಡೀ ಮಾನವಕುಲದ ವೈಜ್ಞಾನಿಕ ಮತ್ತು ಪ್ರಾವಿಧಿಕ ಪ್ರಗತಿಯಲ್ಲಿ ಹೆಮ್ಮೆ, ಅಭಿಮಾನಪಡುವಂತಹುದು ಏನಿದೆ?

ಪ್ರಗತಿ ಏತಕ್ಕಾಗಿ? ಯಾವ ಲಕ್ಷ್ಯ ಸಾಧನೆಗಾಗಿ?

ಇಂದಿನ, ಪ್ರಸಕ್ತ ಕಾಲದ ಚಿತ್ರಣ ಪರಸ್ಪರ ವಿರೋಧಾಭಾಸಗಳಿಂದ ಕೂಡಿದೆ–ಮಹತ್ತರ ಸಾಧನೆಗಳ ನಡುವೆಯೂ ಬಡತನ, ದಾರಿದ್ರ್ಯ, ಉಪವಾಸ, ಅನಾಗರಿಕತೆ, ಮುಂತಾದ ವಿರೋಧಾಭಾಸಗಳಿಂದ ತುಂಬಿದೆ.

ಇದೇಕೆ ಹೀಗೆ? ಇದಕ್ಕೆ ಕಾರಣವೇನು?

ಮಾನವರು ಸುಖ, ಸಂತಸದಿಂದ, ಉತ್ತಮವಾಗಿ ಬದುಕಲು ಜಗತ್ತನ್ನು ಅತ್ಯುತ್ತಮವಾಗಿಸಲು ನೆರವಾಗದಿದ್ದರೆ, ಈ ನಮ್ಮ ಇಳೆಯನ್ನು ಸ್ವರ್ಗವಾಗಿಸದಿದ್ದರೂ, ಅಸಹನೀಯವಾದ ನರಕವನ್ನಾಗಿಸುವುದನ್ನು ತಡೆಯುವ ಸಾಮರ್ಥ್ಯ ಹೊಂದದಿದ್ದರೆ ಈ ಎಲ್ಲ ಪ್ರಗತಿ ಮತ್ತು ಸಾಧನೆಗಳಿಂದ ಏನು ಉಪಯೋಗ? ಸಾರ್ಥಕ?

ಇದು ನಿಜವಾಗಲೂ ಜಗತ್ತಿನ ಎಲ್ಲರನ್ನೂ ಕಾಡುತ್ತಿರುವ ಪ್ರಶ್ನೆಯಾಗಿದೆ.

ಬಾಹ್ಯಾಂತರಿಕ್ಷದ ಮೇಲೂ ವಿಜಯ ವಿಕ್ರಮವನ್ನು ಸ್ಥಾಪಿಸಿದ ಮಾನವನ ಶಕ್ತಿ, ಸಾಮರ್ಥ್ಯಗಳು, ಈ ಇಳೆಯ ಮೇಲಿನ ಬಡತನ, ಅನಕ್ಷರತೆ, ಅಜ್ಞಾನ, ಸಾಂಕ್ರಾಮಿಕ ರೋಗಗಳ ಮೇಲೆ ವಿಜಯ ಸಾಧಿಸಲು ಆಗಿಲ್ಲ?

ಇವಕ್ಕೆ ಸರಿಯುತ್ತರವನ್ನು ಹುಡುಕಲೇಬೇಕು.

['ಆಯುಧ ಪೈಪೋಟಿಗೆ ಕೊನೆ ಹಾಕಿ' ಎಂಬ ಪುಸ್ತಕದ ಪ್ರಸ್ತಾವನೆಯಿಂದ]

ಭಾರತೀಯ ಜನತೆ

(1ನೇ ಪುಟದಿಂದ)

ಇಡೀ ಬಂಡವಾಳಶಾಹೀ ಜಗತ್ತಿನಲ್ಲಿ ಮಹತ್ವಪೂರ್ಣವಾದ ಪ್ರದರ್ಶನಗಳು ಜರುಗಿವೆ. ಪ್ರಮುಖ ನಗರಗಳು, ಕೈಗಾರಿಕಾ ಹಾಗೂ ಶಿಕ್ಷಣ ಕೇಂದ್ರಗಳ ಮಿಲಿಯಾವಧಿ ಜನತೆ ಸಾರ್ವತ್ರಿಕ ಬೇಡಿಕೆಯಾಗಿರುವ ನ್ಯೂಕ್ಲಿಯರ್ ಅಸ್ತ್ರಗಳ ನಿರ್ಮೂಲನೆ ಮತ್ತು ಅದರ ತಯಾರಿಕೆಯನ್ನು ನಿಲ್ಲಿಸುವಂತೆ ಒತ್ತಾಯಿಸಿ ಪ್ರದರ್ಶನಗಳನ್ನು ನಡೆಸತೊಡಗಿದ್ದಾರೆ. ಸಮಾಜವಾದೀ ದೇಶಗಳ ಕುರಿತು ಹೇಳುವುದಾದರೆ ಅಲ್ಲಿನ ಸರಕಾರ ಹಾಗೂ ಜನತೆಯ ನಡುವೆ ಶಾಂತಿಯನ್ನು ಕಾಪಾಡುವ ವಿಷಯದಲ್ಲಿ ಸಂಪೂರ್ಣ ಸಮಾನಾಭಿಪ್ರಾಯವಿದೆ.

ಶಾಂತಿಯು ನಮಗೂ ಮತ್ತು ಇತರೇ ಎಲ್ಲಾ ಜನ ವರ್ಗಕ್ಕೂ ಅಮೂಲ್ಯವಾಗಿದ್ದರೂ ಕೂಡ ಜಗತ್ತಿನ ಇತರೇ ಸೋದರ ವರ್ಗಕ್ಕಿಂತ ನಾವು ಹಿಂದೆ ಉಳಿದಿದ್ದೇವೆ. ಆದ್ದರಿಂದಲೇ ನಮ್ಮ ದೇಶದಲ್ಲೂ ಕೂಡ ಚಳುವಳಿಯನ್ನು ಬೆಳೆಸಲು ಮಾಡುತ್ತಿರುವ ಆರು ಪಕ್ಷಗಳ ಆರಂಭಿಕ ಪ್ರಯತ್ನ ಮಹತ್ವದ್ದಾಗಿದೆ.

ಆರು ಪಕ್ಷಗಳು ನೀಡಿರುವ ಕರೆಯಾಗಿದ್ದರೂ ಕೂಡ ಇದು ಎಲ್ಲಾ ರಾಜಕೀಯ ಪಕ್ಷಗಳ ಮುಖಂಡತ್ವವನ್ನೂ, ಕಾರ್ಯಕರ್ತರನ್ನೂ ಅದೇ ರೀತಿಯಲ್ಲಿ ರಾಜಕೀಯಕ್ಕೆ ಸೇರದ ಜನರನ್ನೂ ಕ್ರಿಯಾರಂಗಕ್ಕೆ ಇಳಿಸಲಿದೆ.

ಯೂರೋಪಿನ, ಅಮೇರಿಕದ ಇತರ ದೇಶಗಳ ಜನರಂತೆ ಭಾರತೀಯ ಜನತೆ ಕೂಡ ನ್ಯೂಕ್ಲಿಯರ್ ಯುದ್ಧ ಕುರಿತು ಚಿಂತಿಸಲಾರಂಭಿಸಿದೆ. ಅಕ್ಟೋಬರ್ ನಾಲ್ಕರ ಪ್ರದರ್ಶನವು ಶಾಂತಿಗಾಗಿ ಜನತೆಯು ನಡೆಸಲಿರುವ ಸಾಮೂಹಿಕ ಚಳುವಳಿಯ ಆರಂಭಿಕ ಘಟ್ಟ. ಹಾಗೂ ಇದು ನ್ಯೂಕ್ಲಿಯರ್ ಯುದ್ಧ ಭೀತಿಯು ಸಂಪೂರ್ಣವಾಗಿ ತೊಲಗುವವರೆಗೂ ಶಕ್ತಿಯನ್ನು ಗಳಿಸಿಕೊಳ್ಳುತ್ತಾ ಹೋಗುತ್ತದೆಂದು ನಾವು ಪ್ರಾಮಾಣಿಕವಾಗಿ ಆಶಿಸುತ್ತೇವೆ.

ಶಾಂತಿಗಾಗಿ ನಡೆಯುತ್ತಿರುವ ವಿಶ್ವವ್ಯಾಪೀ ಸಾಮೂಹಿಕ ಚಳುವಳಿಗಳ ಪ್ರಮುಖ ಉದ್ದೇಶ ನ್ಯೂಕ್ಲಿಯರ್ ಯುದ್ಧವನ್ನು ತಪ್ಪಿಸುವುದಕ್ಕೋಸ್ಕರ ಆಗಿದ್ದರೂ ಕೂಡ ಇದಕ್ಕೆ ಸಂಬಂಧಿಸಿದ ಹಾಗೇ ಇನ್ನೂ ಅನೇಕ ಪ್ರಶ್ನೆಗಳಿವೆ. ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪಿತೂರಿ ನಡೆಸಿರುವ ಮೂರನೇ ವಿಶ್ವಯುದ್ಧದಲ್ಲಿ ಅತ್ಯಂತ ಅಪಾಯಕರವಾದ ನ್ಯೂಕ್ಲಿಯರ್ ಅಸ್ತ್ರಗಳನ್ನು ಬಳಸುವುದರಿಂದಾಗಿ ಎಲ್ಲಾ ದೇಶಗಳ, ಹಾಗೂ ಖಂಡಗಳ ಜನತೆಯ ಸ್ವಾತಂತ್ರ್ಯ ಅಪಾಯದಲ್ಲಿ ಸಿಲುಕಿಕೊಳ್ಳುತ್ತದೆ.

ಭಾರತೀಯರಾದ ನಾವು ಮುಖ್ಯವಾಗಿ ನಮ್ಮ ನೆರೆರಾಷ್ಟ್ರಗಳ ಹಾಗೂ ಪ್ರದೇಶಗಳಲ್ಲಿ ಉಂಟಾಗಿರುವ ಸ್ಫೋಟಕ ಪರಿಸ್ಥಿತಿಯ ಕುರಿತಾಗಿ ಕಳವಳಗೊಂಡಿದ್ದೇವೆ. ಆದ್ದರಿಂದಲೇ ಅಕ್ಟೋಬರ್ 4ರ ರ್‍ಯಾಲಿಯ ಬೇಡಿಕೆಗಳಲ್ಲಿ "ಹಿಂದೂ ಮಹಾಸಾಗರವನ್ನು ಶಾಂತಿ ವಲಯವನ್ನಾಗಿ ಪರಿವರ್ತಿಸಬೇಕು ಮತ್ತು ಪಾಕೀಸ್ತಾನದ ಮಿಲಿಟರಿ ಕೂಟಕ್ಕೆ ಶಸ್ತ್ರಾಸ್ತ್ರ ಸರಬರಾಜನ್ನು ಕೊನೆಗೊಳಿಸಬೇಕೆಂಬ ಬೇಡಿಕೆಗಳೂ ಕೂಡಿವೆ." ಭಾರತದ ಜನತೆ ಪ್ರತ್ಯಕ್ಷವಾಗಿ ಈ ಪ್ರಾದೇಶಿಕ ಸಮಸ್ಯೆಗಳ ಕುರಿತು ಕಳವಳಗೊಂಡಿದೆಯಾದರೂ, ಪಶ್ಚಿಮ ಏಷ್ಯಾದಲ್ಲಿ ಝಿಯೋನಿಸ್ಟರ ಆಕ್ರಮಣಗಳ ಸಮಸ್ಯೆಯಿದ್ದೆ, ದಕ್ಷಿಣ ಹಾಗೂ ಆಗ್ನೇಯ ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಮುಂತಾದ ದೇಶಗಳಲ್ಲೂ ಕೂಡ ಹಲವಾರು ಸಮಸ್ಯೆಗಳಿವೆ. ಈ ಎಲ್ಲ ದೇಶಗಳಲ್ಲೂ ಅಮೇರಿಕನ್ ಸಾಮ್ರಾಜ್ಯಶಾಹಿಯು ಸ್ಥಳೀಯ ಜನತೆಯ ವಿರುದ್ಧವಾಗಿ ಒಳಸಂಚು ನಡೆಸುತ್ತಿದೆ ಮತ್ತು ಈ ಮೂಲಕ ವಿಶ್ವಶಾಂತಿಗೆ ಅಪಾಯವನ್ನೂ ಒಡ್ಡಿದೆ.

ಎಲ್ಲಾ ವಿಭಾಗಗಳ ಜನತೆಯ ಹಿತದೃಷ್ಟಿಯಿಂದ, ನ್ಯೂಕ್ಲಿಯರ್ ಅಸ್ತ್ರಗಳನ್ನೂ ಬಳಸುವುದನ್ನು ಒಳಗೊಂಡಂತೆ ಮೂರನೇ ಮಹಾಯುದ್ಧವನ್ನು ತಪ್ಪಿಸುವ ಅವಶ್ಯಕತೆಯ ಕುರಿತಂತೆ ಯಾವ ವಿಭಾಗದಿಂದಲೂ ಭಿನ್ನಾಭಿಪ್ರಾಯ ಬಂದಿಲ್ಲ ಹಾಗಿದ್ದರೂ ಕೂಡ ಕೆಲವು ಸೈದ್ಧಾಂತಿಕ ಹಾಗೂ ರಾಜಕೀಯ ಸ್ಥಿತಿಗಳು ಜನತೆಯ ಗಮನವನ್ನು ನಿಜವಾದ ಸಮಸ್ಯೆಗಳಿಂದ ವಿಮುಖಗೊಳಿಸಬಹುದಾಗಿದೆ.

ಉದಾಹರಣೆಗೆ, ಕೆಲವು ರಾಜಕೀಯ ಪಕ್ಷಗಳು, ಸಂಸ್ಥೆಗಳು ಮತ್ತು ಪ್ರಚಾರ ಮಾಧ್ಯಮಗಳಲ್ಲಿನ ಜನರು ಅಮೇರಿಕ ಸಾಮ್ರಾಜ್ಯಶಾಹಿಗಳ ನೇತೃತ್ವದಲ್ಲಿರುವ ಶಕ್ತಿಗಳು ನ್ಯೂಕ್ಲಿಯರ್ ಯುದ್ಧದ ಪಿತೂರಿನಡೆಸಿದ್ದರೆಂಬುದನ್ನು ಒಪ್ಪುತ್ತಿಲ್ಲ 'ಎರಡು ಮಹಾನ್ ಶಕ್ತಿ' ಗಳ ಕಲ್ಪನೆಯನ್ನು ಮುಂದಿಟ್ಟುಕೊಂಡು 'ಯುದ್ಧ ಸಿದ್ಧತೆ'ಯಲ್ಲಿ ಎರಡೂ ಶಕ್ತಿಗಳೂ ಸಮಾನ ಜವಾಬ್ದಾರರೆಂದೂ, ನ್ಯೂಕ್ಲಿಯರ್ ಯುದ್ಧವನ್ನು ಪ್ರಚೋದಿಸುವ ಅಮೇರಿಕನ್ನರ ಕ್ರಮವನ್ನು ಸರಿಯಾದುದೆಂದೂ ಸಮರ್ಥಿಸುತ್ತಿದ್ದಾರೆ. ಈ ಗುಂಪಿಗೆ ನಮ್ಮ ದೇಶದ ಬಂಡವಾಳಶಾಹೀ ವಿರೋಧ ಪಕ್ಷಗಳ ನಾಯಕರುಗಳು ಸೇರಿದ್ದಾರೆ.

ಶಾಂತಿ ಚಳುವಳಿಯನ್ನು ಆರಂಭಿಸುವ ಆರು ಪಕ್ಷಗಳ ಪ್ರಯತ್ನವು, ಅಮೇರಿಕನ್ ಸಾಮ್ರಾಜ್ಯಶಾಹಿಗಳ ನೇತೃತ್ವವು ಯುದ್ಧದ ಮೂಲವಾಗಿದೆ ಮತ್ತು ಸೋವಿಯತ್ ಯೂನಿಯನ್ ನೇತೃತ್ವದ ಸಮಾಜವಾದವು ಶಾಂತಿಯನ್ನು ಕಾಪಾಡುತ್ತಿದೆ ಎಂಬ ಸತ್ಯಾಂಶದೊಂದಿಗೆ ಮುಂದುವರೆಯುತ್ತಿದೆ. ಸೋವಿಯತ್ ಯೂನಿಯನ್ ಅನುಸರಿಸಿರುವ ಕೆಲವು ಪ್ರಾರಂಭಿಕ ಕ್ರಮಗಳನ್ನು ಈ ಆರು ಪಕ್ಷಗಳು ಗುರುತಿಸಿವೆ. ನ್ಯೂಕ್ಲಿಯರ್ ಅಸ್ತ್ರಗಳನ್ನು ನಾವು ಮೊದಲು ಬಳಸುವುದಿಲ್ಲ, ಸೋವಿಯತ್ ಯೂನಿಯನ್‌ನ ಪಶ್ಚಿಮ ಭಾಗಗಳಲ್ಲಿ ಮಿಸ್ಸೈಲ್ (ದೂರಕ್ಕೆ ಹಾರುವಂತಹ ಕ್ಷಿಪಣಿ)ಗಳನ್ನೂ ಸ್ಥಾಪಿಸುವುದನ್ನು ನಿಲ್ಲಿಸುತ್ತೇವೆ, ರಾಸಾಯನಿಕ ಅಸ್ತ್ರಗಳನ್ನು ಉಪಯೋಗಿಸುವುದಿಲ್ಲ ಎಂಬಂತಹ ಘೋಷಣೆಗಳು ಶಾಂತಿ ಚಳುವಳಿಗೆ ಪೂರಕವಾದಂತಹವುಗಳಾಗಿವೆ. ಸೋವಿಯತ್ ಯೂನಿಯನ್‌ನ ಈ ಪ್ರತಿಯೊಂದು ಘೋಷಣೆಗಳಿಗೂ ಅಮೇರಿಕಾದ ಪ್ರತಿಕ್ರಿಯೆ ನಕಾರಾತ್ಮಕವಾಗಿದೆ. ಈ ಕಾರಣದಿಂದಾಗಿ ಆರು ಪಕ್ಷಗಳು "ಎರಡು ಶಕ್ತಿ ರಾಷ್ಟ್ರಗಳ ಸಮಾನ ಜವಾಬ್ದಾರಿ" ಎಂಬ ಕಲ್ಪನೆಯನ್ನೂ ತಿರಸ್ಕರಿಸಿವೆ.

ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ (ಐ) ಆಡಳಿತದ ಕುರಿತು ಹೇಳುವುದಾದರೆ ಯುದ್ಧ ಮತ್ತು ಶಾಂತಿಯ ಕುರಿತಾದ ಅನೇಕ ಪ್ರಶ್ನೆಗಳ ಕುರಿತಾಗಿ ಸರಿಯಾದ ನಿಲುವನ್ನೇ ಅನುಸರಿಸಿದೆ. 'ಎರಡು ಮಹಾನ್ ಶಕ್ತಿ' ಸಿದ್ಧಾಂತಕ್ಕೆ ಸ್ವಲ್ಪ ಮಟ್ಟಿಗೆ ಬಲಿಯಾಗಿದ್ದರೂ ಕೂಡ ಕಾಂಗ್ರೆಸ್ (ಐ) ನ ಅನೇಕ ನಾಯಕರು ಶಾಂತಿ ಮತ್ತು ಯುದ್ಧದ ಕುರಿತಾದ ಅಮೇರಿಕದ ನಿಲುವನ್ನು ತಿರಸ್ಕರಿಸುತ್ತಾರೆ.

ಆದರೂ ಕೂಡ ಅವರ ಆಂತರಿಕ ರಾಜಕೀಯ ನೀತಿ ಮತ್ತು ಕ್ರಮಗಳು, ಸಾಮ್ರಾಜ್ಯಶಾಹಿಗಳ ಯುದ್ಧದ ವಿರುದ್ಧವಾಗಿ ಭಾರತೀಯ ಜನತೆ ಒಂದಾಗುವುದನ್ನು ತಪ್ಪಿಸಲು ಪ್ರಯತ್ನಿಸುತ್ತಿವೆ. ಪ್ರಗತಿಪರ ರಾಜಕೀಯ ಪಕ್ಷಗಳ ಮತ್ತು ಶಕ್ತಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಕೇಂದ್ರೀಕೃತ ಧಾಳಿ; ಕಾರ್ಮಿಕ ವಿರೋಧಿ ಕಾಯಿದೆಗಳನ್ನು ಪಾರ್ಲಿಮೆಂಟಿನಲ್ಲಿ ಅಂಗೀಕಾರ ಪಡೆಯುವ ಮೂಲಕ ಕಾರ್ಮಿಕ ವರ್ಗದ ಮೇಲೆ ಸಂಘಟಿತ ಆಕ್ರಮಣ; ಬಿಹಾರದಲ್ಲಿ ಜಾರಿ ಮಾಡಿರುವ ಕಾಯಿದೆಯ ರೀತಿಯಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು; ದಮನಕಾರೀ ಕಾಯಿದೆಗಳಾದ ರಾಷ್ಟ್ರೀಯ ಭದ್ರತಾ ಕಾಯಿದೆ, ಅಗತ್ಯ ಸೇವಾ ಸಂರಕ್ಷಣಾ ಕಾಯಿದೆ; ಪ. ಬಂಗಾಳ, ತ್ರಿಪುರಾಗಳ ಎಡರಂಗ ಸರ್ಕಾರಗಳ ಮೇಲೆ ಆಕ್ರಮಣ, ಇತ್ತೀಚಿನ ಉದಾಹರಣೆಯೆಂದರೆ ತ್ರಿಪುರಾದ ಕೆಲವು ಭಾಗಗಳನ್ನು 'ಗಲಭೆ ಪೀಡಿತ' ಪ್ರದೇಶಗಳೆಂದು ಘೋಷಿಸಿರುವುದು—ಇವೆಲ್ಲಾ ಜನ ವಿರೋಧಿ ಆರ್ಥಿಕ ಧೋರಣೆ ಮತ್ತು ಕ್ರಮಗಳು ಜನತೆಯ ಮೇಲೆ ಹೆಚ್ಚು ಹೆಚ್ಚು ಭಾರವನ್ನು ಹೇರುವುದರೊಟ್ಟಿಗೆ ಒಟ್ಟಾರೆಯಾಗಿ ಈ ಸರ್ಕಾರ ಜನ ವಿರೋಧಿಯಾಗಿ ಪರಿಣಮಿಸಿದೆ.

ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿದ ಪರಂಪರೆಯಿರುವ ಭಾರತೀಯ ಜನತೆಯು ಶಾಂತಿಗಾಗಿಯ ಹೋರಾಟವನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಇದು ಕೇವಲ ಸರ್ಕಾರಕ್ಕೆ ಮಾತ್ರ ಸಂಬಂಧಿಸಿದ ವಿಚಾರವೆಂದು ತಿಳಿಯಬಾರದು. ಜನತೆಯು ನಡೆಸುವ ಪ್ರದರ್ಶನಗಳು ಸರ್ಕಾರದ ಚಂಚಲ ಪ್ರವೃತ್ತಿಯನ್ನು ಕೊನೆಗೊಳಿಸಿ ಯುದ್ಧ ಮತ್ತು ಶಾಂತಿಯ ಕುರಿತಾದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಸರಿಯಾದ ನಿಲುವನ್ನು ತಳೆಯಲು ತೀರಾ ಅವಶ್ಯಕವಾದುದಾಗಿದೆ. ಇಂತಹ ಒಂದು ಬೃಹತ್ ಕಾರ್ಯದಲ್ಲಿ ಭಾರತೀಯ ಜನತೆ ಜಗತ್ತಿನ ಇತರ ಯುದ್ಧ ವಿರೋಧಿ ಜನತೆಯೊಂದಿಗೆ ಹೆಗಲು ಕೊಟ್ಟು ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಧೂಳೀಪಟ ಮಾಡುವತ್ತ ಅಕ್ಟೋಬರ್ 4ರ ಶಾಂತಿ ಯಾತ್ರೆ ಒಂದು ಪ್ರಾರಂಭಿಕ ಪ್ರಯತ್ನವಾಗಲಿ. ಯುದ್ಧವನ್ನು ತಪ್ಪಿಸಬಹುದು. ಶಾಂತಿಯನ್ನು ಸುರಕ್ಷಿತಗೊಳಿಸಬಹುದು ಎನ್ನುವ ವಿಶ್ವಾಸದೊಂದಿಗೆ ಒಂದು ಬಲಿಷ್ಠ ಶಾಂತಿ ಚಳುವಳಿಯನ್ನು ನಮ್ಮ ದೇಶದಲ್ಲಿ ಸಂಘಟಿಸೋಣ.

●

ತಿದ್ದುಪಡಿ :

ಪುರವಣಿ II ರ, ಎರಡನೇ ಕಾಲಂ 5ನೇ ಪ್ಯಾರಾದ ಸಬ್ ಟೈಟಲ್ ಜುಲೈ ೧೬, ೧೯೫೬ ಎಂದಿದೆ. ಇದನ್ನು ಜುಲೈ ೧೬, ೧೯೪೦ ಎಂದು ಓದಿ.





ಕೆ.ಜಿ.ಎಫ್ :

ಆರ್ಮುಗಂ ಕೊಲೆ ರಾಜಕೀಯ : ಕಾಂ| ಆರೋಕ್ಯದಾಸ್ ಬಲಿ

ತನ್ನ ಕ್ಷೇತ್ರದಲ್ಲಿ ತನ್ನ ಹೊಲಸು ರಾಜಕೀಯದಿಂದಾಗಿ ಸರ್ವಜನ ಬೆಂಬಲವನ್ನು ಕಳೆದುಕೊಂಡಿರುವ ಶಾಸಕ ಆರ್ಮುಗಂರ ಹೀನ ರಾಜಕಾರಣಕ್ಕೆ ಭಾರತ ಗೋಲ್ಡ್ ಮೈನ್ಸ್ ಎಂಪ್ಲಾಯೀಸ್ ಯೂನಿಯನ್ (ಸಿ.ಐ.ಟಿ.ಯು.)ನ ಸಕ್ರಿಯ ಕಾರ್ಯಕರ್ತ ಕಾಂ| ಆರೋಕ್ಯದಾಸ್ ಬಲಿಯಾಗಿದ್ದಾರೆ. ಸೆಪ್ಟೆಂಬರ್ 30 ರಂದು ಸಭೆ ಮುಗಿಸಿಕೊಂಡು ಮನೆಗೆ ಮರಳುತ್ತಿದ್ದ ಕಾಂ| ಆರೋಕ್ಯದಾಸ್, ಆರ್ಮುಗಂರ ಗೂಂಡಾಗಳ ಇರಿತಕ್ಕೊಳಗಾಗಿ ಸಾವನ್ನಪ್ಪಿದ ವಾರ್ತೆ ಬಂದಿದೆ.

ದಿನಾಂಕ 26 ರಂದು ಈ ಆರ್ಮುಗಂರ ಬೆಂಬಲಿಗ ಗೂಂಡಗಳು ಇಲ್ಲಿನ ಬಿ. ಜಿ. ಎಂ. ಎಂಪ್ಲಾಯೀಸ್ ಯೂನಿಯನ್‌ನ ಕಚೇರಿ ಮೇಲೆ ದಾಳಿ ಮಾಡಿ ಪಿಠೋಪಕರಣಗಳನ್ನು, ವಾಹನಗಳನ್ನು ಧ್ವಂಸ ಮಾಡಿದ್ದರು. ಪೋಲೀಸರಿಗೆ ಮೊದಲೇ ಸಂಭವನೀಯ ದಾಳಿಯ ಕುರಿತು ವರದಿ ಮಾಡಿದ್ದರೂ ಸೂಕ್ತ ಬಂದೋಬಸ್ತು ಮಾಡಿರಲಿಲ್ಲ.

ಚಿನ್ನದ ಗಣಿ ಕಾರ್ಮಿಕರ ಸಂಘದ ಚುನಾವಣೆಯಲ್ಲಿ ಕಾರ್ಮಿಕರು, ಆರ್ಮುಗಂರನ್ನು ಒದ್ದೋಡಿಸಿ ಸಿ.ಐ.ಟಿ ಯು. ರಾಜ್ಯ ಸಮಿತಿಯ ಅಧ್ಯಕ್ಷ ಕಾಂ| ಸೂರ್ಯನಾರಾಯಣರಾವ್‌ರನ್ನು ಸಂಘದ ಅಧ್ಯಕ್ಷರಾಗಿ ಚುನಾಯಿಸಿದ್ದನ್ನು ಇಲ್ಲಿ ನೆನೆಯಬಹುದು.

ಉಪವಾಸದ ನಾಟಕ :

ಚಿನ್ನದ ಗಣಿ ಕಾರ್ಮಿಕರ ಬೇಡಿಕೆಗಳಿಗೆ ಒತ್ತಾಯಿಸಿ ಆರ್ಮುಗಂ ಕಳೆದ ವಾರ ಉಪವಾಸದ ನಾಟಕ ಹೂಡಿದ್ದರು. ಕಳೆದ ಶುಕ್ರವಾರ ಬಂದ್‌ಗೆ ಕರೆ ಕೊಟ್ಟಿದ್ದರು. ಆರ್ಮುಗಂ ಕಾರ್ಮಿಕರ ಬೆಂಬಲ ಗಳಿಸಲು ಈ ಆಟ ಹೂಡಿದ್ದು ಜನತೆಗೆ ಮನವರಿಕೆಯಾಗಿತ್ತು. ಬಂದ್ ಸಂಪೂರ್ಣ ವಿಫಲವಾಯಿತು.

ಹತಾಶರಾದ ಆರ್ಮುಗಂರ ಬೆಂಬಲಿಗರು ಸಂಘದ ಕಚೇರಿ ಮೇಲೆ ದಾಳಿ, ಕಾಂ| ಆರೋಗ್ಯಸ್ವಾಮಿಯವರ ಕೊಲೆಗೆ ಕಾರಣರಾದರು.

ಸಂಘದ ಅಧ್ಯಕ್ಷ ಕಾಂ|ಸೂರಿಯವರು ಹೇಳಿಕೆಯೊಂದನ್ನು ಹೊರಡಿಸಿ ಘಟನೆಗಳನ್ನು ತೀವ್ರವಾಗಿ ಖಂಡಿಸಿದ್ದಾರೆ. ಕೆ.ಜಿ ಎಫ್.ಗೆ ಭೇಟಿ ನೀಡಿದ ಅವರು ಕಾಂ| ಆರೋಗ್ಯಸ್ವಾಮಿಯವರ ಮನೆಗೆ ಭೇಟಿ ನೀಡಿದ್ದರು. ಪ್ರಚೋದನೆಗೆ ಒಳಗಾಗದೆ ಸಂಘಟನೆಯ ಐಕ್ಯತೆಯನ್ನು ಉಳಿಸಿಕೊಳ್ಳಲು ಅವರು ಮನವಿಮಾಡಿದ್ದಾರೆ.

ಸಿ.ಪಿ.ಐ (ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ| ಎಂ. ಕೆ. ಭಟ್ ಅವರು ಕೆ. ಜಿ. ಎಫ್. ಘಟನೆಗಳನ್ನು ತೀವ್ರವಾಗಿ ಖಂಡಿಸಿ, ಕೊಲೆಪಾತಕಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

○

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154, Prited at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.